## ಅಧ್ಯಾಯ 1

# ಸಭೆಯಲ್ಲಿ ಪಂಗಡಗಳು ಮತ್ತು ಜಗಳಗಳು

ಗ್ರೀಕೋ-ರೋಮನ್ ಲೋಕದಲ್ಲಿ ಜನರು ಪತ್ರಗಳನ್ನು ಬರೆಯುವಾಗ, ಅವರು ಪ್ರಾರಂಭದ ಪದಗಳಲ್ಲಿಯೇ ತಮ್ಮನ್ನು ತಾವು ಪರಿಚಯಿಸಿಕೊಂಡರು. ಅದರೊಟ್ಟಿಗೆ, ಅವರು ತಮ್ಮ ಪತ್ರವು ಏನನ್ನೂ ಒಳಗೊಂಡಿರಬೇಕು ಎಂಬುದಕ್ಕೆ ಮೂಲ ಕಾರ್ಯವನ್ನು ಮಾಡುತ್ತಿದ್ದರು. ಕೆಲವು ವರ್ಣಾತ್ಮಕ ಪದಗಳ ಮೂಲಕ ಪೌಲನು, ಕೊರಿಂಥದವರಿಗೆ ತನ್ನ ಪತ್ರವನ್ನು ಆರಂಭಿಸುತ್ತಾನೆ, ತನ್ನ ಓದುಗರಿಗೆ ಸಮರ್ಥನೆ ಮಾಡಿಕೊಳ್ಳುವಂತೆ ಆಜ್ಞಾರೂಪವಾಗಿ ಮತ್ತು ಅವರೆಡೆಗೆ ತನಗಿರುವ ಪ್ರೀತಿಯ ಕಳಕಳಿಯನ್ನು ವ್ಯಕ್ತಪಡಿಸುತ್ತಾ ಬರೆಯುತ್ತಾನೆ. ದೇವರೊಂದಿಗೆ ಸಂಬಂಧವನ್ನು ಹೊಂದಲು ಸಭೆಯ ಸಮುದಾಯದಲ್ಲಿ ತಮ್ಮ ಪರಸ್ಪರ ಸಂವಹನದ ಮೂಲಕ ಯಾವುದನ್ನು ಅನುಸರಿಸಬೇಕು ಎಂಬುದನ್ನು ಕಾರ್ಯರೂಪದಲ್ಲಿ ತರುವದರ ಕುರಿತಾಗಿ ಹೇಳುತ್ತಾನೆ.

ಕೇವಲ ಕೆಲವೇ ವರ್ಷಗಳ ಪೂರ್ವದಲ್ಲಿ, ಪೌಲನ ಓದುಗರು ಯೇಸು ಕ್ರಿಸ್ತನ ಕುರಿತಾಗಿ; “ದೇವರ ಸಭೆಯ ಕುರಿತಾಗಿ” ಓದಿರಲಿಲ್ಲ ಅದು ಅವರಿಗೆ ಅರ್ಥಹೀನ ಪದವಾಗಿತ್ತು. ಪರಿಸ್ಥಿತಿ ಬದಲಾವಣೆಯಾಗಿದೆ. ಈಗ, ಅಪೊಸ್ತಲರು ಸಭೆಯೊಂದಿಗೆ ಕ್ರೈಸ್ತರನ್ನು ತಮ್ಮ ಹಿಂಜರಿತಗಳನ್ನು ಹೇಗೆ ಜಯಿಸಬೇಕು ಎಂಬುದಕ್ಕೆ ಸಹಾಯ ಮಾಡಲು ತಮ್ಮ ಹಿಂದಿನ ಅನುಭವದ ಮೇಲೆ ಕ್ರಿಸ್ತನಿಗೆ ಸಂಬಂಧಿಸಿದ್ದ ಪಾಪದ ಬಂಧನದಿಂದ ದೊರೆಯುವ ಸ್ವತಂತ್ರದ ಪರಿಣಾಮವಲ್ಲ ಎಂಬುದನ್ನು ಕಂಡುಕೊಂಡಿದ್ದರು. ಕೊರಿಂಥದಲ್ಲಿ ಕ್ರೈಸ್ತರು ಎದುರಿಸಿದ ಕೆಲವು ಹಿಂಜರಿತಗಳು ಅವರ ವಿಶ್ವಾಸಿಗಳಾಗಿ ಒಬ್ಬರಿಗೊಬ್ಬರು ಸಹಾಯ ಮಾಡುವಲ್ಲಿ ಹೊಂದಿರುವ ವಿಫಲತೆಯ ಪರಿಣಾಮವಾಗಿದ್ದವು. ಕೊರಿಂಥದಲ್ಲಿರುವ ಸಭೆಯಲ್ಲಿರುವ ಇತರ ಗಲಭೆಗಳು ಹಗೆತನ ಮತ್ತು ದೇವರಿಲ್ಲ ಎಂದು ತಿಳಿದಿರುವ ಲೋಕದ ಒತ್ತಡದ ಪರಿಣಾಮವಾಗಿದ್ದವು.

## ಪೌಲ ಮತ್ತು ಸೋಸ್ಥೆನನಿಂದ ವಂದನೆಗಳು (1:1-3)

**1ದೇವರ ಚಿತ್ತದಿಂದ ಪೌಲನು ಯೇಸು ಕ್ರಿಸ್ತನ ಅಪಸ್ತನಾಗುವದಕ್ಕೆ ಕರೆಯಲ್ಪಟ್ಟ**
**ಪೌಲನು ಸಹೋದರನಾದ 2ಸೊಸ್ಥೆನನೂ ಕೊರಿಂಥದಲ್ಲಿನ ದೇವರ ಸಭೆಗೆ ಅಂದರೆ**

**ಕ್ರಿಸ್ತೇಸುವಿನಲ್ಲಿ ಪ್ರತಿಷ್ಠಿತರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರಿಗೆ ಮತ್ತು ನಮಗೂ ಸಮಸ್ತ ದೇವಜನರಿಗೂ ಕರ್ತನಾಗಿರುವ ಯೇಸು ಕ್ರಿಸ್ತನ ನಾಮಸ್ಮರಣೆಯನ್ನು ಮಾಡುವವರು [3]ಎಲ್ಲಿದ್ದರೂ ಅವರೆಲ್ಲರಿಗೂ ಬರೆಯುವದೇನಂದರೆ- ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ.**

**ವಚನ 1. ಪೌಲನು** ತನ್ನ ಅನೇಕ ಪತ್ರಿಕೆಗಳಲ್ಲಿ ತನ್ನನ್ನು ತಾನು **ಅಪೊಸ್ತಲನಾಗಿ ಕರೆಯಲ್ಪಟ್ಟವನೆಂದು** ಗುರುತಿಸಿಕೊಳ್ಳುತ್ತಾನೆ. ಫಿಲಿಪ್ಪಿಯವರಿಗೆ ಬರೆದ ಪತ್ರ, ಎರಡೂ ಥೆಸಲೋನಿಕದವರಿಗೆ ಬರೆದ ಪತ್ರ ಮತ್ತು ಫಿಲಿಮೋನನಿಗೆ ಬರೆದ ಪತ್ರಗಳು ಮಾತ್ರ ಅಪವಾದಗಳಾಗಿವೆ. ಅಪೊಸ್ತಲಿಕ ಅಧಿಕಾರದ ಕುರಿತು ಔಪಚಾರಿಕವಾದ ಮಾತು ಸ್ನೇಹಿತರಿಗೆ ಬರೆಯುವ ಪತ್ರದಲ್ಲಿ ನಿರೀಕ್ಷಿತವಲ್ಲ; ಇದು ರೇಗಿಸಲು ನಿರೀಕ್ಷಿತವಾಗಿರಬಹುದು. ಆದುನಿಕ ಹಿನ್ನೆಯಲ್ಲಿ, ವ್ಯಕ್ತಿ M.D. ಅಥವಾ Ph.D. ಮಾಡಿದ್ದಲ್ಲಿ ಅವರ ಮೊದಲನೆಯ ಹೆಸರಿನಿಂದ ಸಂಬೋಧಿಸುತ್ತಾರೆ - ಸಭೆಯಲ್ಲಿ ಬೆಟ್ಟಿಯಾಗುವಾಗ ಯೌವನಸ್ಥರಿಂದಲೂ ಸಹ. ಸ್ನೇಹಿತರು ಪರಸ್ಪರ ಸಂಭಾಷಣೆಯನ್ನು ಮಾಡುವಾಗ ಸಾಮಾನ್ಯವಾಗಿ ಉಪನಾಮದಿಂದ ಕರೆಯುತ್ತಾರೆ. ತನ್ನನ್ನು ತಾನು "ಅಪೊಸ್ತಲ" ನೆಂದು ಕರೆದುಕೊಳ್ಳುವದರ ಮೂಲಕ ಪೌಲನು ತಾನು ಮತ್ತು ತನ್ನ ಓದುಗರ ಮಧ್ಯದಲ್ಲಿ ಸ್ವಲ್ಪ ಅಂತರವನ್ನು ಇಡುತ್ತಾನೆ, ಅವನು ಅವರ ಸ್ನೇಹಿತನು; ಆದರೆ ಉತ್ತಮ ಪಾಲಕನಂತೆ, ಅವನು ಸ್ನೇಹಿತನಿಗಿಂತ ಹೆಚ್ಚಾಗಿದ್ದಾನೆ. ಪೌಲನು ದೇವರಿಂದ ನಿಯೋಜಿಸಲ್ಪಟ್ಟವನು. ಸ್ನೇಹ ಒಂದೆಡೆ, ಅವನಾಗಲಿ ಅಥವಾ ಅವರಾಗಲಿ ಅವನು **ಯೇಸು ಕ್ರಿಸ್ತನ** ಅಪೊಸ್ತಲನೆಂಬುದನ್ನು ಮರೆಯಲಾಗುವದಿಲ್ಲ.

ಪೌಲನು 1 ಕೊರಿಂಥದವರಿಗೆ ಬರೆದ ಪತ್ರದಲ್ಲಿ ತನ್ನ ಅಪೊಸ್ತಲತ್ವದ ಕುರಿತು ಪ್ರತಿವಾದಮಾಡುತ್ತಿಲ್ಲ; ಅವನು ಮತ್ತು ಅವನ ಓದುಗರು ಅವನು ಆತ್ಮೀಕ ನಾಯಕತ್ವವನ್ನು ಕಾರ್ಯರೂಪದಲ್ಲಿ ತರಬೇಕೆಂದು ನೀರಿಕ್ಷಿಸುತ್ತಾರೆ. ಅಪೊಸ್ತಲತನವು ಒಂದು ವೇದಿಕೆಯಾಗಿದೆ ಅದರ ಮೂಲಕ ಆತನು ಕೊರಿಂಥ ಸಭೆಯ ಅವಶ್ಯಕತೆಗಳ ಕುರಿತಾಗಿ ಮಾತನಾಡುತ್ತಾನೆ. ಆದರೆ ಅದು ಸಹ ಲೋಕದಲ್ಲಿ ಯೇಸುವಿನ ಸಂದೇಶವನ್ನು ನೀಡಲು ಒತ್ತಾಯಿಸುವ ಬಲವಾಗಿರುತ್ತದೆ. ಅವನು ಅಪೊಸ್ತಲನೆಂದು ಪ್ರಕಟಿಸಿದ ಸೂಚನೆಗಳು, ಪೌಲನು ತಾನು ಕರ್ತನನ್ನು ನೋಡಿದ್ದೇನೆ ಎಂದು ಹೇಳುತ್ತಾನೆ (9:1; 15:8) ಆದರೆ ಅವನ ಹೇಳಿಕೆ ಇನ್ನೂ ಹೆಚ್ಚಿನದರ ಮೇಲೆ ಕಟ್ಟಲ್ಪಟ್ಟಿದೆ. ಅವನು ದೇವರ ಕಛೇರಿಯಲ್ಲಿ ತನ್ನ ಸ್ವಂತ ಕರೆಯುವಿಕೆಯಿಂದಾಗಿ ನೇಮಿಸಲ್ಪಟ್ಟಿದ್ದಾನೆ (ಗಲಾತ್ಯ 1:15) ಮತ್ತು ಪವಿತ್ರಾತ್ಮನ ಉಪಸ್ಥಿತಿಯ ಮೂಲಕ ಸಿದ್ದವಾಗಿದ್ದಾನೆ (1 ಕೊರಿಂಥ 7:40; ಗಲಾತ್ಯ 3:2). ವಿಶೇಷವಾಗಿ ಕೊರಿಂಥದವರಿಗೆ, ಪೌಲನ ಅಪೊಸ್ತಲತೆ ಸ್ಪಷ್ಟವಾಗಿತ್ತು. ಆತನು ಅವರನ್ನು ಕ್ರಿಸ್ತನ ಬಳಿಗೆ ಕರೆದೊಯ್ದಿದನು, ಮತ್ತು ಆತನು ಆತ್ಮೀಕ ಆಶೀರ್ವಾದಗಳನ್ನು ಅವರಿಗೆ ನೀಡಿದನು (2 ಕೊರಿಂಥ 3:2, 3).

ಪೌಲನ ಪ್ರಸ್ತಾವನೆಯ ಪದಗಳು ತನ್ನ ಓದುಗರಿಗೆ ಅವನು ತನಗೆ ಕೊಡಲ್ಪಟ್ಟ ಅಪೊಸ್ತಲತ್ವದ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಸಿದ್ಧ ಎಂದು ಹೇಳುತ್ತಾನೆ. ಅವನು ಎಲ್ಲರಿಂದ ಉದಾಸೀನಕ್ಕೆ ಒಳಗಾಗುವದು ನಾಯಕತ್ವಕ್ಕೆ ತೆರಬೇಕಾದ ಬೆಲೆ ಎಂದಿದ್ದರೆ

ತಾನು ಅದಕ್ಕೂ ಸಿದ್ಧ ಎಂದು ಹೇಳುತ್ತಾನೆ. ಅವರು ಅವನು ದೇವರೊಂದಿಗೆ ದೈವೀಕವಲ್ಲದ ಗುಣಲಕ್ಷಣದ ವಿರೋಧವಾಗಿ ಅಥವಾ ಕ್ರೈಸ್ತ ಅರಿಕೆಯ ವಿರೋಧವಾಗಿ ಯಾವುದೇ ರೀತಿಯ ಸಂಧಾನದಲ್ಲಿ ನಿಲುವನ್ನು ತೆಗೆದುಕೊಳ್ಳಲು ಸಿದ್ಧನಿದ್ದಾನೆಂದು ಅವರು ನಿರೀಕ್ಷಿಸಿದ್ದರು. ಕೆಳಗಿನ ಈ ಪತ್ರವು ಸ್ನೇಹದ ಪತ್ರಕ್ಕಿಂತ ಹೆಚ್ಚಾಗಿ ಔಪಚಾರಿಕವಾಗಿದೆ. ತನ್ನ ಜೊತೆ ಕೆಲಸದವರಿಗೆ ತಿಮೋಥೆಯ ಮತ್ತು ತೀತನಿಗೆ, ಬರೆದ ಪತ್ರಗಳಲ್ಲಿ ಸಹ, ಪೌಲನು ತನ್ನನ್ನು ತಾನು “ಅಪೊಸ್ತಲ” ಎಂದು ಗುರುತಿಸಿಕೊಳ್ಳುತ್ತಾನೆ. ತನ್ನ ವಯಕ್ತಿಕ ಸ್ನೇಹಿತರುಗಳಿಗೆ ಬರೆದ ಈ ಪತ್ರಗಳ ಮೂಲಕ ತನ್ನ ಸೂಚನೆಗಳು ಮತ್ತು ಎಚ್ಚರಿಕೆಗಳು ಸೌವರ್ತಿಕರಿಗೆ ಮಾರ್ಗದರ್ಶನವಾಗಿರಬೇಕೆಂದು ಪೌಲನು ಅಪೇಕ್ಷಿಸುತ್ತಾನೆ.

**ಸೋಸ್ಥನನು** ವಂದನೆ ಹೇಳಲು ಪೌಲನೊಂದಿಗೆ ಸೇರಿಕೊಳ್ಳುತ್ತಾನೆ. ರೋಮಾಪುರದವರಿಗೆ ಬರೆದ ಪತ್ರ, ಗಲಾತ್ಯದವರಿಗೆ ಬರೆದ ಪತ್ರ, ಎಫೆಸದವರಿಗೆ ಬರೆದ ಪತ್ರ, ತಿಮೋಥಿಗೆ ಬರೆದ ಎರಡೂ ಪತ್ರಗಳು ಮತ್ತು ತೀತನಿಗೆ ಬರೆದ ಪತ್ರದಲ್ಲಿ ಪೌಲನು ಮಾತ್ರ ಸಹೋದರರಿಗೆ ವಂದನೆ ತಿಳಿಸುತ್ತಾನೆ. 2 ಕೋರಿಂಥದವರಿಗೆ ಬರೆದ ಪತ್ರ, ಫಿಲಿಪ್ಪಿಯವರಿಗೆ ಬರೆದ ಪತ್ರ, ಕೊಲೆಸ್ಸೆಯವರಿಗೆ ಬರೆದ ಪತ್ರ ಮತ್ತು ಫಿಲಿಮೋನನಿಗೆ ಬರೆದ ಪತ್ರದಲ್ಲಿ ಪೌಲನು ತಿಮೋಥೆಯನೊಂದಿಗೆ ವಂದನೆ ತಿಳಿಸುತ್ತಾನೆ, ಶೀಲ ಮತ್ತು ತಿಮೋಥೆಯ ಅಪೊಸ್ತಲನೊಂದಿಗೆ ಇದ್ದರು ಎಂದು ಹೇಳಲಾಗುತ್ತದೆ. 1 ಕೊರಿಂಥದವರಿಗೆ ಬರೆದ ಪತ್ರದಲ್ಲಿ ಮಾತ್ರ ಸೋಸ್ಥನನು ಪೌಲನೊಂದಿಗೆ ಜೊತೆಯಾಗುತ್ತಾನೆ.

“ಸೋಸ್ಥೆನನು” ಸ್ವಲ್ಪ ಮಟ್ಟಿಗೆ ವಿರಳ ಹೆಸರು, ಗ್ರೀಕ್‌ರಲ್ಲಿ ಸಹ. ಇದು ಹೊಸ ಒಡಂಬಡಿಕೆಯಲ್ಲಿ, ಇಲ್ಲಿ ಮತ್ತು ಅ.ಕೃ. 18:17ರಲ್ಲಿ ಮಾತ್ರ ಕಂಡುಬರುತ್ತದೆ. ತನ್ನಿಂದ ತಾನೇ ಒಂದು ಪ್ರಶ್ನೆಯು ಉದ್ಭವಿಸುತ್ತದೆ: ಕೊರಿಂಥದವರಿಗೆ ವಂದನೆಯನ್ನು ಕಳುಹಿಸಿದ ಸೋಸ್ಥನನು “ದೇವಾಲಯದ ನಾಯಕನೋ [KJV ಪ್ರಕಾರ ಮುಖ್ಯ ಆಡಳಿತಗಾರ]” ಕೊರಿಂಥದಲ್ಲಿ ಅ.ಕೃ. 18:17ರಲ್ಲಿ ನ್ಯಾಯಸ್ಥಾನದ ಮುಂದೆ ಹೊಡೆತ ತಿಂದವನು ಇವನೋ? ಒಂದು ವೇಳೆ ಹಾಗಿದ್ದಲ್ಲಿ, ಕೊರಿಂಥದವನಾದ ಸೋಸ್ಥನನು ಎಫೆಸದಲ್ಲಿ ಏನು ಮಾಡುತ್ತಿದ್ದನು? ಖಂಡಿತವಾಗಿಯು ಅವನು ಕೊರಿಂಥದಿಂದ ಪೌಲನ ವೈರಿಯಾಗಿ ಸಭೆಯಲ್ಲಿಯ ಪ್ರಶ್ನೆಗಳೊಂದಿಗೆ ಎಫೆಸೆಗೆ ಬಂದಿರಲಿಕ್ಕಿಲ್ಲ. ಕನಿಷ್ಠ ಪಕ್ಷ, ಅಪೊಸ್ತಲನು ಕೊರಿಂಥದಿಂದ ಪತ್ರದೊಂದಿಗೆ ಬಂದ ಜನರಲ್ಲಿ ಈತನ ಉಲ್ಲೇಖವಿಲ್ಲ (1 ಕೊರಿಂಥ 16:17). ಇನ್ನೂ ಮುಂದಕ್ಕೆ, ಪತ್ರದಲ್ಲಿ ಮುಂದಕ್ಕೆ ಈತನನ್ನು ಉಲ್ಲೇಖಿಸಿಲ್ಲ. ಬಹುಶಃ ಅವನು ಅದೇ ಮನುಷ್ಯನಾಗಿರಲಿಕ್ಕಿಲ್ಲ; ಆದರೆ ಎಫೆಸದಲ್ಲಿರುವ ಎಲ್ಲಾ ಕ್ರೈಸ್ತರ ಮಧ್ಯದಲ್ಲಿ ಸೋಸ್ಥೆನನು ಮಾತ್ರ ವಂದನೆಯಲ್ಲಿ ಜೊತೆಯಾಗಬೇಕೋ ಎಂಬುದು ನಾವು ಕೇಳ ಬೇಕಾದ ಪ್ರಶ್ನೆಯಾಗಿದೆ.

ನಾವೇ ಊಹಿಸಿಕೊಳ್ಳೋಣ, ನಮಗೆ ತಿಳಿಯದೇ ಇರುವ ಕಾರಣಗಳಿಂದಾಗಿ, ಕೊರಿಂಥದವನಾದ ಸೋಸ್ಥೆನನು (ಅ.ಕೃ. 18:17) ಎಫೆಸೆಗೆ ವಲಸೆ ಹೋಗಿರಬಹುದು. ಖಂಡಿತವಾಗಿಯೂ ಅವನು ಕೊರಿಂಥದಲ್ಲಿರುವ ಯೆಹೂದ್ಯ ಸಮುದಾಯದ ಪ್ರಾಮುಖ್ಯ ವ್ಯಕ್ತಿಯಾಗಿರಬಹುದು. ಸಭಾಮಂದಿರದ ಅಧ್ಯಕ್ಷನಾದ ಕ್ರಿಸ್ಪನು, ಯೆಸುವನ್ನು ಕ್ರಿಸ್ತನೆಂದು ಅರಿಕೆ ಮಾಡಿರಬಹುದು, ಪಟ್ಟಣದಲ್ಲಿರುವ ಯೆಹೂದ್ಯರು ನಾಯಕನಿಲ್ಲದೆ ಉಳಿದಿರಬಹುದು (ಅ.ಕೃ. 18:8). ಸೋಸ್ಥೆನನು ಮುಂದಕ್ಕೆ ಹೆಜ್ಜೆಯನ್ನಿಟ್ಟಿರಬಹುದು. ಬಹುಶಃ ಯೆಹೂದ್ಯರು

ರೋಮನ್ ನ್ಯಾಯಾಸನದ ಎದುರಿಗೆ ಕ್ರೈಸ್ತರೊಂದಿಗೆ ಸ್ಪಷ್ಟವಾದ ಒಡಕನ್ನು ತೋರಿರಬಹುದು. ಅವನು ಅಧಿಕಾರಿಗಳು ಕ್ರೈಸ್ತರನ್ನು ಯೆಹೂದ್ಯರೆಂದು ನೋಡಬಾರದು; ಸಮಸ್ಯೆಯನ್ನು ಮಾಡುವವರು ಲೋಕವನ್ನು ಪ್ರೇರೆಪಿಸುವವರು ಮತ್ತು ರೋಮನ್ ನಿಯಮದ ಪ್ರಕಾರ ಯೆಹೂದ್ಯರಿಗೆ ಯಾವುದೇ ಸ್ಥಾನ ಅಥವಾ ಸುರಕ್ಷಿತತೆಯನ್ನು ಕೊಡಬಾರದು ಎಂದು ನಿವೇದಿಸಿರಬಹುದು. ಆತನ ದೃಷ್ಟಿಯಲ್ಲಿ ಕ್ರೈಸ್ತರು ಯೆಹೂದ್ಯರನ್ನು ಮತ್ತು ಗ್ರೀಕ್‌ರನ್ನು “ಧರ್ಮಶಾಸ್ತ್ರಕ್ಕೆ ವಿರುದ್ಧವಾದ ದೇವರನ್ನು ಆರಾಧಿಸಲು” ಪ್ರೇರೆಪಿಸಲು ಪ್ರಯತ್ನಿಸುತ್ತಿರುವವರಾಗಿದ್ದರು (ಅ.ಕೃ. 18:13). ಸೋಸ್ಥೆನನು, ಇದಕ್ಕೆ ಉತ್ತರವಾಗಿ “ಯೆಹೂದ್ಯರಾದ ನಾವು ಅವರನ್ನು ಅಲ್ಲಗಳೆಯುತ್ತೇವೆ. ಅವರು ನಮ್ಮಗೇ ಏನು ಅಲ್ಲ. ರೋಮನ್ನರಾದ ನೀವು ಅವರನ್ನು ಬೇರೆ ಯಾವುದಾದರೂ ಅಪರಿಚಿತ ಧರ್ಮದವರನ್ನು ನಡೆಸಿಕೊಳ್ಳುವಂತೆ ನೀವು ಬಯಸಿದಂತೆ ನಡೆಸಿಕೊಳ್ಳಿರಿ” ಎಂದು ಪ್ರಕಟಿಸಿದನು.

ಸೋಸ್ಥನನು ನಿರೀಕ್ಷಿಸಿದಂತೆ ಗಲ್ಲಿಯೋನನ ಮುಂದೆ ನಡೆದ ವಿಚಾರಣೆಯಿಂದ ಬದಲಾವಣೆಯಾಗಲಿಲ್ಲ. ಅಪೊಸ್ತಲರ ಕೃತ್ಯದಲ್ಲಿ ಸಂಪೂರ್ಣವಾಗಿ ವಿವರಿಸದೇ ಇರುವದಕ್ಕೆ ಕಾರಣ, ನ್ಯಾಯಾಸನದ ತೀರ್ಪು ಮುಕ್ತಾಯವಾದ ನಂತರ ಎದ್ದು ನಿಂತ ಜನರು ದೇವಾಲಯದ ಸಭಾಧ್ಯಕ್ಷನನ್ನು ಮುತ್ತಿಗೆ ಹಾಕಿ ಹೊಡೆದರು, ಬಹುಶಃ ಬಹಳವಾಗಿ ಹೊಡೆದರು. ಹೊಡೆಯುವ ಈ ಕಾರ್ಯವು ಆಸಕ್ತಿಯಿಲ್ಲದ ದೇಶಾಧಿಪತಿಯ ಕಣ್ಣು ಕೆಳಗೆ ನಡೆಯಿತು. ಈ ವಿಷಯದ ಕುರಿತಾಗಿ ಅವನ ನಿರ್ಧಾರದಿಂದ, ಬಹುಶಃ ಗಲ್ಲಿಯೋನನು ರೋಮನ್ನರ ನ್ಯಾಯಸಮ್ಮತವಾದ ಕಾನೂನಿಗೆ ಕೊಡುಗೆಯನ್ನು ನೀಡಿದನು. ಅವರು ಕೆಲವು ವರ್ಷಗಳ ಕಾಲ ಯೆಹೂದ್ಯರನ್ನು ಮತ್ತು ಕ್ರೈಸ್ತರನ್ನು ಒಟ್ಟಾಗಿ ದೇವರ ಆರಾಧಕರೆಂದು ಕರೆದರು. ಹಾಗೂ, ಅ.ಕೃ. 18:17ಬ ಹೀಗೆ ಹೇಳುತ್ತದೆ, “ಗಲ್ಲಿಯೋನನು ಅವುಗಳಲ್ಲಿ ಒಂದನ್ನೂ ಲಕ್ಷಕ್ಕೆ ತರಲಿಲ್ಲ.”

ಗಲ್ಲಿಯೋನನ ಎದುರಿನಲ್ಲಿ ದುರ್ದೈವದಿಂದ ಅವನು ಹೊಡೆತ ತಿಂದಮೇಲೆ ಸೋಸ್ಥೆನನು ಕೊರಿಂಥದಲ್ಲಿ ಮೆಚ್ಚಿಕೆಯನ್ನು ಕಳೆದುಕೊಂಡ ಹಾಗಾಯಿತು. ಬಹುಶಃ ಇದು ಅವನು ಎಫೆಸೆಗೆ ಹೋಗಲು ಕಾರಣವಾಗಿರಬಹುದು. ಎಫೆಸೆಯಲ್ಲಿ ಅವನು ಮತ್ತೆ ಪೌಲನನ್ನು ಸಂಧಿಸಿದನು, ಬಹುಶಃ ಅವನ ಸ್ವಂತ ನೇತೃತ್ವದಿಂದಾಗಿ. ಅವನು ಅಪೊಸ್ತಲನನ್ನು ಆಲಿಸಿದನು ಮತ್ತು ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಡೆದನು. ಸೋಸ್ಥನನು ಕ್ರಿಸ್ತನನ್ನು ಕರ್ತನೆಂದು ಅಪ್ಪಿಕೊಂಡನು. ಕ್ರಿಸ್ತನಲ್ಲಿರುವ ನಂಬಿಕೆಯನ್ನು ಅರಿಕೆ ಮಾಡುವದರ ಮೂಲಕ ದೇವಾಲಯದ ಎರಡನೆಯ ಅಧಿಕಾರಿಯಾದನು.

ಸೋಸ್ಥನನು ವಂದನೆಯನ್ನು ಸಲ್ಲಿಸುವಾಗ ಪೌಲನೊಂದಿಗೆ ಜೊತೆಗೂಡಿದನು, ಆದರೆ 1 ಕೊರಿಂಥದವರಿಗೆ ಬರೆದ ಪತ್ರಿಕೆಯನ್ನು ಬರೆಯುವಲ್ಲಿ ಅವನ ಪಾತ್ರವೇನು ಇಲ್ಲ ಎಂಬುದು ಅಷ್ಟೇ ಸ್ಪಷ್ಟ. ಅವರ ಹೆಸರಗಳು ಒಟ್ಟಾಗಿ ಕಾಣಿಸಿಕೊಂಡಿರುವದು ಕೊರಿಂಥದಲ್ಲಿರುವ ಕ್ರೈಸ್ತರಿಗೆ ಅವರು ಯಶಸ್ಸಿನ ಅಂದೋಲನದಲ್ಲಿ ಮುಂದೂತರಾಗಿದ್ದಾರೆ ಎಂದು ತಿಳಿದುಬರುತ್ತದೆ (ರೋಮ 1:8-10; ಕೊಲಸ್ಸ 1:6; 1ಪೇತ್ರ 5:9 ನೋಡಿರಿ). ಯಾವ ವಿರೋಧವು ದೇವರ ಉದ್ದೇಶವನ್ನು ತಡೆಯಲಾರದು. ಆತನ ಚಿತ್ತವೇ ನೆರವೇರುವದು. ಪೌಲನು ಸೋಸ್ಥೆನನ ಹೆಸರಿನ ನಂತರ ನಮ್ಮ ಸಹೋದರ ಎಂಬ ಪದವನ್ನು ಸೇರಿಸಿರಬಹುದು ಯಾಕಂದರೆ ಕೊರಿಂಥದವರು ತಮ್ಮ ಹಳೆಯ ವೈರಿಯಿಂದ

ವಂದನೆಗಳನ್ನು ನಿರೀಕ್ಷಿಸಿರಲಿಲ್ಲ. ಅವನ ರೂಪಾಂತರ ಸ್ವಾಗತಾರ್ಹ ಆಶ್ಚರ್ಯವಾಗಿತ್ತು.

**ವಚನ 2.** ಈ ಪತ್ರವನ್ನು ಪೌಲನು **ಕೊರಿಂಥದಲ್ಲಿರುವ ದೇವರ ಸಭೆಗೆ** ಸಂಬೋಧಿಸಿರಬಹುದು. "ಸಭೆ" ಎಂಬ ಪದವು LXX.[2] ರಿಂದ ಆಯ್ದುಕೊಳ್ಳಲಾಗಿದೆ. ಲೋಕದಲ್ಲಿ ಇದು ಪಟ್ಟಣದ ಸಮೂಹಕ್ಕೆ ಸಾಮಾನ್ಯ ಪದವಾಗಿದೆ ಅಲ್ಲಿ ನಾಗರಿಕರು ರಾಜ್ಯದ ವಿಷಯಗಳನ್ನು ನಿರ್ಧರಿಸುತ್ತಾರೆ (ಅ.ಕೃ. 19:39). "ಸಂಘ" ಎಂಬ ಪದವನ್ನು ವಿಚಾರದಿಂದ ಪ್ರತ್ಯೇಕಿಸುವದು ಗ್ರೀಕ್ ಓದುಗರಿಗೆ ಕಠಿಣವಾಗಿರಬಹುದು. ಪೌಲನು ವಿಶ್ವಾಸಿಗಳಿಗೆ "ಸಭೆ" ಎಂಬ ಪದವನ್ನು ಉಪಯೋಗಿಸುವಾಗ, ಇದರ ಅರ್ಥ ಕ್ರೈಸ್ತರು ಒಟ್ಟಾಗಿ ಸೇರಿಬರುತ್ತಾರೆ. ಸಭೆಯು ಏನೇ ಮಾಡಲಿ ಅದು ಸಂಘ. ಒಟ್ಟಾಗಿ ಜೀವಿಸುವದರಿಂದ ಸಮುದಾಯದ ಜೀವಿತಕ್ಕೆ ಬೆಂಬಲ ದೊರೆಯುತ್ತದೆ. ಕ್ರೈಸ್ತರು ದೇವರ ಸಾನಿಧ್ಯದಲ್ಲಿ ಒಟ್ಟಾಗಿ ಸೇರಿ ಬಂದು ಸ್ತುತಿ ಯಜ್ಞವನ್ನು ಅರ್ಪಿಸುತ್ತಾರೆ. ಅವರು ಒಬ್ಬರಿಗೊಬ್ಬರು ಬೆಂಬಲವನ್ನು, ಮರು ದೃಢೀಕರಣವನ್ನು ಮತ್ತು ಒಂದೇ ರೀತಿಯ ನಂಬಿಕೆಯ ವೃತ್ತಿಯಲ್ಲಿ ಪ್ರೋತ್ಸಾಹವನ್ನು ಮತ್ತು ಎಲ್ಲರೂ ಒಂದೇ ರೀತಿಯ ಜೀವನ ವಿಧಾನವನ್ನು ಅಳವಡಿಸಿಕೊಳ್ಳುತ್ತಾರೆ (ಇಬ್ರಿಯ 10:23-25).

ಅಪೊಸ್ತಲನು ತನ್ನ ಓದುಗರ ನಂಬಿಕೆಯ ವೃತ್ತಿ ಮತ್ತು ಅವರ ನಡತೆ ಅವರು ತಮ್ಮ ಕುರಿತು ಏನು ಯೋಚಿಸುತ್ತಾರೋ ಅದರ ಮೇಲೆ ನಿರ್ಭರವಾಗಿರುತ್ತದೆಂದು ಪೌಲನಿಗೆ ತಿಳಿದದೆ. "ಅವರು ದೇವರ ಆಲಯವಾಗಿದ್ದಾರೆ"; ಅವರು ಪೌಲನಂತೆ **ಕ್ರಿಸ್ತನ ಯೇಸುವಿನಲ್ಲಿ ಶುದ್ದೀಕರಿಸಲ್ಪಟ್ಟವರಾಗಿದ್ದಾರೆ**. ದೇವರು ಅವರನ್ನು ತನ್ನ ಹೆಸರನ್ನು ಧರಿಸಿಕೊಳ್ಳಲು ಕರೆದಿರುವದರಿಂದ ಅವರು ಶುದ್ದೀಕರಿಸಲ್ಪಟ್ಟವರಾಗಿದ್ದಾರೆ. "ಶುದ್ದೀಕರಣವು ನಾವು ಹೊಂದಿಕೊಳ್ಳಬೇಕಾದ ನಿರ್ಧಿಷ್ಟವಾದ ನೈತಿಕ ಗುಣಲಕ್ಷಣಗಳನ್ನು ಒಳಗೊಂಡಿರುವದಿಲ್ಲ ಆದರೆ ದೇವರೊಂದಿಗೆ ನಿರ್ಧಿಷ್ಟವಾದ ನಮಗೆ ನೀಡಿರುವ ಸಂಬಂಧವನ್ನು ಹೊಂದಿರುತ್ತದೆ."[3] ಶುದ್ದೀಕರಿಸಲ್ಪಡುವದು ಎಂದರೆ ಪರಿಶುದ್ಧರಾಗಿರುವದು. ಪೌಲನು ಉಪಯೋಗಿಸಿದ ಈ ಪದ ವರ್ಣನೆಗಿಂತ ಹೆಚ್ಚಾಗಿದೆ. ಆತನು ಈ ಕ್ರೈಸ್ತರಿಗೆ ದೇವರು ಅವರನ್ನು ಯಾವ ಉದ್ದೇಶಕ್ಕಾಗಿ ಮಾಡಿದ್ದಾನೋ ಅದರಂತೆ ಇರಲು ಸವಾಲನ್ನು ನೀಡುತ್ತಿದ್ದಾನೆ. ಅವರ ಜೀವಿತಗಳು ಅವರನ್ನು ಅವರು ಲೋಕದಲ್ಲಿದ್ದರೂ ಲೋಕದವರಲ್ಲ ಎಂದು ಪ್ರಕಟಿಸುವ ಪರಿಶುದ್ದತೆಯನ್ನು ಪ್ರತಿಫಲಿಸಬೇಕು. ಈಗಾಗಲೇ, ಈ ಪತ್ರದಲ್ಲಿರುವ ಪೌಲನ ಪತ್ರದಲ್ಲಿರುವ ಪದಗಳು ಕ್ರಿಸ್ತನ ದೇಹದ ಅವಶ್ಯವಿರುವ ಐಕ್ಯತೆಯನ್ನು ದೃಢೀಕರಿಸುತ್ತವೆ. ಕೊರಿಂಥದಲ್ಲಿರುವ ಸಭೆಯ ಪಂಗಡಗಳು ಅವರು ಒಂದೇ ದೇಹವಾಗಿ ಇರಬೇಕು ಎಂಬ ಉದ್ದೇಶಕ್ಕೆ ಅಪಮಾನ ಮಾಡುವವರಾಗಿದ್ದಾರೆ.

ಅದೇ ಸಮಯದಲ್ಲಿ 1 ಕೊರಿಂಥದವರಿಗೆ ಬರೆದ ಪತ್ರದಲ್ಲಿ ಸಮಸ್ಯೆಗಳು ಮತ್ತು ಕಳಕಳಿಗಳು ವಿಶಿಷ್ಟವಾಗಿ ಕೊರಿಂಥದಲ್ಲಿರುವ ಸಭೆಗೆ ನಿರ್ದೇಶಿಸಲಾಗಿವೆ, ಕೊರಿಂಥದಲ್ಲಿರುವ ಕ್ರೈಸ್ತರಿಗೆ ತಮ್ಮ ಸಮುದಾಯವು ಜಾಗತಿಕ ಅನ್ಯೋನ್ಯತೆಯಲ್ಲಿ ಭಾಗವಹಿಸಿದೆ ಎಂಬ ತಿಳುವಳಿಕೆ ಇರುವದು ಅವಶ್ಯವಾಗಿದೆ. ಅದು ಕೊರಿಂಥದಲ್ಲಿರುವ ಸಭೆಯಾಗಿರಬಹುದು ಅಥವಾ ಎಫೆಸದಲ್ಲಿರುವ ಸಭೆಯಾಗಿರಬಹುದು ಅಥವಾ ಇನ್ನ್ಯಾವುದಾದರೂ ಪಟ್ಟಣದ ಸಭೆಯಾಗಿರಬಹುದು, ವಿಶ್ವಾಸಿಗಳು ತಮ್ಮನ್ನು ತಾವು ಎಲ್ಲರೊಂದಿಗೆ, **ಎಲ್ಲಾ ಸ್ಥಳಗಳಲ್ಲಿ ನಮ್ಮ ಕರ್ತನಾದ, ಅವರ ಮತ್ತು ನಮ್ಮ ಕರ್ತನಾದ**

**ಯೇಸು ಕ್ರಿಸ್ತನ ನಾಮದಲ್ಲಿ** ಹೆಸರಿಸಬೇಕು. ಅವರು ದೇವರ ವಿಶಾಲವಾದ ವಿಮೋಚನೆಯ ಕಾರ್ಯದಿಂದಾಗಿ ಸೆಳೆಯಲ್ಪಟ್ಟವರು ಕೊಡುಗೆಯನ್ನು ನೀಡುವವರು ಆಗಿದ್ದಾರೆ. ಕೊರಿಂಥದಲ್ಲಿರುವ ಕ್ರೈಸ್ತರು ಸಮಯ ಮತ್ತು ಸ್ಥಳದಿಂದಾಚೆಗೆ ವಿಸ್ತರಿಸಲ್ಪಟ್ಟ ತಮ್ಮ ನಿಯೋಗವನ್ನು, ರಕ್ಷಣೆಯ ಸಂದೇಶದ ಹಿನ್ನೆಲೆಯಲ್ಲಿ ತಿಳಿದುಕೊಳ್ಳುವದು ಅವಶ್ಯವಾಗಿದೆ. ಯೇಸು ಕ್ರಿಸ್ತನು, ಪ್ರತಿಯೊಂದು ಸ್ಥಳದಲ್ಲಿ ಎಲ್ಲಾ ವಿಶ್ವಾಸಿಗಳ ಕರ್ತನಾಗಿ, ನಮ್ಮ ದೇವರಾಗಿರುವಂತೆ "ಅವರ ದೇವರಾಗಿದ್ದಾನೆ."

**ವಚನ 3.** ಅಪೊಸ್ತಲರ ಪ್ರಾರ್ಥನೆ ಮತ್ತು ಕೊರಿಂಥದವರ ಸಭೆಯ ವಿಷಯದಲ್ಲಿ ಪ್ರೀತಿಪೂರ್ವಕವಾದ ಸದ್ಭಾವನೆಯನ್ನು ಸಂಪ್ರದಾಯಿಕವಾದ ಗ್ರೀಕ್ ಪದಗಳಲ್ಲಿ ವಂದನೆಗಳನ್ನು ವ್ಯಕ್ತಪಡಿಸಲಾಗಿದೆ, **ಕೃಪೆ ಮತ್ತು ಸಮಾಧಾನ ನಿಮ್ಮೊಂದಿಗಿರಲಿ**, ಎಂದು ಆತನು ಬರೆಯುತ್ತಾನೆ. ಈ ಪದಗಳನ್ನು ಹಗುರವಾಗಿ ತೆಗೆದುಕೊಳ್ಳಲಾಗುವದಿಲ್ಲ; ಅವು ಕೇವಲ ಕಾಟಾಚಾರದ ವಂದನೆಗಳಲ್ಲ. ನಂಬಿಕೆಯಿಂದ ಕಟ್ಟಲ್ಪಟ್ಟ ಪೌಲನು ಮತ್ತು ಕೊರಿಂಥ ಸಭೆಯವರು ಒಟ್ಟಾಗಿದ್ದಾರೆ. ಅವರು ಒಂದೇ ಜನರಾಗಿದ್ದಾರೆ ಯಾಕಂದರೆ ನಮ್ಮ **ತಂದೆಯಾದ ದೇವರ ಮತ್ತು ಕರ್ತನಾದ ಯೇಸು ಕ್ರಿಸ್ತನು** ಅವರನ್ನು ಸೃಷ್ಟಿಸಿದ್ದಾನೆ.

ಸರಿಯಾದ ಸ್ಥಳದಲ್ಲಿ ದೇವರು ನಿರ್ಮಿಸಿದ ಮೇರೆಯು ಅವರನ್ನು ಅವರಿಸಿರುವ ಸ್ಥಳದಲ್ಲಿರುವ ಅವಿಶ್ವಾಸಿಗಳ ಸಮೂಹದಿಂದ ಪ್ರತ್ಯೇಕಿಸಿದೆ. ಕೊರಿಂಥದಲ್ಲಿರುವ ಕ್ರೈಸ್ತರು ಕೃಪೆ ಮತ್ತು ಸಮಾಧಾನ ತಮಗಾಗಿ ಎಂಬುದನ್ನು ಅರಿತಿದ್ದರು. ದೇವರ ತಂದೆತನ ಮತ್ತು ಯೇಸು ಕ್ರಿಸ್ತನ ಒಡೆತನ ಪೌಲನಿಗೆ ಮುಖ್ಯ ತತ್ವಗಳಾಗಿವೆ. ಗ್ರೀಕ್ ಸಾಹಿತ್ಯದಲ್ಲಿ ಜೆಸ್ಸುವನ್ನು ದೈವೀಕ ತಂದೆಯಾಗಿ ದೃಷ್ಟಿಸಲಾಗುತ್ತದೆ, ಕನಿಷ್ಠ ಕೆಲವು ಸಂದರ್ಭಗಳಲ್ಲಿ; ಆತನ ತಂದೆತನ ಹೆಚ್ಚಾಗಿ ಓಲಂಪಿಯನ್ ವಿಶ್ವದೇವತಾ ತತ್ವದೋಪಾದಿಯಲ್ಲಿ ಕಂಡುಬರುತ್ತದೆ ಇದು ಪೂರ್ಣವ್ಯಾಪ್ತಿಯ ಮುಖ್ಯ ವಿಷಯವಲ್ಲ. ಹಳೆ ಒಡಂಬಡಿಕೆಯಲ್ಲಿಯೂ ಸಹ ದೇವರ ತಂದೆತನ, ಅದು ಸಂಪೂರ್ಣವಾಗಿ ಕಾಣದೇಹೊಗಿಲ್ಲದೇ ಇರುವಾಗಲೂ ಪೂರ್ಣವ್ಯಾಪ್ತಿಯ ಮುಖ್ಯ ವಿಷಯವಲ್ಲ (ಹೋಶೇಯ 11:1-4 ನೋಡಿರಿ). ಯೇಸು ಮತ್ತು ಪೌಲ ಇಬ್ಬರೂ ವಿಶ್ವಾಸಿಗಳು ತನ್ನ ಜನರಿಗಾಗಿರುವ ದೇವರ ಪ್ರೀತಿಯನ್ನು ಮತ್ತು ಅವರ ಉತ್ತರದಾಯಿತ್ವವನ್ನು ತಿಳಿದುಕೊಳ್ಳುವದಕ್ಕಾಗಿ ಉಪಯೋಗಿಸಿದ ರೂಪಕಾಲಂಕಾರವಾಗಿದೆ ಎಂಬುದನ್ನು ಕಂಡುಕೊಂಡಿದ್ದಾರೆ. ತಂದೆಯಾದ ದೇವರು ಮತ್ತು ಕರ್ತನಾದ ಯೇಸು ದೈವತ್ವದಲ್ಲಿ ಸಮಾನ ಪಾತ್ರವನ್ನು ವಹಿಸಿದ್ದಾರೆ. ಕ್ರೈಸ್ತರು ಅವರ ದ್ವೈತಸ್ಥಿತಿಯಲ್ಲಿ ಮತ್ತು ಐಕ್ಯತೆಯಲ್ಲಿ ಕೃಪೆ ಮತ್ತು ಸಮಾಧಾನವನ್ನು ಕಂಡುಕೊಂಡಿದ್ದಾರೆ.

## ಎಲ್ಲಾಸಂಗತಿಗಳಲ್ಲಿ ದೇವರಿಂದ ಸಮೃದ್ಧಿಯನ್ನು ಹೊಂದಿದ್ದಾರೆ (1:4-9)

ಗ್ರೀಕೋ ರೋಮನ್ ಲೋಕದಲ್ಲಿ ಅಲಂಕಾರಿಕ ಭಾಷೆಯ ಶಾಲೆಗಳು ವಾಕ್‌ಪಟುಗಳು ಮತ್ತು ಲೇಖಕರಿಗೆ ಒಂದು ಸಂಬೋಧನೆಯನ್ನು ತಮ್ಮ ಮತ್ತು ತಮ್ಮ ಶ್ರೋತೃಗಳ ಮಧ್ಯದಲ್ಲಿ ಸೇತುವೆಯನ್ನು ನಿರ್ಮಿಸುವ ಪದಗಳಿಂದ ಪ್ರಾರಂಭಿಸಬೇಕು ಎಂದು ಬೋಧಿಸುತ್ತಾರೆ. ಒಬ್ಬ ಸುಶಿಕ್ಷಿತ ಮನುಷ್ಯನು ತಾನೆ, ಪೌಲ, ತನ್ನ ಸಂಪ್ರದಾಯಿಕ ಕಲಿಯುವಿಕೆಯನ್ನು ಸಂಪರ್ಕಿಸಲು ಸಹಾಯಕವಾಗುವಂತೆ ತೆಗದುಕೊಂಡನು. ಔಪಚಾರಿಕ

ವಂದನೆಗಳ ನಂತರ, ಅಪೊಸ್ತಲನು ಕೊರಿಂಥ ಸಭೆಗೆ ದೇವರ ತಮಗೆ ನೀಡಿದ ಆಶೀರ್ವಾದಗಳನ್ನು ಜ್ಞಾಪಿಸುತ್ತಾನೆ:

**[4]ಕ್ರಿಸ್ತ ಯೇಸುವಿನಲ್ಲಿ ದೇವರು ನಿಮಗೆ ಅನುಗ್ರಹಿಸಿದ ಕೃಪೆಯ ನಿಮಿತ್ತ ನಾನು ನಿಮ್ಮ ವಿಷಯದಲ್ಲಿ ಯಾವಾಗಲೂ ದೇವರನ್ನು ಕೊಂಡಾಡುತ್ತೇನೆ. ಯಾಕೆಂದರೆ ಕ್ರಿಸ್ತನ ವಿಷಯವಾದ ಸಾಕ್ಷಿಯು [5-6]ನಿಮ್ಮಲ್ಲಿ ದೃಢವಾಗಿ ನೆಲೆಗೊಂಡ ಕಾರಣ ನೀವು ಎಲ್ಲಾ ನುಡಿಯಲ್ಲಿಯೂ ಎಲ್ಲಾ ತಿಳುವಳಿಕೆಯಲ್ಲಿಯೂ ಆತನಲ್ಲಿ ಸಮೃದ್ಧಿ ಹೊಂದಿದವರಾಗಿದ್ದೀರಿ. [7]ಹೀಗೆ ನೀವು ಯಾವ ಕೃಪಾವರದಲ್ಲಿಯೂ ಕೊರತೆಯಿಲ್ಲದವರಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇದ್ದೀರಿ. [8]ನಮ್ಮ ಕರ್ತನಾದ ಯೇಸು ಕ್ರಿಸ್ತನ ದಿನದಲ್ಲಿ ಯಾರೂ ನಿಮ್ಮ ಮೇಲೆ ತಪ್ಪು ಹೊರಿಸಲಾಗದಂತೆ ಆತನು ನಿಮ್ಮನ್ನು ಕಡೇವರೆಗೂ ದೃಢಪಡಿಸುವನು. [9]ದೇವರು ನಂಬಿಗಸ್ತನು; ನಮ್ಮ ಕರ್ತನಾದ ಯೇಸು ಕ್ರಿಸ್ತನೆಂಬ ತನ್ನ ಮಗನ ಅನ್ಯೋನ್ಯತೆಗೆ ನಿಮ್ಮನ್ನು ಕರೆದವನು ಆತನೇ.**

ಈ ಪದಗಳು ಅಭಿನಂದನಾತ್ಮಕವಾಗಿವೆ. ದೇವರು ಕೊರಿಂಥದವರನ್ನು ಆಯ್ದುಕೊಂಡಿದ್ದಾನೆ, ಆದರೆ ಅವರು ತಟಸ್ಥವಾಗಿ ಕೃಪೆಯನ್ನು ಸ್ವೀಕರಿಸುವವರಲ್ಲ. ಅವರು ಆತನಿಗಾಗಿ ಒಂದು ನಿರ್ಧಾರವನ್ನು ಸಹ ಮಾಡಿದ್ದರು. ಪೌಲನು ತನ್ನ ಓದುಗರಿಗೆ ನಿವೇದಿಸಿಕೊಂಡ ಪತ್ರದುದ್ದಕ್ಕೂ ಮಾಡಿದಂತೆ ದೇವರು ಅವರನ್ನು ಯಾವ ಉದ್ದೇಶಕ್ಕಾಗಿ ಸೃಷ್ಟಿಸಿದ್ದಾನೋ ಅದನ್ನು ಮಾಡುವಂತೆ. ಅವರು ಇದ್ದ ಹಾಗೆಯೇ ಆಶೀರ್ವದಿಸಲ್ಪಡಲಿಕ್ಕಾಗುವಂತೆ, ಅವರು ದೇವರ ತಂದೆತನವನ್ನು ಮತ್ತು ಯೇಸುವಿನ ಒಡೆತನವನ್ನು ಅರಿಕೆ ಮಾಡುವದರ ಮೂಲಕ ಕ್ರಿಸ್ತನಿಗಾಗಿ ನಿರ್ಧಾರಗಳನ್ನು ಮಾಡುವದನ್ನು ಪೂರ್ತಿಗೊಳಿಸಿರಲಿಲ್ಲ, ನಂಬಿಕೆಯ ಪ್ರಯಾಣ ಅವರ ಮುಂದೆ ಇದೆ.

**ವಚನ 4.** ಪೌಲನು ಸಾಮಾನ್ಯವಾಗಿ ತನ್ನ ಪತ್ರವನ್ನು ಕೃತಜ್ಞತಾಸ್ತುತಿ ಪ್ರಾರ್ಥನೆಯೊಂದಿಗೆ ಪ್ರಾರಂಭಿಸುತ್ತಾನೆ (ರೋಮ 1:8; ಎಫೆಸ 1:6; ಫಿಲಿಪ್ಪಿ 1:3; ಕೊಲಸ್ಸೆ 1:3; 1 ಥೆಸಲೋನಿಕ 1:2; 2:13; 2 ಥೆಸಲೋನಿಕ 1:3). ದೇವರು ಕೊರಿಂಥದ ವಿಶ್ವಾಸಿಗಳಿಗೆ ಮತ್ತು ಅವರ ನಂಬಿಕೆಯ ಪ್ರತಿಕ್ರಿಯೆಗೆ ತೋರಿಸಿದ ಕೃಪೆಗಾಗಿ ಅವನು ಕೃತಜ್ಞತೆಯನ್ನು ಸಲ್ಲಿಸುತ್ತಾನೆ. ಸಭೆಯಲ್ಲಿರುವ ಗಲಭೆಯನ್ನು ಪರಿಗಣಿಸಿ ಪೌಲನು **ನಿಮ್ಮ ವಿಷಯದಲ್ಲಿ ನಾನು ಯಾವಾಗಲೂ ನನ್ನ ದೇವರಿಗೆ ವಂದನೆಗಳನ್ನು** ಸಲ್ಲಿಸುತ್ತಾನೆ, ಪ್ರಾರ್ಥನೆಯನ್ನು ಒಂದು ಆಚಾರವೆಂದು ತಿಳಿದು ಬಿಟ್ಟುಬಿಡಬಾರದು ಎಂದು ಬರೆದಿರುವದು ಗಮನೀಯವಾಗಿದೆ. **ಕ್ರಿಸ್ತನಾದ ಯೇಸುವಿನಲ್ಲಿ ನಿಮಗೆ ಕೊಡಲ್ಪಟ್ಟ ದೇವರ ಕೃಪೆಯು** ಮಾನವ ವಿಫಲತೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ. ದೇವರು ಯಾವಾಗಲೂ ಪಾಪಿಗಳ ನ್ಯಾಯವನ್ನು ಪ್ರತಿಪಾದಿಸುತ್ತಾನೆ ಸಭೆಯಲ್ಲಿರುವ ಪ್ರಭುದ್ಧತೆಯ ಕೊರತೆಯನ್ನು ಸಹ. ಕೊರಿಂಥದಲ್ಲಿರುವ ವಿಶ್ವಾಸಿಗಳು ಸುವಾರ್ತೆಗೆ ವಿಧೇಯರಾದರೆಂದು ಮತ್ತು ದೇವರು ಅವರನ್ನು ರಕ್ಷಿಸಲ್ಪಟ್ಟವರ ದೇಹದಲ್ಲಿ ಏರಿಸಿಕೊಂಡಿದ್ದಾನೆಂದು ಪೌಲನು ಕೃತಜ್ಞತೆಯನ್ನು ಸಲ್ಲಿಸುತ್ತಾನೆ. ಅವನು ಕೊರಿಂಥದಲ್ಲಿ ಪ್ರಕಟವಾಗುತ್ತಿರುವ ಮುಗ್ಧತನ ಮತ್ತು ಹೆಮ್ಮೆಯನ್ನು ಜನರನ್ನು ವಿಮೋಚಿಸುವ ಕ್ರಿಸ್ತನ ಕಾರ್ಯದಲ್ಲಿ ಅಡೆತಡೆಯಾಗುವದಕ್ಕೆ ಅನುಮತಿಸುವದಿಲ್ಲ.

ಎರಡು ಚಿಕ್ಕ ವಾಕ್ಯಗಳಲ್ಲಿ (1:3, 4) ಪೌಲನು ಕೃಪೆಯೆಂದು ಅನುವಾದಿಸಲಾದ

(χάρις, *charis*) ಎಂಬ ಸಾಮಾನ್ಯ ಪದದತ್ತ ಸೆಳೆಯುತ್ತಾನೆ. ಅಪೊಸ್ತಲನು ಪದವನ್ನು ಅದರ ಸಾಮಾನ್ಯ ಅರ್ಥವನ್ನು ದಯೆ ಮತ್ತು ಸದ್ಭಾವನೆ ವ್ಯಕ್ತಪಡಿಸುವದಕ್ಕೆ ಉಪಯೋಗಿಸಲು ಹಿಂಜರಿಯುವದಿಲ್ಲ (1:3), ಆದರೆ ವಚನ 4ರಲ್ಲಿ ಆತನು ಅದರ ಅರ್ಥವನ್ನು ಇನ್ನೊಂದು ಹಂತಕ್ಕೆ ತೆಗೆದುಕೊಂಡು ಹೋಗುತ್ತಾನೆ. ಕ್ರೈಸ್ತರಿಗೆ "ಕೃಪೆ" ತಾಂತ್ರಿಕ ಅರ್ಥವಿದೆ ಅದು ದೇವರ ಅನಿರೀಕ್ಷಿತ, ಉಚಿತ ಮತ್ತು ಕರುಣೆಯ ವರ "ಕ್ರಿಸ್ತ ಯೇಸುವಿನಲ್ಲಿ ಕೊಡಲ್ಪಟ್ಟಿದೆ." ಪತ್ರದಲ್ಲಿ ಪೌಲನ ಎಲ್ಲಾ ಗದರಿಕೆಗಳು ಮತ್ತು ತಿದ್ದುಪಡಿಗಳನ್ನು ಕೊರಿಂಥ ಸಭೆಯಲ್ಲಿರುವ ಸಹೋದರ ಮತ್ತು ಸಹೋದರಿಯರೊಂದಿಗೆ ಹಂಚಿಕೊಂಡ ಕೃಪೆಗಾಗಿ ಕೃತಜ್ಞತೆಯನ್ನು ಸಲ್ಲಿಸಿದ ಸನ್ನಿವೇಶದ ಹಿನ್ನೆಲೆಯಲ್ಲಿ ಓದಬೇಕು. ಅವರಲ್ಲಿ ತಕ್ಷಣದ ಗಲಭೆ ಏನೇ ಇದ್ದರೂ, ಅಪೊಸ್ತಲನು ತನ್ನ ಓದುಗರು ಕ್ರಿಸ್ತನಲ್ಲಿ ನಿಮ್ಮೊಂದಿಗೆ ಹಂಚಿಕೊಂಡ ಆತ್ಮೀಕ ಆಶೀರ್ವಾದಗಳು ದೇವರಿಂದ ಕೊಡಲ್ಪಟ್ಟಿವೆ ಎಂಬುದನ್ನು ತಿಳಿದುಕೊಳ್ಳಬೇಕು. ಅವನ ವಿಶ್ವಾಸವೇನಂದರೆ, ಅವರು ದೇವರ ಕೃಪೆಯಲ್ಲಿ ಬೆಳೆದ ಹಾಗೆ, ಅವರು ತಮ್ಮ ಭಿನ್ನಾಭಿಪ್ರಾಯಗಳಿಂದ ಮತ್ತು ತಮ್ಮೊಳಗೆ ಇರುವ ಆತ್ಮವನ್ನು ನಂದಿಸುತ್ತಿರುವ ಪಾಪಗಳಿಂದ ಆಚೆಗೆ ಹೋಗಬೇಕು.

**ವಚನ 5. ಎಲ್ಲಾ ಮಾತು ಮತ್ತು ಎಲ್ಲಾ ಜ್ಞಾನ** ಅಪೊಸ್ತಲನ ಕಲ್ಪನೆಯಂತೆ ಬಿಚ್ಚಿದ ಪತ್ರದ ಹಾಗೆ ವಿಸ್ತಾರವಾದ ವಿಷಯಗಳನ್ನು ಪರಿಚಯಿಸುತ್ತದೆ. ಕೊರಿಂಥದ ಕೆಲವು ವಿಶ್ವಾಸಿಗಳು ಸಹಜವಾಗಿ ಜ್ಞಾನದ ಮೇಲೆ ತಮಗಿರುವ ಪ್ರಭುತ್ವಕ್ಕಾಗಿ ಹೆಮ್ಮೆ ಪಟ್ಟುಕೊಂಡರು, ಆದರೆ ಅವರು ಯಾವುದನ್ನು ಜ್ಞಾನ ಎಂಬುದಾಗಿ ತಿಳಿದುಕೊಂಡಿದ್ದರೋ ಅದು ಪೌಲನ ತಿಳುವಳಿಕೆಗೆ ಬಹಳ ವಿಭಿನ್ನವಾಗಿತ್ತು (3:18-20). ಪೌಲನು ತನ್ನ ಓದುಗರು **ಆತನ್ನಲ್ಲಿ ಸಮೃದ್ಧಿಯಾಗಿದ್ದರು**; ಅವರು ಕರ್ತನು ಕೂಡ ಮಾಡಬಹುದಾದ ಎಲ್ಲದರಲ್ಲಿ ಸಮೃದ್ಧಿಯಾಗಿ ಭಾಗಿಗಳಾಗಿದ್ದರು. ಪೌಲನಿಗೆ, ಯೇಸು "ಎಲ್ಲಾ ಮಾತು ಮತ್ತು ಎಲ್ಲಾ ಜ್ಞಾನಕ್ಕೆ" ಮೂಲನಾಗಿದ್ದನು. ಅಪೊಸ್ತಲರು ಕೌಶಲ್ಯಾತ್ಮಕವಾಗಿ ಸ್ತುತಿಸುತ್ತಿದ್ದರು ಮತ್ತು ಎರಡು ಚಿಕ್ಕ ವಾಕ್ಯಗಳಲ್ಲಿ (1:3, 4) ಪೌಲನು ಕೃಪೆಯೆಂದು ಅನುವಾದಿಸಲಾದ ಅದೇ ಸಮಯದಲ್ಲಿ ಬಯ್ಯುತ್ತಿದ್ದರು. ಕೊರಿಂಥದವರು ಮಾತು ಮತ್ತು ಶಿಕ್ಷಣದ ವಿಷಯದಲ್ಲಿ ಹೆಮ್ಮೆ ಪಡುವವರಾಗಿದ್ದರು. ಲೌಕಿಕ ಕ್ಷೇತ್ರದಲ್ಲಿ, ಹೊಗಳಿಕೆಯ ಪದಗಳಾಗಿದ್ದವು, ಪೌಲನ ಪದಗಳು ಹೆಚ್ಚಾಗಿ ಅಣಕಕ್ಕೆ ಸೂಚನೆಯಾಗಿದ್ದವು.

ಪತ್ರವು ಕೊರಿಂಥದವರಲ್ಲಿ ಕೆಲವರು ಭಾಷಣ ಮಾಡುವದರಲ್ಲಿ ಹೆಚ್ಚಿನ ಲಾಭಾಂಶವನ್ನು ಇಟ್ಟಿದ್ದಾರೆ ಆ ದಿನಗಳಲ್ಲಿದ್ದ ವಾಕ್ಚಾಚಾತುರ್ಯ ಸಭೆಯಲ್ಲಿ ವ್ಯಾಖ್ಯಾನಿಸಿದಂತೆ ಖಚಿತಗೊಳಿಸುತ್ತವೆ. ವಾಕ್ಚಾಚಾತುರ್ಯದ ಕೌಶಲ್ಯವು ಕರ್ತನ ಸೇವೆಯ ಕಾರಣವನ್ನು ನೆರವೇರಿಸಬಹುದು ಇಲ್ಲವೇ ನೆರವೇರಿಸಲಿಕ್ಕಿಲ್ಲ ಎಂಬುದು ಪೌಲನಿಗೆ ತಿಳಿದಿತ್ತು. ಅದೇ ಸಮಯದಲ್ಲಿ ಕೊರಿಂಥದವರು ತಮ್ಮ ಜ್ಞಾನದಲ್ಲಿ ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು, ಪೌಲನಿಗೆ ಮೀಸಲಾತಿ ಇತ್ತು. ಕ್ರಿಸ್ತನಲ್ಲಿ ಅವರು ದೇವರ, ಪ್ರಕಟನೆ, ವಿಮೋಚನೆ ಮತ್ತು ನಿತ್ಯಜೀವದ ಕುರಿತು ತಿಳಿದುಕೊಳ್ಳಲು ಮತ್ತು ಮಾತನಾಡಲು ಆಶೀರ್ವಾದವನ್ನು ಹೊಂದಿದ್ದರು. ದೇವರಿಗೆ ಮಹಿಮೆಯನ್ನು ಸಲ್ಲಿಸುವದರ ಬದಲಾಗಿ, ಕೊರಿಂಥದವರು ವಾಕ್ಚಾಚಾತುರ್ಯ ಮತ್ತು ಜಾಣತನದಿಂದ ಕೂಡಿದ ಜ್ಞಾನವೇ ತಮ್ಮಲ್ಲಿ ಕೊನೆ ಎಂದು ಭಾವಿಸಿದ್ದರು. ಹೊಗಳಿಕೊಳ್ಳಲು ಮತ್ತು ಭಿನ್ನಾಭಿಪ್ರಾಯಗಳ ಹೋಲಿಕೆಯನ್ನು

ಮಾಡಲು ಅಪೊಸ್ತಲರ ಬೋಧನೆಗಳು ಅವಕಾಶವನ್ನು ನೀಡುತ್ತಿರಲಿಲ್ಲ. ಅವನು ಮತ್ತು ಕೊರಿಂಥದಲ್ಲಿರುವ ಸಹೋದರರು ಜ್ಞಾನಕ್ಕೆ ಮತ್ತು ಸ್ಪಷ್ಟವಾದ ಸತ್ಯ ನಿವೇದನೆಗೆ ಬೆಲೆ ನೀಡುತ್ತಿದ್ದರು; ಮಾತನಾಡುವದನ್ನು ಮತ್ತು ತಿಳಿದುಕೊಳ್ಳುವದನ್ನು ಅವನು ಅಳೆಯುವ ಅಳತೆಗೋಲು ಒಂದೇ ಆಗಿರಲಿಲ್ಲ. ಈ ಸಹೋದರರು ಶ್ರೀಮಂತರಾಗಿದ್ದರು, ಆದರೆ ಅವರು ಕ್ರಿಸ್ತನಲ್ಲಿ ತಾವು ಹಂಚಿಕೊಳ್ಳುವ ವರಗಳು ಅವರನ್ನು ತಮ್ಮ ಸುತ್ತಲೂ ಇರುವ ಜನರ ವರ್ತನೆಯನ್ನು ತಿರಸ್ಕರಿಸಲು ಕರೆನೀಡುತ್ತವೆ ಎನ್ನುವದನ್ನು ಇನ್ನೂ ತಿಳಿದುಕೊಂಡಿರಲಿಲ್ಲ.

**ವಚನ 6.** ಕ್ರಿಸ್ತನ ಕುರಿತಾದ ಜ್ಞಾನ ಪೌಲನು ಮತ್ತು ಇತರರು ಕೊರಿಂಥದವರಿಗೆ ನೀಡಿದ ಸಾಕ್ಷಿಯಿಂದ ಬಂತು. ಅವರು ದೃಢಪಡಿಸುವದೇನಂದರೆ ಯೇಸು ತಾನೇ ಕ್ರಿಸ್ತನು ಎಂಬುದನ್ನು ತನ್ನ ಮಾತು ಮತ್ತು ಕಾರ್ಯದ ಮೂಲಕ ತೋರ್ಪಡಿಸಿದ್ದಾನೆ (15:1-4). ದೇವರು ನಜರೇತಿನ ಯೇಸುವನ್ನು ತನ್ನ ಮಗನೆಂದು ಸತ್ತವರೊಳಗಿಂದ ಅವನನ್ನು ಎಬ್ಬಿಸುವದರ ಮೂಲಕ ಪ್ರಕಟಿಸಿದ್ದಾನೆ (ರೋಮಾ 1:4). ಅಪೊಸ್ತಲನು ಕೊರಿಂಥದವರು ಏನನ್ನು ಅರಿತಿದ್ದಾರೋ ಅದನ್ನೇ ನಿವೇದಿಸುತ್ತಾನೆ: **ಕ್ರಿಸ್ತನ ಕುರಿತಾದ ಸಾಕ್ಷಿ ಅವರಲ್ಲಿ ದೃಢವಾಗಿದೆ.** ಮೂರನೇ ವರ್ಗದ ಶೋತ್ರುಗಳು ಪೌಲನಿಗೆ ತಿಳಿದಿರುವ ಪರಿಸ್ಥಿತಿಗಳ ಕುರಿತು ತಿಳುವಳಿಕೆಯನ್ನು ಹೊಂದಿರುವದಿಲ್ಲ ಮತ್ತು ಅವನ ಶೋತ್ರುಗಳು ಅಪೊಸ್ತಲರ ಸಾಕ್ಷಿ ಹೇಗೆ ದೃಢಪಟ್ಟಿತು ಎಂಬ ವಿಷಯದಲ್ಲಿ ಆಶ್ಚರ್ಯ ಪಡುತ್ತಾರೆ, ಮುಂದೆ, ಪೌಲನು "ಅಪೊಸ್ತಲರಿಗೆ ಇರತಕ್ಕ ಲಕ್ಷಣಗಳು ನಿಮ್ಮ ಮಧ್ಯದಲ್ಲಿ ತೋರಿದವು" ಎಂದು ದೃಢಪಡಿಸುತ್ತಾನೆ (2 ಕೊರಿಂಥ 12:12). ಪೌಲನು ಪಟ್ಟಣದಲ್ಲಿದ್ದಾಗ, ತನ್ನ ಹಸ್ತವನ್ನು ಈಡುವದರ ಮೂಲಕ ಪವಿತ್ರಾತ್ಮನು ಕೊರಿಂಥದವರಲ್ಲಿ ಕೆಲವರಿಗೆ ಬಲವನ್ನು ನೀಡಿದನು. ಈ ಆಶೀರ್ವಾದವನ್ನು ಹೊಂದಿದವರು ತಮ್ಮ ವಿವೇಕಕ್ಕೆ ಅನುಗುಣವಾಗಿ ಅದ್ಭುತ ಕಾರ್ಯಗಳನ್ನು ಮಾಡುತ್ತಿದ್ದರು (1 ಕೊರಿಂಥ 12:7-10).

ಸಾರಿದ ಸುವಾರ್ತೆಯು ಅದ್ಭುತ ಕಾರ್ಯಗಳಿಂದಾಗಿ ದೃಢಪಟ್ಟಿತು, ಆದರೆ ಪೌಲನು ತನ್ನ ಮನಸ್ಸಿನಲ್ಲಿ ಸ್ವಲ್ಪ ವ್ಯತ್ಯಾಸವನ್ನು ಹೊಂದಿದ್ದನು. ಬಹುಶಃ ಅವನು ಕೊರಿಂಥದಲ್ಲಿರುವ ವಿಶ್ವಾಸಿಗಳು ಜೀವಿಸುತ್ತಿರುವ ವಿಧಾನದಲ್ಲಿ ಉಂಟಾದ ಬದಲಾವಣೆಯನ್ನು ಅಥವಾ ತಾವು ವಿಮೋಚನೆ ಹೊಂದಿದ ಜನರು ಎಂಬ ತಮ್ಮ ಅನುಭವಗಳಲ್ಲಿ ಆನಂದಿಸುತ್ತಿರುವದನ್ನು ಉಲ್ಲೇಖಿಸುತ್ತಿರಬಹುದು. ಬದಲಾದ ಜೀವಿತಗಳು ಆತನ ಬೋಧನೆಯ ಸತ್ಯವನ್ನು ದೃಢಪಡಿಸುತ್ತವೆ. ನಂತರದ ವಿವರಣೆ ಬಹಳ ಮನ ಮುಟ್ಟುವಂತದ್ದಾಗಿದ್ದರೂ ಅದು ಬಹಳ ಅನಿರ್ಧಾರಿತ ಮತ್ತು ಅಮೂರ್ತವಾಗಿದೆ. "ಅನುಸರಿಸದೇ" ಎಂದು ಅನುವಾದಿಸಲಾದ ಕ್ರಿಯಾ ಪದವು (βεβαιόω, *bebaioō*) ರಿಂದ ಕುಂಟನನ್ನು ಸ್ವಸ್ಥ ಮಾಡಿದಾಗ ಮತ್ತು ಕುರುಡನಿಗೆ ಕಣ್ಣು ಬಂದಿರುವದನ್ನು ಅವರು ಅನುಭವಿಸಿರುವದನ್ನು ಮತ್ತೊಮ್ಮೆ ಕೊರಿಂಥದವರು ಜ್ಞಾಪಿಸಿಕೊಳ್ಳಲು ಕಾರಣವಾಯಿತು. ಇಬ್ರಿಯ ಲೇಖಕರು "ಅನುಸರಿಸದೇ" ಎಂಬ ಅದೇ ಕ್ರಿಯಾಪದದ ಅರ್ಥವನ್ನು ಸತ್ಯದ ಕುರಿತು ಸಾಕ್ಷಿ ನೀಡುವದರೊಂದಿಗೆ "ಸೂಚಕ ಕಾರ್ಯಗಳನ್ನೂ ಮತ್ತು ಅದ್ಭುತ ಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವನ ಮಾತಿಗೆ ಸಾಕ್ಷಿ ಕೊಡುತ್ತಿದ್ದನು" (ಇಬ್ರಿಯ 2:3, 4).

**ವಚನ 7.** ಅಪೊಸ್ತಲರು ತಮ್ಮ ಓದುಗರು ಅನುಭವಿಸಿದ ಆತ್ಮೀಕ ಆಶೀರ್ವಾದಗಳನ್ನು ದೃಢಪಡಿಸಲು ಶ್ರಮವಹಿಸಿದರು. ಅವರು ದೇವರ ಕೃಪೆಯಲ್ಲಿ ಭಾಗಿಗಳಾಗಿದ್ದರು ಮತ್ತು ಇದರಿಂದಾಗಿ ಅವರಿಗೆ **ಯಾವ ವರಗಳಲ್ಲಿ ಕೊರತೆಯಿರಲಿಲ್ಲ**. ಅವರು ಮಾತಿನಲ್ಲಿ ಮತ್ತು ಜ್ಞಾನದಲ್ಲಿ ಶ್ರೀಮಂತರಾಗಿದ್ದರು. ಕ್ರಿಸ್ತನ ಕುರಿತಾದ ಸಾಕ್ಷಿ ಅವರ ಮೇಲೆ ಸ್ಥಿರವಾಗಿತ್ತು. ಅವರ ಆಶೀರ್ವಾದದ ಸ್ವರೂಪವನ್ನು ನೋಡುವಾಗ ಅಸಂಮಜಸತೆ, ಪಂಗಡಗಳು ಗಲಿಬಿಲಿ ಮತ್ತು ಲೌಕಿಕತೆ ಸಭೆಯಲ್ಲಿ ಕಂಡು ಬರುತ್ತಿದ್ದವು ಇದು ಹೇಗೆ ಸಾಧ್ಯ? ಅವನು ಕಠಿಣವಾದ ಪ್ರಶ್ನೆಗಳನ್ನು ಕೇಳುವ ಪೂರ್ವದಲ್ಲಿ ಅಪೊಸ್ತಲನು ಕೊರಿಂಥದವರ ಮಧ್ಯದಲ್ಲಿ ಮೊದಲು ದೇವರ ಕಾರ್ಯದ ಕುರಿತಾಗಿ ವಿಶ್ವಾಸವನ್ನು ದೃಢಪಡಿಸಲು ಬಯಸಿದನು. ಹಾಗೂ, ಅವನು ಅವರ ಯಾವ ಆಶೀರ್ವಾದಗಳು ಅವರ ಸ್ವಂತ ಜ್ಞಾನ, ಬಲ ಅಥವಾ ಒಳ್ಳೇತನದಿಂದಾಗಿ ಹುಟ್ಟುವದಿಲ್ಲ. ಅ ಸಮಯದಲ್ಲಿ, ಅಪೊಸ್ತಲನು ಜ್ಞಾನ ಮತ್ತು ಬಲದ ಮೇಲೆ ಅವರ ಅನುಚಿತವಾದ ವಿಶ್ವಾಸವನ್ನು ವಿವರಿಸಲು ಹೇಳಿದನು (3:18-20).

ಅದೇ ಸಮಯದಲ್ಲಿ ಕೊರಿಂಥದವರು, "ಯಾವುದೇ ವರಗಳಲ್ಲಿ ಕೊರತೆಯನ್ನು ಹೊಂದಿರಲಿಲ್ಲ" ವಿವಿಧ ವರಗಳ ಸ್ವರೂಪ ಹೆಚ್ಚು ಚರ್ಚೆಯ ವಿಷಯವಾಗಿತ್ತು. "ವರ" ಇದು *χάρισμα* (*charisma*) (ದೈವೀ ವರ್ಚಸ್ಸು) ಪದದ ಅನುವಾದವಾಗಿದೆ, ಇದು ಪೌಲನ ಪತ್ರಗಳಲ್ಲಿ ಹದಿನಾರು ಸಾರಿ ಪ್ರಕಟವಾಗುತ್ತದೆ ಮತ್ತು 1 ಪೇತ್ರ 4:10ರಲ್ಲಿ ಒಂದು ಸಾರಿ. ಪೌಲನು ರೋಮ ಪಟ್ಟಣಕ್ಕೆ ಬಂದಾಗ, ಅವನು ಕ್ರೈಸ್ತರ ಮೇಲೆ "ಕೆಲವು ಆತ್ಮೀಕ ವರಗಳನ್ನು" ದೃಢಪಡಿಸುವ ನಿರೀಕ್ಷೆಯನ್ನು ಹೊಂದಿದ್ದನು (ರೋಮಾ 1:11). ಗ್ರೀಕ್ ಭಾಷೆಯಲ್ಲಿ, ಈ ಪದವು ಐದು ಸಾರಿ 1 ಕೊರಿಂಥ 12 ಸಾರಿ ವ್ಯಕ್ತವಾಗುತ್ತದೆ. ಕೊರಿಂಥದವರು ಆನಂದಿಸುತ್ತಿರುವ ವಿವಧ ಅದ್ಭುತವಾದ ವರಗಳು "ಅದೇ ಆತ್ಮನಿಂದ" ಕೊಡಲ್ಪಟ್ಟವು (12:4). ದೈವೀಕ ವರಗಳು ವಿಶೇಷವಾದ ಅಸಾಮಾನ್ಯವಾದ ಬಳುವಳಿಯಾಗಿದೆ; ಎಂಬುದು ಈ ಸನ್ನಿವೇಶಗಳಲ್ಲಿ ಸ್ಪಷ್ಟವಾಗಿದೆ. ಆದರೆ ಪೌಲನು ಕೆಲವೊಮ್ಮೆ ಸಮಂಜಸವಾದ ಉಲ್ಲೇಖವಿಲ್ಲದೆ ಈ ಪದವನ್ನು ಅದ್ಭುತಕಾರ್ಯಗಳಿಗೆ ಉಪಯೋಗಿಸುತ್ತಾನೆ. ಉದಾಹರಣೆಗೆ ರೋಮಾ 11:29 ಹೀಗೆ ಹೇಳುತ್ತದೆ, "ದೇವರು ವರಗಳನ್ನೂ ಅನುಗ್ರಹಿಸಿದ್ದಕ್ಕೂ ಜನರನ್ನು ಕರೆದದ್ದಕ್ಕೂ ಪಶ್ಚಾತ್ತಾಪ ಪಡುವವನಲ್ಲ." ಆದಾಗ್ಯೂ ಎರಡು ಆಲೋಚನೆಗಳು ಇದನ್ನು ಸಂಭವನೀಯವಾಗಿಸುತ್ತವೆ, ಪೌಲನು ಮನಸ್ಸಿನಲ್ಲಿ ಅಸಾಮಾನ್ಯ ವರಗಳನ್ನು ಹೊಂದಿದ್ದನು ಎಂಬುದು 1 ಕೊರಿಂಥ 1:7. ಮೊದಲು, ಈ ಸನ್ನಿವೇಶದಲ್ಲಿ ಅವನು ಕೊರಿಂಥದವರ ನಂಬಿಕೆಯನ್ನು ಅವರು ಹೊಂದಿಕೊಂಡಿರುವ ಆಶೀರ್ವಾದದ ಪರಿಪೂರ್ಣತೆಯ ಅಡಿಯಲ್ಲಿ ದೃಢಪಡಿಸುತ್ತಿದ್ದಾನೆ. ಈ ಪರಿಪೂರ್ಣತೆ ಅದ್ಭುತ ಕಾರ್ಯಗಳ ವರಗಳನ್ನು ಒಳಗೊಂಡಿದೆ. ಎರಡನೆಯದಾಗಿ, ಕೊರಿಂಥದವರು ಅದ್ಭುತ ಕಾರ್ಯಗಳ ಮೇಲೆ ತಪ್ಪಾದ ಮಾರ್ಗದಲ್ಲಿ ನಡೆಸುವ ಒತ್ತನ್ನು ಇಟ್ಟಿದ್ದಾರೆ (12:29-31). 1:7ರಲ್ಲಿ ಈ ಸಮಸ್ಯೆಯ ಉಲ್ಲೇಖವು 12:29-31ರಲ್ಲಿ ಪೌಲನ ತಿದ್ದುಪಡಿಯನ್ನು ನಿರೀಕ್ಷಿಸುತ್ತದೆ.

ಕೊರಿಂಥದ ಕ್ರೈಸ್ತರು ಆತ್ಮೀಕ ವರಗಳ ಕೊರತೆಯನ್ನು ಹೊಂದಿರಲಿಲ್ಲ, ಆದರೆ ವರಗಳನ್ನು ದೇವರ ದೊಡ್ಡ ರಚನೆಯ ಚಿತ್ರಣದಲ್ಲಿ ಪರಿಗಣಿಸಿದಾಗ ಮಾತ್ರ ಮಹತ್ವವನ್ನು ಹೊಂದುತ್ತವೆ. **ಕರ್ತನಾದ ಯೇಸು ಕ್ರಿಸ್ತನ ಪ್ರಕಟನೆಯ ಕುರಿತು** ಓದುಗರ ಗಮನವನ್ನು

ಸೆಳೆಯಲು ಪೌಲನು ಹೊಸ ದೃಷ್ಟಿಕೋನವನ್ನು ಸೇರಿಸಿದ್ದಾನೆ. ಮಾರ್ಮಿಕವಾದ ತಿರುವಿನೊಂದಿಗೆ ಅವನು ಕೊರಿಂಥದವರಿಗೆ ನಾಶನವು ಅವರಿಗಾಗಿ ಕಾದಿದೆ ಎಂದು ಜ್ಞಾಪಿಸುತ್ತಾನೆ. ಒಬ್ಬನು ಕರ್ತನ ಬರೋಣದ ನಿರೀಕ್ಷೆಯಲ್ಲಿ ಜೀವಿಸುವಾಗ ವರಗಳು ಮತ್ತು ಪ್ರತಿಷ್ಠೆ ಬೇರೆ ಬಣ್ಣವನ್ನು ತೆಗೆದುಕೊಳ್ಳುತ್ತವೆ. ಕೊರಿಂಥದವರು ಆನಂದಿಸಿದ ಯಾವುದೇ ಆತ್ಮೀಕ ವರಗಳು ಅಥವಾ ಜ್ಞಾನ, ಕ್ರಿಸ್ತನ ಬರೋಣದಲ್ಲಿ, "ದೇವರ ಪ್ರಕಟನೆಗಳು," ಅವರ ಕೂತೂಹಲದ ನಿರೀಕ್ಷೆಗಳಾಗುತ್ತವೆ. ಕ್ರಿಸ್ತನ ಸಭೆ ಯಾವಾಗಲೂ ಗುರಿಯನ್ನು ತಲುಪುವತ್ತ ತಮ್ಮ ದೃಷ್ಟಿಯನ್ನು ಕೇಂದ್ರಿಕರಿಸಬೇಕು, ಯಾಕಂದರೆ "ಎಲ್ಲಾ ಸಂಗತಿಗಳ ಅಂತ್ಯವು ಸಮೀಪವಾಗಿದೆ" (1 ಪೇತ್ರ 4:7).

ಕ್ರೈಸ್ತರಾಗಿ, ನಮಗಿರುವ ಭರವಸೆ ಏನಂದರೆ ದೇವರ ಕೃಪೆಯಿಂದ, ನಾವು ಕೊನೆಯವರೆಗೆ ತಾಳಿಕೊಳ್ಳಬೇಕು; ಆದರೆ ತಾಳಿಕೊಳ್ಳುವದೊಂದೆ ಅಂತಿಮವಲ್ಲ. ಪೌಲನು ಮುಂದೆ ತಾನು ಸಹ ಮಾರ್ಪಡಬೇಕಾದ ಸಾಧ್ಯತೆಗಳನ್ನು ಪರಿಗಣಿಸುತ್ತಾನೆ "ಬಿಟ್ಟುಬಿಡುವದು" (1 ಕೊರಿಂಥ 9:26, 27; KJV). ಕರ್ತನಲ್ಲಿ ಯಾರು ನಂಬಿಕೆಯನ್ನಿಡುತ್ತಾರೋ, ಅವರನ್ನು ಲೋಕದ ಯಾವ ಬಲವು ಕರ್ತನ ಪ್ರೀತಿಯಿಂದ ಪ್ರತ್ಯೇಕಿಸಲಾರದು (ರೋಮ 8:38, 39). ಯೇಸು ನಮ್ಮ ಸಹಾಯಕ ಮತ್ತು ಸ್ನೇಹಿತನು. ಕರ್ತನು ತನ್ನ ಸ್ವಂತಜನರನ್ನು ಕ್ಷಮಿಸುತ್ತಾನೆ ಮತ್ತು ತನ್ನವರೆಂದು ಸ್ವೀಕರಿಸುತ್ತಾನೆ.

**ವಚನ 8.** "ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆ" 1:7ರಲ್ಲಿ **ನಮ್ಮ ಕರ್ತನಾದ ಯೇಸು ಕ್ರಿಸ್ತನ ದಿನದ** ಕುರಿತು ಮಾತನಾಡುವ ಇನ್ನೊಂದು ವಿಧವಾಗಿದೆ. 1:8ರಲ್ಲಿ ಇತಿಹಾಸವು ಯೇಸು ಕ್ರಿಸ್ತನ ಬರೋಣದತ್ತ ಚಲಿಸುತ್ತಿದೆ, ಲೋಕದ ಅಸ್ತಿತ್ವ ಮತ್ತು ಸಮಯದ ಮುಕ್ತಾಯ. ದುಃಖಿಸುತ್ತಿರುವ ಸಮಯವು ಕೊನೆಗೊಳ್ಳುವವರೆಗೆ ಮಾನವ ಕುಟುಂಬ ದಿಗ್ಭ್ರಮೆಗೊಳ್ಳುವದಿಲ್ಲ. ಸಮಯವು ಸಂದು ಹೋಗುತ್ತಿರುವ ಹಾಗೆ ದೇವರು ಉದ್ದೇಶ ಮತ್ತು ಮಾರ್ಗದರ್ಶನವನ್ನು ನೀಡುತ್ತಾನೆ.

"ಕರ್ತನ ದಿನವು" ಹಳೆ ಒಡಂಬಡಿಕೆಯಲ್ಲಿ ಒಂದು ಮಹತ್ವದ ವಿಚಾರವಾಗಿತ್ತು. ಪ್ರವಾದಿಗಳಿಂದ ಇದರ ಉಪಯೋಗ ಹೊಸ ಒಡಂಬಡಿಕೆಯಲ್ಲಿ ಅದರ ಅರ್ಥವನ್ನು ವಿವರಿಸಲು ಸಹಾಯಕವಾಗಿದೆ. ಪ್ರವಾದಿಗಳು "ಕರ್ತನ ದಿನ" ಕರ್ತನು ತನ್ನ ಜನರನ್ನು ಮಹಿಮೆಯೊಡನೆ ರಕ್ಷಿಸಲು ಅಥವಾ ಶಿಕ್ಷಿಸಲು ಬರುವ ಯಾವುದೇ ದಿನವಾಗಿದೆ ಎಂದು ಅರ್ಥ. ಹೊಸ ಒಡಂಬಡಿಕೆಯಲ್ಲಿ "ಕರ್ತನ ದಿನ" ನಿರ್ಧಿಷ್ಟವಾಗಿ ಕರ್ತನು ತಿರುಗಿ ಬರುವ ದಿನ. ಕ್ರೈಸ್ತರು ಆತನು ತಿರುಗಿ ಬರುವದರ ಖಚಿತತೆಯನ್ನು ಬಲ್ಲವರಾಗಿದ್ದಾರೆ ಆದರೆ ನಿಗದಿತ ಸಮಯವನ್ನಲ್ಲ; ಕರ್ತನು ತಿರುಗಿ ಬರುವದು ಯಾವಾಗ ಎಂಬುದಕ್ಕೆ ಒಂದೇ ಸೂಚನೆ ಅದು ರಾತ್ರಿಯ ಜಾವದಲ್ಲಿ ಕಳ್ಳನು ಬರುವಂತೆ (ಮತ್ತಾಯ 24:36; 1 ಥೆಸಲೋನಿಕ 5:2 ನೋಡಿರಿ).

**ವಚನ 9.** ರಕ್ಷಣೆಯ ಭರವಸೆಯು ದೇವರ ನಂಬಿಗಸ್ತಿಕೆಯನ್ನು ಆಧರಿಸಿದೆ. ಗ್ರೀಕರು ತಮ್ಮ ದೇವರುಗಳನ್ನು ತಿಳಿದುಕೊಂಡಿರುವ ಪ್ರಕಾರ, ಒಬ್ಬನೇ ನಿಜವಾದ ದೇವರು ಚಪಲಚಿತ್ತನಲ್ಲ. **ದೇವರು ನಂಬಿಗಸ್ತನಾಗಿದ್ದಾನೆ** ಮತ್ತು ತನ್ನ ಮಕ್ಕಳ ಪಕ್ಕದಲ್ಲಿ ನಿಂತುಕೊಳ್ಳುತ್ತಾನೆ. ನಮ್ಮ ಕರ್ತನಾದ ಯೇಸು ಕ್ರಿಸ್ತನೆಂಬ **ತನ್ನ ಮಗನ ಅನ್ಯೋನ್ಯತೆಗೆ** ನಿಮ್ಮನ್ನು ಕರೆದವನು ಆತನೇ. 1:9 ರಲ್ಲಿರುವ ಗ್ರೀಕ್ ವಾಕ್ಯ ಭಾಗ್ಯದ ಉತ್ತಮವಾದ

ಅನುವಾದ ಬಹಶಃ ತನ್ನ ಮಗನೊಂದಿಗೆ ಅನ್ಯೋನ್ಯತೆ ಆಗಿರಬಹುದು. ಇದು ವಂಶ ಸೂಚಕ ಪದವಾಗಿರಬಹುದು ವಾಸ್ತವಿಕವಾಗಿ "ಆತನ ಮಗನ ಅನ್ಯೋನ್ಯತೆಗಾಗಿ." ಕ್ರೈಸ್ತರು ಪರಸ್ಪರರೊಂದಿಗೆ ಹಂಚಿಕೊಳ್ಳುವ ಅನ್ಯೋನ್ಯತೆ ಕೇವಲ ಕ್ರಿಸ್ತನೊಂದಿಗೆ ಇರುವ ಸಾಮಾನ್ಯ ಅನ್ಯೋನ್ಯತೆಯಿಂದ ಮಾತ್ರ ಸಾಧ್ಯ (1 ಯೋಹಾನ 1:6, 7).

ನಿರಂತರವಾದ ಆತನ ನಾಮದ ಉಪಯೋಗದಿಂದ, ಇದು ಸ್ಪಷ್ಟವಾಗುತ್ತದೆ ಏನಂದರೆ ಪೌಲನು ಆಲೋಚನೆ ಕ್ರಿಸ್ತನಲ್ಲಿ ಬೇರೂರಿವೆ. ಆತನು ಪತ್ರದ ಪ್ರಾರಂಭದಿಂದ ಕೊನೆಯವರೆಗೆ ಯೇಸು ಕ್ರಿಸ್ತನನ್ನು ಯಾವಾಗಲೂ ಕೊರಿಂಥದವರ ಎದುರಿನಲ್ಲಿ ಇಟ್ಟಿದ್ದಾನೆ. ತನ್ನ ಸ್ವಂತ ಬಲ ಅಥವಾ ಜ್ಞಾನದ ಮೇಲೆ ಆತುಕೊಳ್ಳುವದಕ್ಕಿಂತ ಹೆಚ್ಚಾಗಿ, ಪೌಲನು ತನ್ನ ದೃಷ್ಟಿಯನ್ನು ಕರ್ತನ ಮೇಲೆ ಇಟ್ಟಿದ್ದಾನೆ. ಆತನ ಪ್ರತಿಯೊಂದು ಕಾರ್ಯ ಮತ್ತು ಪ್ರತಿಯೊಂದು ಆಲೋಚನೆಗಳು ತಪ್ಪಿ ಹೋದವರನ್ನು ನಿತ್ಯಜೀವಕ್ಕಾಗಿ ಕರೆದವನ ಮಹಿಮೆಗಾಗಿ ಇವೆ.

## ಸಭೆಯಲ್ಲಿರುವ ಪಂಗಡಗಳ ಕುರಿತು ಪೌಲನ ಎಚ್ಚರಿಕೆ (1:10-17)

ತನ್ನ ಪತ್ರದಲ್ಲಿ, ಪೌಲನು ಕೊರಿಂಥದವರು ತನಗೆ ಕಳುಹಿಸಿದ ಹಲವು ಪ್ರಶ್ನೆಗಳಿಗೆ ಉತ್ತರಿಸಿದ್ದಾನೆ. ಅವನು ಆ ಪ್ರಶ್ನೆಗಳಿಗೆ ಹೋಗುವ ಪೂರ್ವದಲ್ಲಿ, ಅಪೊಸ್ತಲನು ಸಭೆಯಲ್ಲಿರುವ ಪಂಗಡ ಕುರಿತು ಮಾತನಾಡಲು ಬಯಸುತ್ತಾನೆ (1:10-4:21). ಕೊರಿಂಥದಿಂದ ಇತ್ತೀಚಿನ ಸಮಾಚರ ಪಂಗಡಗಳ ಸಮಸ್ಯೆಗಳು ಪೌಲನ ಆಲೋಚನೆಗಳನ್ನು ಅವರಿಸಿಕೊಳ್ಳಲು ಕಾರಣವಾಗಿವೆ. ಹಲವು ಮಾರ್ಗಗಳಲ್ಲಿ ಸಭೆಯಲ್ಲಿ ಜಗಳ ಮತ್ತು ಭಿನ್ನಾಭಿಪ್ರಾಯಗಳು ಅಪೊಸ್ತಲರಿಗೆ ಸಂಬೋಧಿಸಲು ಬಹಳವಾಗಿ ಭಾದಿಸುವ ಸಮಸ್ಯೆಗಳಾಗಿದ್ದವು. ಕೊರಿಂಥದಲ್ಲಿರುವ ಕೆಲವು ಕ್ರೈಸ್ತರು ಪೌಲನಿಗೆ ತಮ್ಮ ನಂಬಿಗಸ್ತಿಕೆಯ ಕುರಿತು ಅಸಾಮಾನ್ಯವಾದ ಹೆಮ್ಮೆಯುಳ್ಳವರಾಗಿದ್ದರು. ಪೌಲನಿಗೆ ಕ್ರಿಸ್ತನ ದೇಹದಲ್ಲಿನ ಐಕ್ಯತೆಗಿಂತ ಕೆಲವು ಸಂಗತಿಗಳು ಬಹಳ ಮಹತ್ವಪೂರ್ಣವಾಗಿದ್ದವು (ಎಫೆಸ 4:4-6). ಯಾರಾದರೂ ಸಭೆಯಲ್ಲಿ ಅವನಿಗೆ ತೊಂದರೆಯನ್ನು ನೀಡುತ್ತಿರುವ ಸಂಗತಿಗಳಿಗೆ ಆತನ ಹೆಸರನ್ನು ಜೋಡಿಸಬಹುದಾಗಿತ್ತು. ಇಂದು ಸಭೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವವರು, ಹೊಸ ಸಭೀಕರು ವಿಚಿತ್ರವಾಗಿ ಪಂಗಡಗಳಿಗೆ ಒಲವನ್ನು ತೋರಿಸುತ್ತಾರೆ ಎಂದು ಸಾಕ್ಷಿಕರಿಸುತ್ತಾರೆ.

ಹಲವು ಅಂಶಗಳು ಕೊರಿಂಥದ ಸಭೆಯಲ್ಲಿ ಪಂಗಡಗಳೆಡೆಗೆ ಒಲವನ್ನು ತೋರಿಸುವ ಪ್ರವೃತ್ತಿಯನ್ನು ಹೊಂದಿರುತ್ತವೆ. ಅದೇ ಸಮಯದಲ್ಲಿ ಸಹೋದರರು ವಿವಿಧ ಆತ್ಮೀಕ ವರಗಳನ್ನು ಹೊಂದಿರುತ್ತಾರೆ, ಅವರಿಗೆ ಕ್ರೈಸ್ತ ನಂಬಿಕೆ ಮತ್ತು ಅಭ್ಯಾಸವನ್ನು ನಿರ್ಧರಿಸಲು ಆಜ್ಞಾರೂಪವಾದ ಯಾವುದೇ ಲಿಖಿತ ಪದಗಳಿರುವದಿಲ್ಲ. ಹೊಸ ಒಡಂಬಡಿಕೆ ಇನ್ನೂ ರಚಿಸಲ್ಪಡುವ ಪ್ರಕ್ರಿಯೆಯಲ್ಲಿತ್ತು. ಎರಡನೆಯದಾಗಿ, ಕೊರಿಂಥದ ವಿಶ್ವಾಸಿಗಳು ತಮ್ಮನ್ನು ತಾವು ಸ್ವತಂತ್ರವಾಗಿ ಯೋಚಿಸುವವರು ಎಂದು ತೋರಿಸಿದ್ದರು. ಅವರು ಹೊಸ ಸ್ವರಗಳನ್ನು ಆಲಿಸುತ್ತಿರಬಹುದು ಮತ್ತು ಹೊಸ ವಿಚಾರಗಳನ್ನು ಸ್ವೀಕರಿಸಬಹುದು; ಇಲ್ಲವಾದಲ್ಲಿ ಅವರು ಪೌಲನನ್ನು ಆಲಿಸುತ್ತಿರಲಿಲ್ಲ ಮತ್ತು ತಮ್ಮ ಸಮವಯಸ್ಕರ ಮಧ್ಯದಲ್ಲಿ ಪ್ರಚಲಿತದಲ್ಲಿ ಇರದೇ ಇರುವ ಧರ್ಮವನ್ನು ಅಪ್ಪಿಕೊಳ್ಳುತ್ತಿರಲಿಲ್ಲ. ಇದೇರೀತಿಯು

ಮುಕ್ತವಾದ ಪೌಲನ ಸಂದೇಶವನ್ನು ಸ್ವೀಕರಿಸುವಂತೆ ಮಾಡಿತು ಮತ್ತು ಆತನ ಬೋಧನೆಗಳು ದುರ್ಮಾಗಕ್ಕೆ ಎಳೆಯದಂತೆ ಒಲವನ್ನು ತೋರಿಸಲು ಸಾಧ್ಯವಾಯಿತು. ಮೂರನೆಯದಾಗಿ, ಕೊರಿಂಥವು ತಮ್ಮ ಸುತ್ತಲೂ ಇರುವವರಿಗೆ ಬೋಧಿಸಲು ಎಲ್ಲಾ ವಿಧದ ಬೋಧಕರನ್ನು ಒಳಗೊಂಡ ಪಟ್ಟಣವಾಗಿತ್ತು. ಶಾಶ್ವತನಿವಾಸಿಗಳು ಆ ಸಮಯದ ತತ್ವಜ್ಞಾನಶಾಸ್ತ್ರದ ಪ್ರಸ್ತುತ ವಿಷಯಗಳಿಗೆ ಹೊಂದಿಕೊಂಡಿದ್ದರು. ಪರಿಣಾಮಸ್ವರೂಪವಾಗಿ ಬೋಧಕ ನಿಷ್ಠೆಯನ್ನು ಅಳೆಯುವ ಗೆರೆಗಳನ್ನು ಎಳೆಯಲಾಯಿತು ಮತ್ತು ಪುನಃ ಎಳೆಯಲಾಯಿತು ಅಥವಾ ಪಂಗಡಗಳನ್ನು ಸ್ವೀಕರಿಸಿಕೊಳ್ಳುವದು ಸಾಮಾನ್ಯವಾಗಿತ್ತು. ಸಭೆಯಲ್ಲಿ ವಿಭಾಗವನ್ನು ಮಾಡುವ ಶಕ್ತಿಯು ಕಾರ್ಯಮಾಡುತ್ತಿದೆ ಎಂದು ಅರಿತ ಪೌಲನಿಗೆ ಆಶ್ಚರ್ಯವಾಗಿರಲಿಕ್ಕಿಲ್ಲ, ಆದರೆ ಪಂಗಡಗಳಿಗೆ ಕಾರಣವಾಗಿದ್ದಾರೆ ಎಂದು ಯಾರೊಬ್ಬರೂ ನಿವೇದಿಸುವದನ್ನು ಆತನು ಬಯಸಿರಲಿಲ್ಲ.

## “ಸಹೋದರರೇ, ಐಕ್ಯತೆಯನ್ನು ಕಾಪಾಡಿಕೊಳ್ಳಿರಿ” (1:10)

**10ಸಹೋದರರೇ ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇಧಗಳಿರಬಾರದು, ನೀವು ಒಂದೇ ಮನಸ್ಸು ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ.**

**ವಚನ 10.** “ಆತನ ಮಗನೊಂದಿಗೆ ಅನ್ಯೋನ್ಯತೆ” ವಚನ 1:9ರಲ್ಲಿ ಅಪೊಸ್ತಲನು ಇದನ್ನು ಉಲ್ಲೇಖಿಸುವಾಗ 1:10ರಲ್ಲಿ ಪ್ರಾರಂಭಿಸಿದ ಐಕ್ಯತೆಯ ಬೇಡಿಕೆಗೆ ಸರಳವಾದ ಬದಲಾವಣೆಯನ್ನು ಮಾಡುತ್ತಾನೆ. ಕ್ರಿಸ್ತನೊಂದಿಗೆ ಅನ್ಯೋನ್ಯತೆ ಕ್ರೈಸ್ತರನ್ನು ಒಟ್ಟಾಗಿ ಬಂಧಿಸುತ್ತದೆ, ಆದರೆ ಕೊರಿಂಥದ ವಿಶ್ವಾಸಿಗಳು ತಮ್ಮದೇ ಆದ ಆಸಕ್ತಿಯನ್ನು ಹೊಂದಿಕೊಂಡಿರುವ ಹಾಗೆ ಈ ಐಕ್ಯತೆಯನ್ನು ಅಸಡ್ಡೆ ಮಾಡುತ್ತಿದ್ದರು. ಪತ್ರದ ಎಲ್ಲೆಡೆ ಇರುವಂತೆ, ಇಲ್ಲಿಯೂ, ಪೌಲನು ತನ್ನ ಆತ್ಮವನ್ನು ಪ್ರತಿಬಂಧಿಸುತ್ತಿದ್ದಾನೆ. ಇದು ಪ್ರತ್ಯೇಕಿಸಲಾಗದ ಶೈಕ್ಷಣಿಕ ಪತ್ರಿಕೆಯಾಗಿದೆ. ಅನುಕಂಪ, ಕರುಣೆ, ನಿರಾಶೆ ಮತ್ತು ಕೋಪ ಕೊರಿಂಥದವರಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ಕೇವಲ 1 ಕೊರಿಂಥದಲ್ಲಿಯೇ **ಸಹೋದರರೇ** ಎಂಬ ಬಹುವಚನದ ಪದವನ್ನು ಇಪ್ಪತ್ತು ಸಾರಿ ಉಪಯೋಗಿಸಲಾಗಿದೆ. ಸಭೆಯು ಸಹೋದರತ್ವವನ್ನು ಸಂಧಾನ ಮಾಡಿಕೊಂಡಿದ್ದು ಹೇಗೆ? ಕ್ರೈಸ್ತರು ಪಕ್ಷ ಮತ್ತು ಪಂಗಡಗಳಲ್ಲಿ ನೆಲೆಗೊಂಡಿದ್ದರು. ಅಪೊಸ್ತಲರು ಸೂಕ್ಷ್ಮವಾಗಿ ಪ್ರಾರಂಭಿಸಿದರು. ಅವನು ಪ್ರಸ್ತುತ ವಿಷಯಗಳಲ್ಲಿ ತೃಪ್ತರಾಗಿರಬೇಕೆಂದು ಅವರನ್ನು ಬೇಡಿಕೊಂಡನು. ಆತನು ಅವರು ಒಂದೇ ಮನಸ್ಸು ಮತ್ತು ಹೃದಯದಲ್ಲಿ ಒಟ್ಟಾಗಿ ಹೆಣೆಯಲ್ಪಡಬೇಕು ಎಂದು ಬಯಸಿದ್ದನು. ಬೇಡಿಕೆಯು ಪೌಲನದೊಬ್ಬನದೇ ಆಗಿರಲಿಲ್ಲ; ಇದನ್ನು **ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ** ಮಾಡಿದನು.

ವಿಶ್ವಾಸಿಗಳ ಮಧ್ಯದಲ್ಲಿ **ವಿಭಾಗಗಳು** ಬೇರೆ ಹಂತಕ್ಕೆ ಬರಬಹುದಾಗಿತ್ತು. ಯಾರೂ ಸ್ವೀಕರಿಸಲು ಯೋಗ್ಯರಾಗಿರಲಿಲ್ಲ. ದೇವ ಜನರ ವಯಕ್ತಿಕ ಸಭೆ ಕೆಲವೊಮ್ಮೆ ಇತರ ಸಭಿಕರೊಂದಿಗೆ ಅನ್ಯೋನ್ಯತೆಯನ್ನು ನೀಡಲು ನಿರಾಕರಿಸುತಿತ್ತು. ಪರಿಸ್ಥಿತಿಗಳು

ವ್ಯತ್ಯಾಸವಾಗಿದ್ದವು. ಸಭಿಕರು ಸತ್ಯವೇದದ ಬೋಧನೆಗಳನ್ನು ಅಲ್ಲಗಳೆಯುವ ಅಭ್ಯಾಸವನ್ನು ಅಳವಡಿಸಿಕೊಳ್ಳುವದರ ಪರಿಣಾಮವಾಗಿ ಕೆಲವೊಮ್ಮೆ ವಿಭಾಗಗಳು ಉಂಟಾಗುತ್ತಿದ್ದವು. ಸಭಿಕರು ತಮ್ಮ ಅಭಿಪ್ರಾಯಗಳನ್ನು ಮತ್ತು ಆದ್ಯತೆಗಳನ್ನೂ ಎಲ್ಲೆಡೆ ಆರಾಧಿಸುತ್ತಿರುವ ಸಹ ಕ್ರೈಸ್ತರ ಮೇಲೆ ಹೇರುವಾಗ ಸಹ ಈ ಪರಿಣಾಮವನ್ನು ಉಂಟುಮಾಡುತ್ತಿದ್ದವು.

ಕೆಲವು ಪಂಗಡಗಳು ಸಭೆಯ ಹಂತದಿಂದ ಆಚೆಗೆ ಹೋಗುತ್ತಿರಲಿಲ್ಲ. ಪೌಲನು ತನ್ನ ಓದುಗರನ್ನು **ಒಂದೇ ಮನಸ್ಸು ಒಂದೇ ನ್ಯಾಯತೀರ್ಪಿನಲ್ಲಿ ಪರಿಪೂರ್ಣರಾಗಿರಬೇಕೆಂದು ಒಪ್ಪಿಕೊಳ್ಳಲು** ಬೇಡಿಕೊಳ್ಳುವಾಗ, ಅವನು ಕೊರಿಂಥ ಸಭೆಯಲ್ಲಿರುವ ಆಂತರಿಕ ವಿಷಯಗಳ ಕುರಿತು ಯೋಚಿಸುತ್ತಿದ್ದಾನೆ ಸಭೆಯ ಒಳಗಿರುವ ಪಂಗಡಗಳು ಹೆಚ್ಚು ವೈಕ್ತಿಕವಾಗಬಹುದು, ಆದರೆ ಇವು ಸಭೆಯ ವಿಶಾಲವಾದ ದೃಶ್ಯದಲ್ಲಿ ಕಂಡುಬರುವವುಗಳಿಗಿಂತ ಕಡಿಮೆ ವಿನಾಶಕಾರಿಯೇನಲ್ಲ. ಹೊಸ ಒಡಂಬಡಿಕೆಯ ಭಕ್ತರು ಕ್ರಿಸ್ತೀಯ ಪ್ರೀತಿ, ಗೌರವ ಮತ್ತು ಒಬ್ಬರಿಗೊಬ್ಬರು ಮರ್ಯಾದೆ ತೋರಿಸಲು ಬೇಡಿಕೊಳ್ಳುವದು ಗಮನೀಯವಾಗಿದೆ. ಬಹುಶಃ ನಂಬಿಕೆಯ ಯಾವ ಪರೀಕ್ಷೆಯು ಸಭೆಯ ಹಂತದಲ್ಲಿ ಐಕ್ಯತೆಯನ್ನು ನಿರ್ವಹಿಸಿ ಕರ್ತನಿಗೆ ಗೌರವ ತೋರಿಸಲು ಮಾಡುವ ಯಾವ ಪ್ರಯತ್ನಕ್ಕಿಂತ ನಿಖರವಾಗಿಲ್ಲ.

## "ನಿಮ್ಮ ಪಕ್ಷಪಂಗಡಗಳು ಆಧಾರವಿಲ್ಲದವುಗಳಾಗಿವೆ" (1:11-16).

**[11]ಯಾಕಂದರೆ ನನ್ನ ಸಹೋದರರೇ, ನಿಮ್ಮಲ್ಲಿ ಜಗಳಗಳುಂಟೆಂದು ನಿಮ್ಮ ವಿಷಯವಾಗಿ
ಖ್ಲೋಯೆಯ ಮನೆಯವರಿಂದ ನನಗೆ ತಿಳಿದು ಬಂತು. [12]ನಿಮ್ಮೊಳಗೆ ಪ್ರತಿಯೊಬ್ಬನು - ನಾನು
ಪೌಲನವನು, ಇಲ್ಲವೇ - ನಾನು ಅಪೊಲ್ಲೋಸನವನು, ಅಥವಾ - ನಾನು ಕೇಫನವನು. ಇಲ್ಲವೆ
- ನಾನು ಕ್ರಿಸ್ತನವನು ಎಂದು ಹೇಳಿಕೊಳ್ಳುತ್ತಾನಂತೆ. [13]ಕ್ರಿಸ್ತನು ವಿಭಾಗವಾಗಿದ್ದಾನೋ?
ನಿಮಗೋಸ್ಕರ ಶಿಲುಬೆಗೆ ಹಾಕಿಸಿಕೊಂಡವನು ಪೌಲನೋ? ನೀವು ಪೌಲನ ಹೆಸರಿನಲ್ಲಿ
ದೀಕ್ಷಾಸ್ನಾನಮಾಡಿಸಿಕೊಂಡಿರೋ? [14-15]ನಿಮ್ಮಲ್ಲಿ ಕ್ರಿಸ್ಪನಿಗೂ ಗಾಯನಿಗೂ ಹೊರತಾಗಿ
ಮತ್ತಾರಿಗೂ ನಾನು ದೀಕ್ಷಾಸ್ನಾನ ಮಾಡಿಸಲಿಲ್ಲವಾದದರಿಂದ ನೀವು ನನ್ನ ಹೆಸರಿನಲ್ಲಿ
ದೀಕ್ಷಾಸ್ನಾನಮಾಡಿಸಿಕೊಂಡಿದ್ದಿರೆಂದು ಯಾರೂ ಹೇಳಲಾಗದು. ಅದಕ್ಕಾಗಿ ದೇವರಿಗೆ
ಸ್ತೋತ್ರ ಮಾಡುತ್ತೇನೆ. [16]ಇದಲ್ಲದೆ ಸ್ತೇಫನನ ಮನೆಯವರಿಗೆ ಸಹ
ದೀಕ್ಷಾಸ್ನಾನಮಾಡಿಸಿದೆನು. ಇವರಿಗಲ್ಲದೆ ಇನ್ನಾರಿಗೂ ನಾನು ದೀಕ್ಷಾಸ್ನಾನಮಾಡಿಸಿದಂತೆ
ಕಾಣೆನು.**

**ವಚನ 11.** ಖ್ಲೋಯೆ ಒಬ್ಬ ಕ್ರೈಸ್ತ ವ್ಯಾಪಾರಿಯಾಗಿದ್ದಳು, ಅವಳ ಜನರು ಕೊರಿಂಥ ಮತ್ತು ಎಫೆಸೆಯ ಮಧ್ಯದಲ್ಲಿ ಸಂಚರಿಸುತ್ತಿದ್ದರು ಎಂಬುದನ್ನು ಯಾರಾದರೂ ಬೇಗನೆ ಉಹಿಸಿಕೊಳ್ಳಬಹುದು. ಹೆಸರು ಸ್ತ್ರೀ ಹೆಸರಾಗಿದೆ ಆದರೆ ಅವಳು ಕ್ರೈಸ್ತಳಾಗಿದ್ದಳು ಎಂಬುದು ಖಚಿತವಾಗಿಲ್ಲ. "ಖ್ಲೋಯೆಯ ಮನೆ" ಎಂಬ KJV ಯಲ್ಲಿನ ಅನುವಾದ ಬಹುಶಃ ತಪ್ಪುಮಾರ್ಗಕ್ಕೆ ಎಳೆಯಬಹುದು. ಗ್ರೀಕ್ ವಾಕ್ಯಭಾಗ ಕೇವಲ ಜನರು ಖ್ಲೋಯೆಯ ಮನೆಯೊಂದಿಗೆ ಸ್ವಲ್ಪ ಸಂಬಂಧವನ್ನು ಹೊಂದಿದ್ದರು ಎಂಬುದನ್ನು ತೋರಿಸುತ್ತದೆ. ಅವಳ ಕುಟುಂಬ ಅಥವಾ ಪ್ರತಿನಿಧಿಗಳು ಅನೇಕ ವಿಧದಲ್ಲಿ ಪೌಲನೊಂದಿಗೆ ಸಂಪರ್ಕದಲ್ಲಿ

ಬಂದಿರಬಹುದು. ಖ್ಲೋಯೆಯು ತಾನೇ ಕೊರಿಂಥ ಅಥವಾ ಎಫೆಸೆ ಪಟ್ಟಣದವಳಾಗಿರಬಹುದು. ಅವಳು ಯಾರೇ ಆಗಿರಲಿ ಪೌಲನು **ಖ್ಲೋಯೆಯ ಜನರ** ಮೂಲಕ ಕೊರಿಂಥದ ಸಭೆಯ ಸಮುದಾಯದಲ್ಲಿ ಪಕ್ಷಪಂಗಡಗಳು ಇವೆ ಎಂಬುದನ್ನು ಅರಿತಿದ್ದನು. ಈ ವಿಷಯಗಳ ಕುರಿತು ಕಲಿಯಲು ಜನರಿಗಿರುವ ಹೆಚ್ಚು ಸ್ವಾಭಾವಿಕವಾದ ಮಾರ್ಗ ಅನುಕೂಲ ಹಂತದಲ್ಲಿ ಭಾಗವಹಿಸುವ ಕ್ರೈಸ್ತ ಸಮುದಾಯ. ಅವರಿಂದ ಪೌಲನು ಅವರ ಮಧ್ಯದಲ್ಲಿ **ಜಗಳಗಳಿವೆ ಎಂದು ಬಲ್ಲವನಾಗಿದ್ದನು**. ಇದು ತೊಂದರೆದಾಯಕವಾದ ಬೆಳವಣಿಗೆಯಾಗಿತ್ತು.

**ವಚನ 12.** ಈ ವಚನದಲ್ಲಿರುವ ವಾಕ್ಯಭಾಗವನ್ನು ಮೌಲ್ಯಮಾಪನ ಮಾಡಲು ವಿಶೇಷ ಕಾಳಜಿ ಅವಶ್ಯವಾಗಿದೆ. ಇದರ ಅರ್ಥೈಸುವಿಕೆಯು 1 ಕೊರಿಂಥದವರಿಗೆ ಬರೆದ ಪತ್ರದ ಪ್ರಾರಂಭದ ಅಧ್ಯಾಯಗಳನ್ನು ಓದುವದರ ಮೇಲೆ ಪ್ರಭಾವವನ್ನು ಬೀರುತ್ತದೆ. ಅಪೊಸ್ತಲನು ಕೊರಿಂಥದಲ್ಲಿ ಕಾರ್ಯಮಾಡುತ್ತಿರುವ ವಿಭಾಗ ಮಾಡುವ ಆತ್ಮನ ಕ್ಷುಲ್ಲಕ ಹಾಸ್ಯಜನಕ ಚಿತ್ರವನ್ನು ನೀಡುತ್ತಿದ್ದಾನೆ ಎಂದು ಕೆಲವರು ಸಲಹೆನೀಡುತ್ತಾರೆ. ಹಾಗೂ, ಪೌಲನು ಅಧ್ಯಾಯ 3 ಮತ್ತು 4ರಲ್ಲಿ ಬೋಧಕರ ಹೆಸರುಗಳನ್ನು ಸೇರಿಸುವದರೊಂದಿಗೆ ವಿಭಾಗಗಳ ಕುರಿತು ಮಾತನಾಡುವಾಗ, ನಿಜವಾದ ಪಂಗಡಗಳು ಹೆಸರಿನ ಸುತ್ತಲೂ ರಚಿಸಲ್ಪಟ್ಟಿವೆ ಎಂಬುದನ್ನು ಸೂಚಿಸುತ್ತದೆ. ಪಕ್ಷಗಳು ಹೇಳಿಕೆಗಳನ್ನು ಅಳವಡಿಸಿಕೊಂಡಿದ್ದವು **ನಾನು ಪೌಲನವನು** ಅಥವಾ **ನಾನು ಅಪ್ಪೋಲೋಸನವನು** ಆದರೆ ಬೋಧಕರು ತಾವೇ ನಿಜವಾದ ಪಂಗಡಗಳ ರಚನೆಗೆ ಪ್ರೋತ್ಸಾಹಿಸಿದ್ದರು ಎಂಬುದರ ಕುರಿತಾಗಿ ಯಾವ ಸೂಚನೆಗಳಿಲ್ಲ. ಪಂಗಡಗಳನ್ನು ಸ್ಥಾಪಿಸಿದ್ದು ಕೊರಿಂಥದವರ ಕಾರ್ಯವಾಗಿತ್ತು.

ಸತ್ಯವೇದದ ಓದುಗರಿಗೆ ಪೌಲನು ಮತ್ತು ಅಪೊಲ್ಲೋಸನು ಕೊರಿಂಥಕ್ಕೆ ಹೋಗಿದ್ದರು ಎಂಬುದು ತಿಳಿದಿತ್ತು, ಆದರೆ ಪೇತ್ರನು[4] ಅಲ್ಲಿಗೆ ಹೋಗಿದ್ದನು ಎಂಬುದು ಸ್ಪಷ್ಟವಾಗಿಲ್ಲ. ಅಪೊಸ್ತಲರ ಕೃತ್ಯಗಳಲ್ಲಿ ಪೇತ್ರನ ಕುರಿತು ಕೊನೆಯ ಉಲ್ಲೇಖ ಯೆರೂಸಲೇಮಿನ ಸಭೆ ಎಂದು ಕರೆಯಲ್ಪಡುವ ಸಭೆಯಲ್ಲಿ (15:7). ಅವನು ಸಭೆಯ ನಂತರ ಕೆಲವು ಹಂತದಲ್ಲಿ ಯೆರೂಸಲೇಮನ್ನು ತೊರೆದಿರಬಹುದು ಮತ್ತು ಕೊರಿಂಥದಲ್ಲಿ ಸಮಯವನ್ನು ಕಳೆದಿರಬಹುದು. ಪರ್ಯಾಯವಾಗಿ, ಯೆಹೂದ್ಯ ಕ್ರೈಸ್ತರು ಯೆರೂಸಲೇಮಿನ ಸಭೆಯಿಂದ ಪತ್ರಗಳನ್ನು ತಿರುಗಿಸುತ್ತಿದ್ದರು (2 ಕೊರಿಂಥ 3:1 ನೋಡಿರಿ) ಬಹುಶಃ ಅವನು ಕೊರಿಂಥಕ್ಕೆ ಬಂದಿರಬಹುದು ಮತ್ತು ಪೇತ್ರನ ಹೆಸರಿನಲ್ಲಿ ಮಾತನಾಡಲು ಪ್ರೇರೆಪಿಸಿರಬಹುದು. ಅಪೊಸ್ತರಕೃತ್ಯಗಳು 15:1 ಮತ್ತು ಗಲಾತ್ಯ 2:11, 12 ಸ್ವಲ್ಪಸಮಯ ಪೌಲನ ವಿರೋಧಿಗಳಾಗಿದ್ದ ಯೆಹೂದ್ಯ ಕ್ರೈಸ್ತರು ಹೇಗೆ ಅವನ ಹಿಂದೆ ಹೋಗಿ ಅವನ ಕಾರ್ಯವನ್ನು ಅವಹೇಳನ ಮಾಡಿದರು. ಮುಂದಕ್ಕೆ, 1 ಕೊರಿಂಥದವರಿಗೆ ಬರೆದ ಪತ್ರಿಕೆಯನ್ನು ಬರೆದ ವರ್ಷಗಳಲ್ಲಿ, ಸಭೆಯಲ್ಲಿ ಕೆಲವರು ಹಲವು ಗುಂಪುಗಳ ಪ್ರಭಾವದಲ್ಲಿ ಬಂದರು ಅವರು ಮೋಶೆಯ ಧರ್ಮಶಾಸ್ತ್ರವನ್ನು ರೂಪಾಂತರ ಹೊಂದಿದ ಯೆಹೂದೇತರರ ಮೇಲೆ ಹೇರಲು ಬಯಸಿದರು (2 ಕೊರಿಂಥ 3:4-11). ಕೆಲವರು ಪೇತ್ರನು ತಮ್ಮ ಪಂಗಡದ ನಾಯಕನೆಂದು ಪೇತ್ರನಿಗೆ ತಿಳಿಸದೇ ಹೇಳಿಕೊಂಡರು.

ಪೇತ್ರನ ವಿಷಯದಲ್ಲಿ ಏನೇ ಇರಲಿ, ಕ್ರಿಸ್ತನು ಆ ಪಟ್ಟಣಕ್ಕೆ ಬಂದಿರಲಿಲ್ಲ. ಕ್ರಿಸ್ತನ ಪಕ್ಷಗಳು ಹೇಗೆ ತೋರಿಬರುತ್ತವೆ ಎಂಬ ವಿಷಯದಲ್ಲಿ ಅವರು ಕೇವಲ ಆಶ್ಚರ್ಯ

ಸೂಚಿಸಬಹುದಾಗಿತ್ತು. ಅವರೇ ಕ್ರಿಸ್ತನವರಾಗಿರಲಿಲ್ಲವೋ? ಅಪೊಸ್ತಲರು ಮತ್ತೆ 3:4-9ರಲ್ಲಿ ಪಕ್ಷ ಪಂಗಡಗಳ ಕುರಿತು ಉಲ್ಲೇಖಿಸುವಾಗ ಅವನು ತನ್ನನ್ನು ಮತ್ತು ಅಪೊಲ್ಲೋಸನನ್ನು ಮಾತ್ರ ಹೆಸರಿಸಿದನು. 3:22ರಲ್ಲಿ ಕೇಫನ ಹೆಸರನ್ನು ಸೇರಿಸಿ ಉಲ್ಲೇಖಿಸುತ್ತಾನೆ, ಆದರೆ ಇಲ್ಲಿ ಪಕ್ಷಗಳು ಮಾತ್ರ ವಿಷಯವಾಗಿರಲಿಲ್ಲ. ಪೌಲ ಮತ್ತು ಅಪೊಲ್ಲೊಸರು ಕೊರಿಂಥದಲ್ಲಿರುವ ನಾಯಕರು, ಮತ್ತು ಅವರ ವಯಕ್ತಿಕ ವರ್ತನೆಗಳಲ್ಲಿ ಗಮನೀಯವಾದ ವ್ಯತ್ಯಾಸವಿದ್ದಾಗ್ಯೂ, ಪಟ್ಟಣದಲ್ಲಿದ್ದ ಕೆಲವು ಕ್ರೈಸ್ತರು ಬಹುಶಃ ಒಬ್ಬನನ್ನು ಇಲ್ಲವೇ ಮತ್ತೊಬ್ಬನನ್ನು ವೀರಾಗ್ರಣಿ ಎಂದು ಪರಿಗಣಿಸುತ್ತಿದ್ದರು.

ತತ್ವಶಾಸ್ತ್ರದಲ್ಲಿರುವ ವ್ಯತ್ಯಾಸಗಳನ್ನು ನಿವೇದಿಸುವ ಆಧಾರದ ಮೇಲೆ ಪಂಗಡಗಳು ರಚಿಸಲ್ಪಡುವ ಸಾಧ್ಯತೆ ಇತ್ತು. ಆ ನಂತರ ಒಂದು ಪಕ್ಷದವರು ಪೌಲನನ್ನು ಆತುಕೊಂಡರು ಮತ್ತು ಇನ್ನೊಬ್ಬರು ಅಪೊಲ್ಲೋಸನನ್ನು. ಈ ಮಿಶ್ರಣಕ್ಕೆ ಇನ್ನೊಂದು ಹೆಸರನ್ನು ಸೇರಿಸುವದರ ಮೂಲಕ, ಪೌಲನು ಅವರ ನಡೆತೆಯ ಅಸಂಬದ್ಧತೆಯನ್ನು ಪ್ರದರ್ಶಿಸಿದನು. "ಪೇತ್ರನ ಪಕ್ಷವನ್ನು ಮಾಡೋಣ," ಬಹುಶಃ ಅವನು ಹೇಳಿರಬಹುದು ಮತ್ತು "ಕ್ರಿಸ್ತನ ಪಕ್ಷವನ್ನು." ಕೊರಿಂಥದಲ್ಲಿರುವ ಪಕ್ಷಗಳು ವಯಕ್ತಿಕ ಆಧ್ಯತೆಯ ಸುತ್ತಲೂ ಮತ್ತು ತತ್ವಜ್ಞಾನವನ್ನು ಆತುಕೊಳ್ಳುವದರ ಸುತ್ತಲೂ ತಿರುಗುತ್ತಿರಬಹುದೆಂದು ತೋರಿಬರುತ್ತದೆ, ಅದು ಪೌಲನಾಗಲಿ ಅಪೊಲ್ಲೋಸನಾಗಲಿ ಹೆಚ್ಚು ಅನುಕೂಲಕರ ಎಂಬು ಭಾವಿಸಿರಬಹುದು. ಒಂದುವೇಳೆ ಪಂಗಡಗಳು ಪೇತ್ರನಿಗೆ ಅಥವಾ ಕ್ರಿಸ್ತನಿಗೆ ಸ್ಥಿರವಾಗಿ ಅಂಟಿಕೊಂಡಿದ್ದರೆ, ಪೇತ್ರನ ಪಕ್ಷವು ಗಲಾತ್ಯದ ವರೆಗೆ ಪೇತ್ರನ ಹಿಂದೆ ಹೋದ ಬೋಧಕರಿಗೆ ಸಮನಾಗುತಿತ್ತು (ಗಲಾತ್ಯ 5:3-6). ಒಂದುವೇಳೆ ಅಲ್ಲಿ ಕ್ರಿಸ್ತನ ನಿಜವಾದ ಪಂಗಡವಿದ್ದಲ್ಲಿ, ಅದರ ಸದಸ್ಯರು ತಾವು ಶೇಷ್ಠರೆಂದು ಹೇಳಿಕೊಳ್ಳುತ್ತಿದ್ದರು ಯಾಕಂದರೆ ಕರ್ತನಲ್ಲಿ ಅವರಿಗಿರುವ ಸ್ವಾಮಿಭಕ್ತಿ - ಆ ಸ್ವಾಮಿಭಕ್ತಿಯು ಅವರನ್ನು ಇತರರಿಗಿಂತ ಹೆಚ್ಚು ಪ್ರತಿಷ್ಟರು ಎಂಬ ಭಾವನೆಯನ್ನು ತರುತಿತ್ತು.

ಪೌಲನು ಪಂಗಡಗಳು ವಿಭಿನ್ನ ಸಂಗತಿಗಳನ್ನು ಬೋಧಿಸಿದವು ಎಂಬುದಕ್ಕೆ ಸೂಚನೆಯನ್ನು ನೀಡಿಲ್ಲ. ಪ್ರಾಚೀನ ಲೋಕದಲ್ಲಿ, ವಯಕ್ತಿಕ ನಿಷ್ಠೆ ಎಲ್ಲವೂ ಆಗಿತ್ತು; ತತ್ವಗಳೆಡೆಗೆ ನಿಷ್ಠೆ ಕೆಲವೊಮ್ಮೆ ಅಸ್ತಿತ್ವದಲ್ಲಿರಲಿಲ್ಲ. ಪೌಲ, ಅಪೊಲ್ಲೋಸ ಮತ್ತು ಪೇತ್ರನು ಸಹ, ಬೇರೆಬೇರೆ ಕ್ಷೇತ್ರಗಳಿಗೆ ಒತ್ತು ನೀಡಿದ್ದಾಗ್ಯೂ, ಈ ನಂಬಿಕೆಯ ಸಿದ್ದಾಂತಗಳ ಕೇಂದ್ರ ವಿಷಯದಲ್ಲಿ ಒಂದೇ ಮನಸ್ಸನ್ನು ಹೊಂದಿದ್ದರು. ಅಪೊಸ್ತಲ ಕೃತ್ಯಗಳಲ್ಲಿ ಅಪೊಲ್ಲೋಸನ ವರ್ಣನೆ ಅವನ ವಾಕ್ಚಾಚಾತುರ್ಯವುಳ್ಳವನು ಮತ್ತು ಜ್ಞಾನಿಯೂ ಆಗಿದ್ದಾನೆಂದು ಸೂಚಿಸುತ್ತದೆ. ಬಹುಶಃ ಅವನು ಜನರ ಮಧ್ಯದಲ್ಲಿ ಗೌರವವನ್ನು ಹೊಂದಿರುವ ಮತ್ತು ಲೋಕದ ಜ್ಞಾನಕ್ಕೆ ಮಹತ್ವವನ್ನು ನೀಡುತ್ತಿದ್ದವರಲ್ಲಿ ಹೆಚ್ಚು ಪ್ರಾಮುಖ್ಯವಾದ ವ್ಯಕ್ತಿಯಾಗಿರಬಹುದು. ಆ ಸಮಯದಲ್ಲಿ, ಅವರು ತಾವು ಇತರರಿಗಿಂತ ಶ್ರೇಷ್ಠರು ಎಂದು ಪರಿಗಣಿಸುತ್ತಿರಬಹುದು.

**ವಚನ 13.** ಸಂಗತಿಗಳ ಅಪೊಸ್ತಲರ ನಿರ್ವಿಕಾರ ವರ್ಣನೆ ಬೇಗನೇ ರೇಗಿಸುವತ್ತ ತಿರುಗಿತು. ಅವನು ಪ್ರಶ್ನೆಗಳ ಸರಣಿಯನ್ನು ಪ್ರಾರಂಭಿಸಿದನು **ಕ್ರಿಸ್ತನು ವಿಭಾಗವಾಗಿದ್ದಾನೋ?** ಒಬ್ಬ ಮನುಷ್ಯನು ಕ್ರಿಸ್ತನನ್ನು ವಿಭಾಗಿಸಿ ಪಾಲುಮಾಡಿಕೊಳ್ಳಬಹುದೋ? ಅಪೊಸ್ತಲರಿಗೆ, ಕ್ರಿಸ್ತನ ದೇಹವನ್ನು ವಿಭಾಗಿಸುವದೆಂದರೆ

ಕರ್ತನನ್ನೇ ವಿಭಾಗಿಸಿದಂತೆ. ಸಭೆಯು ಕ್ರಿಸ್ತನ ದೇಹವಾಗಿದೆ (ಎಫೆಸ್ಸ 1:22, 23) ಒಂದು ಗ್ರೀಕ್ ಅನುವಾದ ನಿಖರವಾಗಿ μεμέρισται (*memeristai*) ಹೀಗಿದೆ "ಕ್ರಿಸ್ತನು ವಿಭಾಗವಾಗಿದ್ದಾನೋ?" (NIV), ಪೌಲನ ಭಾವನೆಯನ್ನು ಸೆರೆಹಿಡಿಯುತ್ತದೆ. ಅಪನಂಬಿಕೆ ಉತ್ತರವನ್ನು ಕೇಳುತ್ತದೆ, "ಕ್ರಿಸ್ತನ ದೇಹವನ್ನು ಭಾಗಗಳಾಗಿ ವಿಂಗಡಿಸಲು ನೀವು ಧೈರ್ಯಮಾಡುತ್ತೀರೋ?"

ಪೌಲನು ಅಪೊಲ್ಲೋಸನು ಅಥವಾ ಕೇಫನು ನಿಮಗಾಗಿ ಕ್ರೂಜೆಗೆ ಹಾಕಲ್ಪಟ್ಟಿದ್ದಾರೋ? ಎಂದು ಕೇಳಿರಬಹುದು. ಆದರೆ ರಾಜ್ಯದ ಸಂಗತಿಗಳು ವಯಕ್ತಿಕ ಕೊಂಡಿಯನ್ನು ಹೊಂದಿವೆ. ಇತರರು ತಮಗಾಗಿ ಮಾತನಾಡಬಹುದು; ಪೌಲನು ತನ್ನ ಸ್ವಂತ ಹೆಸರನ್ನು ಮಾತ್ರ ಸ್ಪಷ್ಟವಾಗಿಸಿದನು. **ಪೌಲನು ನಿಮಗಾಗಿ ಕ್ರೂಜೆಗೆ ಹಾಕಲಡಲಿಲ್ಲ ಅಲ್ಲವೋ?** ಅಪೊಸ್ತಲರು ಅವನ ಹೆಸರನ್ನು ತೆಗೆದುಕೊಳ್ಳುವದು ಅವನನ್ನು ಕರ್ತನೆಂದು ಹೇಳಿಕೊಳ್ಳುದಕ್ಕೆ ಸರಿಸಮಾನವಾಗಿದೆ ಎಂದು ನಂಬಿದ್ದನು.

ಪೌಲನ ಮೂರನೆಯ ಪ್ರಶ್ನೆ - **ನೀವು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದೀರೋ?** - ಇದು ನಿರ್ಧಿಷ್ಟವಾಗಿ ಆಸಕ್ತಿದಾಯಕವಾಗಿದೆ. ಇದು ಪ್ರಕಾಶಮಾನವಾದ ಸೂಕ್ಷ್ಮಪರಿಜ್ಞಾನವನ್ನು ನೀಡುತ್ತದೆ ಇದರೊಟ್ಟಿಗೆ ಅಪೊಸ್ತಲನು ದೀಕ್ಷಾಸ್ನಾನ ಹೊಂದಿಕೊಳ್ಳುವದು ಮತ್ತು ಕ್ರಿಸ್ತನಲ್ಲಿ ನೆಲೆಯಾಗಿರುವದು. ಈ ಪ್ರಶ್ನೆಯನ್ನು ಕೇಳುವದರ ಮೂಲಕ, ಪೌಲನು ದೀಕ್ಷಾಸ್ನನವಿಲ್ಲದೇ ಕ್ರೈಸ್ತರಾಗಿರುವದನ್ನು ಗ್ರಹಿಸಿಕೊಳ್ಳಲೂ ಅಸಾಧ್ಯವಾಗಿದೆ (ರೋಮಾ 6:3, 4 ನೋಡಿರಿ). "ಪೌಲನು ನಿಮಗಾಗಿ ಕ್ರೂಜೆಗೆ ಹಾಕಲ್ಪಡಲಿಲ್ಲ ಅಲ್ಲವೋ?" ಎಂದು ಅವನು ಕೇಳುವಾಗ ತಮಗಾಗಿ ಕ್ರೂಜೆಗೆ ಹಾಕಲ್ಪಟ್ಟವನು ಕ್ರಿಸ್ತನು, ಪೌಲನಲ್ಲ ಎಂದು ಹೇಳುವದಾಗಿದೆ. ಅವನು ತಕ್ಷಣವೇ ಪ್ರಶ್ನೆಯನ್ನು ಅನುಸರಿಸಿ ಅವರು ದೀಕ್ಷಾಸ್ನಾನ ಹೊಂದಿರುವದಕ್ಕೆ ಒಂದು ಬೇಡಿಕೆಯನ್ನು ಇಡುತ್ತಾನೆ. ಅವನು ಕ್ರೂಜೆಯಿಂದ ದೊರಕುವ ಲಾಭಗಳಲ್ಲಿ ಪಾಲುಗಾರರಾಗಿರುವದಕ್ಕೆ ದೀಕ್ಷಾಸ್ನಾನವು ಒಂದು ಸಾಕ್ಷಿಯಾಗಿದೆ ಎಂದು ತನ್ನ ಓದುಗರು ತಿಳಿದುಕೊಂಡಿದ್ದಾರೆ ಎಂಬ ನಂಬಿಕೆ ಅವನಲ್ಲಿತ್ತು (ಕೊಲಸ್ಸೆ 2:12 ನೋಡಿರಿ).

**ವಚನ 14.** ಪೌಲನ ಹೆಸೆರಿನಲ್ಲಿ ದೀಕ್ಷಾಸ್ನಾನ ನೀಡಲು ಒಬ್ಬ ವಿಶ್ವಾಸಿಗೆ ಪೌಲನು ತಾನೇ ಸ್ವಂತಃ ದೀಕ್ಷಾಸ್ನಾನ ನೀಡುವದು ಅವಶ್ಯವಿರಲಿಲ್ಲ. ಆದಾಗ್ಯೂ, ಅಪೊಸ್ತಲನು ಅವನು ಸಹ ಇಂಥಹ ಸಂಗತಿಗಳನ್ನು ತಿಳಿದುಕೊಳ್ಳುವದರ ಭಾಗವಾಗಿದ್ದಾನೆ ಎಂಬುದನ್ನು ತಿಳಿದುಕೊಳ್ಳಲು ಬಯಸಿದನು. ಕೆಲವು ಜನರು ಪೌಲನು ನಮಗೆ ದೀಕ್ಷಾಸ್ನಾನ ನೀಡಿದ್ದಾನೆ ಎಂದು ಹೇಳಿಕೊಳ್ಳುತ್ತಿದ್ದರು, ಆದರೆ ಯಾರೊಬ್ಬರೂ ನಿಖರವಾಗಿ ಆತನು ತನ್ನ ಸ್ವಂತ ಹೆಸರಿನಲ್ಲಿ ದೀಕ್ಷಾಸ್ನಾನ ನೀಡಿದ್ದಾನೆ ಎಂದು ಹೇಳಲು ಸಾಧ್ಯವಿರಲಿಲ್ಲ. ಪೌಲನು ಈ ಅಭಿಪ್ರಾಯವನ್ನು ನಿರರ್ಥಕಗೊಳಿಸಿದನು.

ಆ ಕ್ಷಣದಲ್ಲಿ, ಅಪೊಸ್ತಲನು ತಾನು ವಯಕ್ತಿಕವಾಗಿ ದೀಕ್ಷಾಸ್ನಾನ ನೀಡಿದ ಇಬ್ಬರು ವ್ಯಕ್ತಿಗಳನ್ನು ಜ್ಞಾಪಿಸಿಕೊಳ್ಳುತ್ತಾನೆ: ಕ್ರಿಸ್ಪನು ಮತ್ತು ಗಾಯನು. ಪೌಲನು ಏಕೆ ಈ ಇಬ್ಬರಿಗೆ ದೀಕ್ಷಾಸ್ನಾನ ಮಾಡಿಸಿದನು ಎಂಬುದನ್ನು ಗ್ರಹಿಸುವದು ನಮಗೆ ಬಿಟ್ಟಿದ್ದಾಗಿದೆ. ಇಬ್ಬರೂ ಶ್ರೀಮಂತರು ಮತ್ತು ಪ್ರಾಮುಖ್ಯ ವ್ಯಕ್ತಿಗಳೂ ಆಗಿದ್ದರು. ಪೌಲನು ಈ ಪತ್ರವನ್ನು ಕೊರಿಂಥದಿಂದ ರೋಮಾಪುರದವರಿಗೆ ಬರೆಯುವಾಗ ಗಾಯನು ತಾನೇ ಅತಿಥಿಸತ್ಕಾರ

ಮಾಡುವವನಾಗಿದ್ದನು (ರೋಮ 16:23). ಸಹಜವಾಗಿ, ಗಾಯನು ದೊಡ್ಡ ಮನೆಯನ್ನು ಹೊಂದಿರಬಹುದು. ಕ್ರಿಸ್ಪನು ರೂಪಾಂತರ ಹೊಂದುವ ಪೂರ್ವದಲ್ಲಿ ಕೊರಿಂಥದ ಯೆಹೂದ್ಯ ದೇವಾಲಯದ ನಾಯಕನಾಗಿದ್ದನು (ಅ.ಕೃ. 18:8). ಪೌಲನು ಅವರಿಗೆ ಅವರ ಉನ್ನತವಾದ ಸಾಮಾಜಿಕ ಸ್ಥಾನದಿಂದಾಗಿ ಸ್ವತಃ ದೀಕ್ಷಾಸ್ನಾನ ಮಾಡಿಸಿರಬಹುದು. ಅವರ ದೀಕ್ಷಾಸ್ನಾನವು ಸಭೆಯಲ್ಲಿ ವಿಶೇಷವಾದ ಸಂದರ್ಭವಾಗಿಬಹುದು. ಗ್ರಡ್ ಥೀಸೇನ್ ಹೀಗೆ ವೀಕ್ಷಿಸುತ್ತಾರೆ, "ಪೌಲನು ತಾನು ದೀಕ್ಷಾಸ್ನಾನ ಮಾಡಿಸುವದನ್ನು ಸಮುದಾಯದ ಕೆಲವು ಪ್ರಭಾವಶಾಲಿ ಮತ್ತು ಪ್ರಾಮುಖ್ಯ ಸದಸ್ಯರಿಗೆ ಮೀಸಲಾಗಿಟ್ಟಂತೆ ತೋರಿಬರುತ್ತದೆ."[5] ಸಭೆಯಲ್ಲಿರುವ ಪಂಗಡಗಳು ಬಹುಶಃ ಉನ್ನತ ಮತ್ತು ಕೆಳಗಿನ ವರ್ಗದ ಜನರ ಮಧ್ಯದಲ್ಲಿರುವ ಗಲಭೆಯ ಕಾರಣದಿಂದಾಗಿರಬಹುದು (1 ಕೊರಿಂಥ 11:20-22 ನೋಡಿರಿ).

**ವಚನ 15.** ಪೌಲನ ರಕ್ಷಣಾರ್ಥಕ ನಿಲುವು ಅವನಿಗೂ ಸಹ ಸಭೆಯಲ್ಲಿ ವಿಮರ್ಶಕರು ಇದ್ದರು ಎಂಬುದನ್ನು ಸೂಚಿಸುತ್ತದೆ. ಕೆಲವರು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ ಎಂದು ಹೇಳಿದರೂ ಕೂಡಾ, ಅಪೊಸ್ತಲನು ಅದು ತನ್ನ ತಿಳುವಳಿಕೆಯಿಂದ ಅಥವಾ ಸಮ್ಮತಿಯಿಂದ ನಡೆಯಲಿಲ್ಲ ಎಂದು ಹೇಳಲು ಬಯಸಿದ್ದನು. ಅವನು ಖಂಡಿತವಾಗಿಯೂ ಕೊರಿಂಥದಲ್ಲಿರುವ ಕ್ರೈಸ್ತರಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡ ಯಾರೂ ತನ್ನ **ಹೆಸರಿನಲ್ಲಿ ದೀಕ್ಷಾಸ್ನಾನ** ಮಾಡಿಸಿಕೊಂಡಿದ್ದೇವೆ ಎಂದು ಹೇಳಲಾಗುವದಿಲ್ಲ ಎಂದು ಹೇಳುತ್ತಾನೆ.

**ವಚನ 16.** ತನ್ನ ಸ್ವಂತ ಕೈಗಳಿಂದ ಕ್ರಿಸ್ಪನಿಗೂ ಮತ್ತು ಗಾಯನಿಗೂ ಮಾತ್ರ ದೀಕ್ಷಾಸ್ನಾನ ಮಾಡಿಸಿದ್ದೇನೆ ಎಂದು ಹೇಳು ಪೌಲನು ಹಿಂದಿನ ಪಥಕ್ಕೆ ಹೋಗುವವನಾಗಿದ್ದಾನೆ. ತಾನು ಸ್ತೇಫನ, ಅಪೊಸ್ತಲರ ಕೃತ್ಯಗಳಲ್ಲಿ ಅಥವಾ ರೋಮಾಪುರ 16ರಲ್ಲಿ ಆತನ ಕುರಿತು ಉಲ್ಲೇಖವಿಲ್ಲದ ಒಬ್ಬ ಕ್ರೈಸ್ತ ಮತ್ತು **ಸ್ತೇಫನನ ಕುಟುಂಬದವರಿಗೂ**, ಸಹ ದೀಕ್ಷಾಸ್ನಾನ ಮಾಡಿಸಿದ್ದೇನೆ ಎಂಬುದನ್ನು ಜ್ಞಾಪಿಸಿಕೊಳ್ಳುತ್ತಾನೆ. "ಮನೆವಾರ್ತೆ" ಎಂಬ ಪದ ಇಲ್ಲಿ ಅಥವಾ ಅ.ಕೃ. 16:15, 34, ದೊಡ್ಡವರೊಂದಿಗೆ ಮಕ್ಕಳು ಸಹ ದೀಕ್ಷಾಸ್ನಾನ ಹೊಂದಿದರು ಎಂದು ಸೂಚಿಸುವದಿಲ್ಲ. ಯಾರು ದೀಕ್ಷಾಸ್ನಾನಕ್ಕೆ ಯೋಗ್ಯ ಅಭ್ಯರ್ಥಿಗಳು ಎಂಬುದನ್ನು ಇತರ ಕೆಲವು ಆಧಾರಗಳ ಮೇಲೆ ನಿರ್ಧರಿಸಬಹುದಾಗಿತ್ತು "ಮನೆವಾರ್ತೆ" ಎಂಬ ಉಲ್ಲೇಖದ ಮೇಲೆ ಅಲ್ಲ.

ಸ್ತೇಫನನು ಕ್ರಿಸ್ಪ ಮತ್ತು ಗಾಯನೊಂದಿಗೆ, ಕೊರಿಂಥ ಸಭೆಯಲ್ಲಿ ಪ್ರಾಮುಖ್ಯ ವ್ಯಕ್ತಿಯಾಗಿರಬಹುದು. ಪೌಲ ನಂತರ ಕೊರಿಂಥದವರನ್ನು ಜ್ಞಾಪಿಸಿಕೊಂಡಿರಬಹುದು ಏನಂದರೆ ಸ್ತೇಫನನು ಕೊರಿಂಥದಲ್ಲಿ ದೀಕ್ಷಾಸ್ನಾನ ಹೊಂದಿದ ಮೊದಲನೆಯ ವ್ಯಕ್ತಿಯಾಗಿರಬಹುದು ಮತ್ತು ಜನರನ್ನು ಸ್ತೇಫನನಂಥಹ ಮನುಷ್ಯರನ್ನು ಸಭೆಯ ಆತ್ಮೀಕ ನಾಯಕರಾಗುವದಕ್ಕೆ ಹುಡುಕಬೇಕು ಎಂದು ಬೇಡಿಕೊಂಡನು (16:15, 16). ಸ್ತೇಫನನು ಕೊರಿಂಥದ ಸಭೆಯ ಪತ್ರವನ್ನು ತೆಗೆದುಕೊಂಡು ಎಫೆಸಕ್ಕೆ ಸಂಚರಿಸಿದ ಇತರರಲ್ಲಿ ಒಬ್ಬನಾಗಿರಬಹುದು (7:1ಅ; 16:17). ಆತನೊಂದಿಗೆ ಜೊತೆಗೂಡಿದ ಇಬ್ಬರೂ ಮನುಷ್ಯರು ಗುಲಾಮರಲ್ಲಿ ಸಾಮಾನ್ಯವಾದ ಹೆಸರನ್ನು ಹೊಂದಿದ್ದರು. "ಫಾರಚೂನಸ್" ಎಂದರೆ "ಅದೃಷ್ಟವಂತ"; "ಆಖಾಯಿಸ್" ಇದು ಅವನು ಅಖಾಯ ಕ್ಷೇತ್ರಕ್ಕೆ ಕೊರಿಂಥ ಸರಕಾರದ ರಾಜಧಾನಿಯಾಗಿರುವ ಅಖಾಯದವನು ಎಂದು ಗುರಿತಿಸಬಹುದಾದ ಹೆಸರಾಗಿತ್ತು.

ಸ್ತೇಫನನು ಕೊರಿಂಥದಿಂದ ಪೌಲನನ್ನು ಬೆಟ್ಟಿಯಾಗಲು ಎಫೆಸೆಗೆ ಹೋಗುವಾಗ ತನ್ನ ಗುಲಾಮರಲ್ಲಿ ಕೆಲವರನ್ನು ಕರೆದುಕೊಂಡು ಹೋಗಿರಬಹುದು. ಪ್ರಯಾಣದಲ್ಲಿ ಯಾವಾಗಲೂ ಅಪಾಯವಿರುತಿತ್ತು. ಒಬ್ಬನೇ ಪ್ರಯಾಣಮಾಡುವದಕ್ಕಿಂತ ಮೂರು ಜನರು ಒಟ್ಟಾಗಿ ಹೋಗುವದು ಉತ್ತಮವಾಗಿತ್ತು. ತಾನು ಸ್ತೇಫನನಿಗೆ ದೀಕ್ಷಾಸ್ನಾನ ನೀಡಿದ್ದೇನೆ ಎಂಬುದನ್ನು ಒಪ್ಪಿಕೊಂಡ ನಂತರ ಪೌಲನು ಮುಂದಕ್ಕೆ ಏನನ್ನೂ ಮರೆಯದಂತೆ ಅವರ ಇಚ್ಚೆಯನ್ನು ಪೂರ್ತಿಗೊಳಿಸಲು ತನನ್ನು ತಾನು ರಕ್ಷಿಸಿಕೊಂಡನು.

ನಾನು ಇನ್ನು ಯಾರಾದರಿಗೂ ದೀಕ್ಷಾಸ್ನಾನ ನೀಡಿದ್ದೇನೋ ಎನೋ ಗೊತ್ತಿಲ್ಲ, ಎಂದು ಅಪೊಸ್ತಲನು ಅರಿಕೆ ಮಾಡಿದನು. ಪೌಲನಿಗೆ ಅವರಿಗೆ ಮೋಸಮಾಡುವ ಉದ್ದೇಶವಿರಲಿಲ್ಲ. ಒಂದುವೇಳೆ ಅವನು **ತಾನು ವಯಕ್ತಿಕವಾಗಿ ದೀಕ್ಷಾಸ್ನಾನ ನೀಡಿದ ಇತರರನ್ನು ಉಲ್ಲೇಖಿಸಲು** ವಿಫಲನಾಗಿದ್ದರೆ ಅದು ಅವನ ನೆನೆಪಿನ ಶಕ್ತಿಯ ವಿಫಲತೆಯಿಂದಾಗಿ. ಅವನ ಮಾತುಗಳು ಪ್ರೇರೆಪಣೆಗಿಂತ ಹೆಚ್ಚಾಗಿ ಪವಿತ್ರಾತ್ಮನು ಹೇಳಿದ ಮಾತುಗಳಾಗಿದ್ದವು ಎಂಬುದನ್ನು ಜ್ಞಾಪಿಸಿದನು. ಪವಿತ್ರಾತ್ಮನು ಅಪೊಸ್ತಲನು ಎಷ್ಟು ಜನರಿಗೆ ದೀಕ್ಷಾಸ್ನಾನ ನೀಡಿದ್ದಾನೆ ಎಂಬುದನ್ನು ಬಲ್ಲವನಾಗಿದ್ದನು; ಆದರೆ ಪೌಲನಿಗೆ ಇದು ಗೊತ್ತಿರಲಿಲ್ಲ.

## "ಕ್ರಿಸ್ತನ ಕ್ರೂಜೆಯ ಮೇಲೆ ಕೇಂದ್ರಿಕರಿಸಿರಿ" (1:17)

**[17]ದೀಕ್ಷಾಸ್ನಾನಮಾಡಿಸುವದಕ್ಕಲ್ಲ, ಸುವಾರ್ತೆಯನ್ನು ಸಾರುವದಕ್ಕೇ ಕ್ರಿಸ್ತನು ನನ್ನನ್ನು ಕಳುಹಿಸಿದನು. ಆದರೆ ವಾಕ್ಚಾತುರ್ಯದಿಂದ ಸಾರಬೇಕೆಂದು ಕಳುಹಿಸಲಿಲ್ಲ; ಹಾಗೆ ಸಾರಿದರೆ ಕ್ರಿಸ್ತನ ಶಿಲುಬೆಯು ನಿರರ್ಥಕವಾಗುವದು.**

**ವಚನ 17.** ಪೌಲನು ತನ್ನ ಸ್ವಂತ ಕೈಗಳಿಂದ ಕೊರಿಂಥದವರಲ್ಲಿ ಕೆಲವರಿಗೆ ಮಾತ್ರ ದೀಕ್ಷಾಸ್ನಾನ ಮಾಡಿಸಲು ಕಾರಣವೇನಂದರೆ ಕರ್ತನು ಅವನನ್ನು **ಸುವಾರ್ತೆಯನ್ನು ಸಾರುವದಕ್ಕೆ** ಕಳುಹಿಸಿದನು. ಪೌಲನ ಉಪದೇಶಿಸುವ ರೀತಿ ಮತ್ತು ಅವನು ಮಾತನಾಡಿದುದರ ತಾತ್ಪರ್ಯ ಕರ್ತನ ಪ್ರಕಟನೆಯನ್ನು ಆಧರಿಸಿದ್ದವು. ಕ್ರಿಸ್ತನ ಅಪೊಸ್ತಲನ ಅಧಿಕಾರ ತಡೆಯಲ್ಪಟ್ಟಿತು ಯಾಕಂದರೆ ಪೌಲನು ಕೊರಿಂಥದಲ್ಲಿ ಬೋಧಿಸಿದ್ದನು. ದೀಕ್ಷಾಸ್ನಾನ ಕ್ರಿಸ್ತನನ್ನು ದೇಹದ ಮೂಲಕ ಅರಿಕೆಮಾಡುವದಾಗಿದೆ; ಯಾರ ಹಸ್ತದಲ್ಲಿ ದೀಕ್ಷಾಸ್ನಾನವಾಗಿದೆ ಅದು ವ್ಯತ್ಯಾಸವನ್ನು ತರುವದಿಲ್ಲ. ಒಬ್ಬನು ತನ್ನ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನ ಹೊಂದುವಾಗ ಕರ್ತನು ಏನು ಮಾಡುತ್ತಾನೆ ಅದು ಮಹತ್ವವನ್ನು ಹೊಂದಿರುತ್ತದೆ. ಅಪೊಸ್ತಲನ ಮಾತುಗಳಲ್ಲಿ ದೀಕ್ಷಾಸ್ನಾನವು ಆಯ್ಕೆಯಾಗಿದೆ ಎಂಬುದಕ್ಕೆ ಯಾವ ಸೂಚನೆಯನ್ನೂ ನೀಡುವದಿಲ್ಲ. ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದುವದು ಎಂದರೆ ಹೂಣಲ್ಪಟ್ಟು ಆತನೊಂದಿಗೆ ಎಬ್ಬಿಸಲ್ಪಡುವದಾಗಿದೆ (ರೋಮಾ 6:4; ಕೊಲಸ್ಸೆ 2:12). ದೀಕ್ಷಾಸ್ನಾನದಲ್ಲಿ ಕ್ರೈಸ್ತರು ತೊಳೆಯಲ್ಪಡುತ್ತಾರೆ ಮತ್ತು ಶುದ್ದೀಕರಿಸಲ್ಪಡುತ್ತಾರೆ (1 ಕೊರಿಂಥ 6:11) ನಂಬಿಕೆಯಿಂದ ಕುರಿಮರಿಯ ವಿಮೋಚಿಸುವ ರಕ್ತದಿಂದಾಗಿ.

ಪೌಲನು ಒಂದು ವಿಧದ ಜ್ಞಾನದಿಂದ ತನ್ನ ಸ್ವಂತ ಬೋಧನೆಯಲ್ಲಿ ವ್ಯತ್ಯಾಸವನ್ನು ತೋರಿಸಿ **ಕ್ರಿಸ್ತನ ಕ್ರೂಜೆಯನ್ನು** ಶೂನ್ಯವಾಗಿಸಿದನು, ಆತನು ಕೊರಿಂಥದವರು ಸಂಸ್ಕೃತಿಯ

ನಿರ್ಧರಿಸುವ ಜ್ಞಾನಕ್ಕಿಂತ ಸಭೆಯಲ್ಲಿರುವ ಪಂಗಡಗಳ ಮೌಲ್ಯಗಳು ದೊಡ್ಡ ಕಾರ್ಯವನ್ನು ಮಾಡುವವುಗಳಾಗಿವೆ ಎಂಬುದನ್ನು ಸ್ಪಷ್ಟಪಡಿಸಿದನು. ಅಪೊಸ್ತಲನ ಬೋಧನೆಯು ಆ ಅವಧಿಯಲ್ಲಿ ಕೊರಿಂಥ ಮತ್ತು ಇತರ ಗ್ರೀಕ್ ಪಟ್ಟಣಗಳಲ್ಲಿ ಕಾಣಿಸಿಕೊಂಡ ಅನೇಕ ಸಂಚಾರಿ ಬೋಧಕರ ಗುಣಲಕ್ಷಣಗಳನ್ನು ವಿವರಿಸುವ ವಿಧವಾಗಿರಲಿಲ್ಲ. ಅವನು ತನ್ನ ಕಲಿಯುವಿಕೆ ಮತ್ತು ವಾಕ್ಚಾತುರ್ಯದಿಂದ ಇತರರ ಮೇಲೆ ಪ್ರಭಾವ ಬೀರುವ ಯಾವುದೇ ಪ್ರಯತ್ನವನ್ನು ಮಾಡಲಿಲ್ಲ. ಅವನ ಸಂದೇಶವು ದೈವೀಕವಾದದ್ದಾಗಿತ್ತು. ಮಾನವ ಪ್ರಯತ್ನಗಳನ್ನು ಆತುಕೊಳ್ಳುವದೆಂದರೆ ಕ್ರಿಸ್ತನ ಕ್ರೂಜೆಯನ್ನು ಶೂನ್ಯಗೊಳಿಸುವದಾಗಿದೆ. ಪೌಲನು ಕ್ರಿಸ್ತನನ್ನು ಮೆಚ್ಚಿಸುವದಕ್ಕೆ ಪ್ರಯಾಸಪಟ್ಟನು ತನ್ನ ಸಂದೇಶದ ಮೂಲಕ ಮಾತ್ರವಲ್ಲ ಅದನ್ನು ಸಾರುವ ಶೈಲಿಯ ಮೂಲಕವು ಸಹ.

ಈಗಾಗಲೇ, ಪೌಲನು ತನ್ನ ಮಾತು ಮತ್ತು ಜ್ಞಾನದ ಮೂಲಕ ಕೊರಿಂಥದವರ ಮೇಲೆ ಪ್ರಭಾವ ಬೀರಿದ್ದನು, ಅವರು ಕ್ರಿಸ್ತನ ಕೃಪಾ ವರಗಳಲ್ಲಿ ಕೊರತೆಯಿಲ್ಲದವರಾಗಿದ್ದರೆ (1:5); ಆದರೆ ಕೆಲವು ವಿಶ್ವಾಸಿಗಳು ಇದಕ್ಕಿಂತ ಹೆಚ್ಚಿನದಲ್ಲಿ ಎದುರು ನೋಡುವವರಾಗಿದ್ದರು. ಆದರೆ ಒಂದು ಅಂಶವು, ಗ್ರೀಕೋ-ರೋಮನ್ ಲೋಕದಲ್ಲಿ ಕಲಿಯಬೇಕಾಗಿದ್ದ ಆಡಂಬರದ ಭಾಷೆ ಮತ್ತು ತತ್ವಜ್ಞಾನ ಅವರ ಆಕರ್ಷಣೆಯಾಯಿತು (3:18-20). ಅಪೊಸ್ತಲನು ಆ ಸಮಯದಲ್ಲಿದ್ದ ಆಡಂಬರದ ವಿಧಾನಗಳನ್ನು ಬಲ್ಲವನಾಗಿದ್ದನು, ಆದರೆ ಅವನು **ವಾಕ್ಚಾತುರ್ಯದೊಡನೆ ಬರಲಿಲ್ಲ.** ಅವನು ಮಾತಾಡುವದಾಗಲಿ ಅವನ ಬರವಣಿಗೆಗಳಾಗಲಿ ಅದರ ಪರಿಣಾಮದಿಂದಾಗಿ ಆಕರ್ಷಿಸಲ್ಪಡಲಿಲ್ಲ. ಸಭೆಯ ಸಾರ್ವಜನಿಕ ಪ್ರತಿರೂಪ ತಾತ್ಪರ್ಯದಲ್ಲಿ ಸಭೆಯೇನಾಗಿತ್ತೋ ಅದಕ್ಕಿಂತ ಹೆಚ್ಚು ಕಳಕಳಿಯನ್ನು ಹೊಂದಿದ್ದಾಗಿತ್ತು. ಪತ್ರಿಕೆಯ ಬರೆಯುವ ಮನುಷ್ಯನಾಗಿ ಅಪೊಸ್ತಲನ ಗೌರವ "ಕ್ರಿಸ್ತನ ಕ್ರೂಜೆಗಿಂತ" ಪ್ರಾಮುಖ್ಯವಾಗಿರಲಿಲ್ಲ. ಪೌಲನಿಗೆ, ಜ್ಞಾನವನ್ನು ಸಂಪಾದಿಸುವದು ಕ್ರೂಜೆಯ ಮೇಲೆ ತೋರಿಬಂದ ಕ್ರಿಸ್ತನ ಪ್ರೀತಿಯನ್ನು ನಿರರ್ಥಕಗೊಳಿಸುವದಾಗಿದೆ.

## ದೇವರ ಜ್ಞಾನವನ್ನು (1:18-31)

ಕೊರಿಂಥ ಮತ್ತು ಗ್ರೀಕ ಪಟ್ಟಣಗಳಲ್ಲಿ ಧಾರ್ಮಿಕ ವಾತಾವರಣ ವಾಕ್ಚಾತುರ್ಯಕ್ಕೆ ಮತ್ತು ಸೂಕ್ಷ್ಮ ವೀಕ್ಷಣೆಯನ್ನು ಪ್ರಶಂಸಿಸುವಂಥದಾಗಿತ್ತು. ಪೌಲನ ಮಾತುಗಳು ವಿಶಿಷ್ಟವಾದ ಆಡಂಬರದ ಕಲಿಯುವಿಕೆಯಿಂದ ಕೂಡಿರಲಿಲ್ಲ. ಸಭೆಯಲ್ಲಿರುವ ವಿಭಾಗಿಸುವ ಆತ್ಮ ಸಭೆಯಲ್ಲಿ ಕೆಲವು ಕ್ರೈಸ್ತರ ಗೌರವಕ್ಕೆ ಆಧ್ಯತೆಯನ್ನು ಮತ್ತು ನಿಷ್ಠೆಯನ್ನು ಬೆಂಬಲಿಸುವಂತದ್ದಾಗಿತ್ತು ಅದು ಇತರ ಕ್ರೈಸ್ತರ ಮೇಲೆ ದಬ್ಬಾಳಿಕೆ ಮಾಡುತಿತ್ತು. ಸಭೆಯು ಲೋಕದ ಅಳತೆಗೋಲಾದ ಬಲ ಮತ್ತು ಪ್ರಭಾವವನ್ನು ಅಳವಡಿಸಿಕೊಂಡಿತ್ತು. ಈ ಜುಗುಪ್ಸೆಯ ವಿರೋಧವಾಗಿ ಹೋರಾಡುತ್ತಾ, ಪೌಲನು, ಲೋಕವು ವ್ಯಾಖ್ಯಾನಿಸುವ ಬಲ ಮತ್ತು ಜ್ಞಾನ ಯೇಸುವನ್ನು ಕ್ರಿಸ್ತನೆಂದು ಅರಿಕೆ ಮಾಡುವವರ ಸಮುದಾಯ ಜೀವಿತದಲ್ಲಿ ಯಾವ ಪಾತ್ರವನ್ನೂ ಹೊಂದಿಲ್ಲ. ಅವರು ಸೇವಿಸುವ ಕರ್ತನು ಕ್ರೂಜೆಗೆ ಹಾಕಲ್ಪಟ್ಟನು. ದೇವರು ಲೋಕವು ತಿರಸ್ಕರಿಸಿದ ಸಂಗತಿಯನ್ನು ಆಯ್ದುಕೊಂಡನು. ಕೋರಿಂಥದ ಕ್ರೈಸ್ತರಲ್ಲಿ ಪಾಲುಹಂಚಿಕೆಯ ಸಮಸ್ಯೆಯಿತ್ತು; ಅವರ ನಡತೆ ಕ್ರಿಸ್ತನ ಆತ್ಮವನ್ನು ಗ್ರಹಿಸಿಕೊಳ್ಳಲು ಸಮರ್ಥರಾಗುವಂತೆ ಬದಲಾವಣೆ ಹೊಂದುವ ಅವಶ್ಯಕತೆಯಿತ್ತು.

## ಶಿಲುಬೆಯ ಸಂದೇಶ “ಹುಚ್ಚು” ಮಾತಾಗಿತ್ತು (1:18-25)

**[18]ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ, ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ.**
**[19]ಜ್ಞಾನಿಗಳ ಜ್ಞಾನವನ್ನು ನಾಶಮಾಡುವೆನು, ವಿವೇಕಿಗಳ ವಿವೇಕವನ್ನು ನಿರಾಕರಿಸುವೆನು ಎಂಬುದಾಗಿ ಶಾಸ್ತ್ರೋಕ್ತಿಯುಂಟಲ್ಲಾ. [20]ಜ್ಞಾನಿಯು ಎಲ್ಲಿ? ಶಾಸ್ತ್ರೀಯೆಲ್ಲಿ? ಇಹಲೋಕದ ತರ್ಕವಾದಿ ಎಲ್ಲಿ? ದೇವರು ಇಹಲೋಕಜ್ಞಾವನ್ನು ಹುಚ್ಚುತನವಾಗ ಮಾಡಿದ್ದಾನಲ್ಲವೇ.**
**[21]ಹೇಗಂದರೆ ಲೋಕವು ಜ್ಞಾನವೆನಿಸುವ ಮಾರ್ಗದಿಂದ ದೇವರನ್ನು ತಿಳುಕೊಳ್ಳದೇ ಹೋದದ್ದು. ದೇವರ ಜ್ಞಾನದ ಸಂಕಲ್ಪವೇ; ಹೀಗಾದ ಮೇಲೆ ಹುಚ್ಚು ಮಾತು ಎಣಿಸಿಕೊಂಡಿರುವ ನಮ್ಮ ಪ್ರಸಂಗದಿಂದಲೇ ನಂಬುಬವವರನ್ನು ದೇವರು ರಕ್ಷಿಸುವದು ದೇವರಿಗೆ ಒಳ್ಳೇದೆಂದು ತೋರಿತು. [22]ಯೆಹೂದ್ಯರು ಸೂಚಕಕಾರ್ಯಗಳನ್ನು ಕೇಳುತ್ತಾರೆ ಗ್ರೀಕರು ಜ್ಞಾನವನ್ನು ಹುಡುಕುತ್ತಾರೆ; [23]ನಾವಾದರೋ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ. ಇಂಥ ಕ್ರಿಸ್ತನ ಸಂಗತಿಯು ಯೆಹೂದ್ಯರಿಗೆ ವಿಘ್ನವೂ ಅನ್ಯಜನರಿಗೆ ಹುಚ್ಚುಮಾತೂ ಆಗಿದೆ; [24]ಆದರೆ ದೇವರಿಂದ ಕರಿಸಿಕೊಂಡವರು, ಯೆಹೂದ್ಯರಾಗಲಿ ಗ್ರೀಕರಾಗಲಿ ಅವರಿಗೆ ಇಂಥವನು ದೇವರ ಶಕ್ತಿಯೂ ದೇವರ ಜ್ಞಾನವೂ ಆಗಿರುವ ಕ್ರಿಸ್ತನೇ. [25]ಲೋಕದವರು ದೇವರಲ್ಲಿ ಯಾವುದನ್ನು ಬುದ್ಧಿಹೀನತೆಯೆಂದು ಎಣಿಸುತ್ತಾರೋ ಅದು ಮನುಷ್ಯರ ಜ್ಞಾನಕ್ಕಿಂತಲೂ ಶ್ರೇಷ್ಠ ಜ್ಞಾನವಾಗಿದೆ. ಅವರು ದೇವರಲ್ಲಿ ಯಾವದನ್ನು ಬಲಹೀನತೆಯೆಂದು ಎಣಿಸುತ್ತಾರೋ ಅದು ಮನುಷ್ಯರ ಬಲಕ್ಕಿಂತಲೂ ಬಲವುಳ್ಳದ್ದಾಗಿದೆ.**

**ವಚನ 18.** ಪೌಲನು ಎರಡು ಗುಂಪಿನ ಜನರಲ್ಲಿ ವ್ಯತ್ಯಾಸವನ್ನು ತೋರಿಸುತ್ತಾನೆ: **ನಾಶವಾಗುತ್ತಿರುವವರು ಮತ್ತು ರಕ್ಷಣೆ ಹೊಂದಿರುವ ನಾವುಗಳು** ಆತನು ಮುನ್ನಡೆಯುತ್ತಿರುವ ಪ್ರತಿಕ್ರಿಯೆಯತ್ತ ಗಮನವನ್ನು ಸೆಳೆಯಲು ವರ್ತಮಾನ ಕಾಲವನ್ನು ಉಪಯೋಗಿಸುತ್ತಿದ್ದಾನೆ. ಅವನ ವ್ಯತ್ಯಾಸ ತಪ್ಪಿಹೋದವರ ಮತ್ತು ರಕ್ಷಣೆ ಹೊಂದಿದವರ ಕುರಿತಾಗಿ ಅಲ್ಲ. ಪೌಲನಿಗೆ, ಕ್ರಿಸ್ತನಲ್ಲಿರುವದು ಎಲ್ಲಾ ಕ್ಷಣದಲ್ಲಿ “ಒಮ್ಮೆ ಮತ್ತು ಎಲ್ಲಾ ಸಮಯದಲ್ಲಿದ್ದೇವೆ” ಎಂದು ವ್ಯಾಖ್ಯಾನಿಸುವದಲ್ಲ; ಇದು ಲೋಕದಲ್ಲಿ ಜೀವಿಸುವ ಒಂದು ನಿಮಿಷದ ನಿರ್ಧಾರವನ್ನು ಮುಂದೆಯೂ ವಿಕಾಸಹೊಂದುವ ಜೀವಿತವಾಗಿದೆ.

“ನಾಶನದ ಮಾರ್ಗದಲ್ಲಿರುವವರಿಗೆ” ಎಂದು ಗುರುತಿಸುವದು, ಕ್ರೂಜಿತನಾದ ಕ್ರಿಸ್ತನ ಸಂಪೂರ್ಣ ವಿಚಾರವನ್ನು **ಹುಚ್ಚುತನವಾಗಿದೆ** ಎಂಬ ಅವರ ದೃಷ್ಟಿಕೋನವನ್ನು ಗುರುತಿಸುವದಾಗಿದೆ. ಮನುಷ್ಯನ ಕಣ್ಣಗಳಿಗೆ ಕ್ರೂಜೆಯ ಸಂದೇಶ ಹುಚ್ಚುಮಾತು ಮತ್ತು ಎಡವುವ ಕಲ್ಲು ಆಗಿದೆ. ಲೋಕವು ಯಾವುದನ್ನು ಜಾಣತನವೆಂದು ಗೌರವಿಸುತ್ತದೋ ಅದು ಹುಚ್ಚು ಮಾತಾಗಿದೆ: ಮನುಷ್ಯಮಾತ್ರದವರಿಗೆ ಮರಣದಂಡನೆಗೆ ಗುರಿಯಾದ ಅಪಾರಧಿಯ[6] ಕುರಿತಾದ ಸಂದೇಶದಲ್ಲಿ ಯಾವುದೂ ಜಾಣತನ ಅಥವಾ ತತ್ವಜ್ಞಾನ ಕಂಡುಬರುವದಿಲ್ಲ. ಕ್ರೈಸ್ತರ ಅರಿಕೆಯ ಪ್ರಾರಂಭದ ಅಂಶ ತೀವ್ರವಾಗಿ ಜ್ಞಾನಿಯಾದ ಮನುಷ್ಯನ ಸುಶಿಕ್ಷಿತ ಕಲಿಯುವಿಕೆಯ ವಿಚಾರವನ್ನು ವಿರೋಧಿಸುತ್ತದೆ (15:3).

“ರಕ್ಷಣೆ ಹೊಂದಿದ ನಮಗೆ” ಇದು ಕ್ರೂಜೆಯಲ್ಲಿ ಪ್ರದರ್ಶಿತವಾದ ನೋಟದಲ್ಲಿ ದೇವರ

ಬಲವನ್ನು ನಂಬುವವರನ್ನು ಗುರುತಿಸುವದಾಗಿದೆ. ದೇವರು **ಬಲ,** ಜಾಣತನ ಮತ್ತು ಲೋಕದ ಜ್ಞಾನವನ್ನು ಉರುಳಿಸಿ, ನಜರೇತಿನ ಯೇಸುವನ್ನು ಕಳುಹಿಸುವದರ ಮೂಲಕ ಮಾನವ ಕುಲವನ್ನು ವಿಮೋಚಿಸಿದನು. ಕ್ರೈಸ್ತ ಸಮುದಾಯವು ಕ್ರೂಜೆಯಿಂದಾಗಿ ರೂಪಸಲ್ಪಟ್ಟಿತು. ಅಪೊಸ್ತಲನು ತನ್ನ ಓದುಗರು ಇದನ್ನು ತಿಳಿದುಕೊಳ್ಳಬೇಕು ಎಂಬ ದಾಹವುಳ್ಳವನಾಗಿದ್ದಾನೆ. ವಿಭಾಗಿಸುತ ನಡತೆ ಮಾನವನ ನಿಷ್ಠೆ ಮತ್ತು ಗೌರವಕ್ಕಾಗಿ ಸ್ಪರ್ದೆ ಕೊರಿಂಥದವರು ಕ್ರೂಜೆಯನ್ನು ಅರ್ಥೈಸಿಕೊಳ್ಳಲು ವಿಫಲರಾಗಿರುವದನ್ನು ಸೂಚಿಸುತ್ತದೆ. ಅವರು ಈ ವಿಡಂಬನೆಯನ್ನು ನೋಡುವದರಲ್ಲಿ ಹೇಗೆ ವಿಫಲರಾದರು. ಅಪೊಸ್ತಲನು ಎಂಥಹ ಜನರು ಕ್ರೂಜೆಯ ಮೇಲೆ ಸಾಯುತ್ತಾರೆ ಎಂಬುದನ್ನು ವಿವರಿಸುವ ಅಗತ್ಯತೆಯಿಲ್ಲ, ಅಸಹಾಯಕ, ಧರ್ಮಬಾಹಿರ ಜನರು, ದುಷ್ಟ ಜನರು ಕ್ರೂಜೆಗೆ ಹಾಕಲ್ಪಡುತ್ತಾರೆ - ಅಮಾಧಾನದ ಪ್ರಭುವಲ್ಲ, ಅರಸರುಗಳಲ್ಲ, ರಕ್ಷಕರಲ್ಲ. ಹಾಗೂ "ರಕ್ಷಣೆ ಹೊಂದಿರುವ ನಮಗಾದರೋ" ದೇವರ ಬಲವು ಕ್ರೂಜೆಯ ಮೇಲಿದೆ.

**ವಚನ 19.** ಕ್ರೂಜೆಯು ಲೋಕಕ್ಕೆ ಒಂದು ಹೊಸತನವನ್ನು, ಮಾನವನ ಬಲ ಮತ್ತು ಅಧಿಕಾರದ ಪತ್ರಿಯೊಂದು ಮೌಲ್ಯಗಳಿಗೆ ಸವಾಲನ್ನು ನೀಡಿದೆ. ಯೆಹೂದ್ಯ ವೇದವಾಕ್ಯದ ಓದುಗರು ಕ್ರೂಜೆಯು ದೇವರ ಪ್ರಕಟನೆಯಿಂದ ಎಂದಿಗೂ ದೂರವಾಗಿರದೇ ಇರುವ ನಿರಂತರವಾದ ವಿಷಯವಾಗಿದೆ ಎಂಬುದನ್ನು ಗ್ರಹಿಸಿಕೊಳ್ಳಬೇಕು. ಶಿನಾರ ಬಯಲಿನಲ್ಲಿ ವಾಸಿಸುತ್ತಿದ್ದ ಪ್ರಾಚೀನ ಕಾಲದ ನಾಶನಕ್ಕೆ ಒಳಗಾದ ಜನರ ಕಥೆಯನ್ನು ಸಂಗ್ರಹಿಸಿ ಬರೆಯಲಾಗಿದೆ (ಆದಿಕಾಂಡ 11:1-9). ಮನುಷ್ಯರು ಶಾಶ್ವತವಾಗಿ ತಮ್ಮ ಗೋಪುರಗಳನ್ನು ಕಟ್ಟಿದರು, ದೇವರು ಶಾಶ್ವತವಾಗಿ ಅವರಲ್ಲಿ ಭಾಷೆಯನ್ನು ತಾರುಮಾರು ಮಾಡುವದಕ್ಕೆ ಬಂದನು. ಹನ್ನಳಿಂದ (1 ಸಮುವೇಲ 2:1-10) ಮರಿಯಳ (ಲೂಕ 1:46-55) ವರೆಗೆ, ಅವಶ್ಯಕತೆಯಿರುವವರನ್ನು ಬೂದಿಯಿಂದ ಎತ್ತುವವನಾಗಿದ್ದಾನೆ. ಅವನು ಯೆಶಾಯನ ಮೂಲಕ ಹೇಳುವಾಗ ಹೊಸದೇನು ಹೇಳಲಿಲ್ಲ, **ಇವರ ಜ್ಞಾನಿಗಳ ಜ್ಞಾನವನ್ನು ಅಳಿಯುವದು, ವಿವೇಕಿಗಳ ವಿವೇಕವು ಅಡಗುವದು ಎಂದು ಹೇಳಿದನು** (ಯೆಶಾಯ 29:14 ನೋಡಿರಿ).[7] ವಾಕ್ಚಾತುರ್ಯದ ಬಲಕ್ಕೆ ಆಕರ್ಷಿತರಾದ ಮತ್ತು ಸುಸಂಸ್ಕøತ ಶಿಕ್ಷಣವನ್ನು ಹೊಂದಿದ ವಿರ್ಮಶಕರು ಕ್ರೂಜೆಯನ್ನು ಮತ್ತು ದೇವರ ಪ್ರಕಟನೆಗಳನ್ನು ದೃಷ್ಟಿಸಲು, ಕೊರಿಂಥದ ಕ್ರೈಸ್ತರು ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಎಂದು ಪೌಲನು ಹೇಳುತ್ತಾನೆ.

**ವಚನ 20.** ಪೌಲನು ಕೇಳಿದ ಪ್ರಶ್ನೆಗಳು ಕೊರಿಂಥದಲ್ಲಿರುವ ವಿಶ್ವಾಸಿಗಳು ಲೋಕದ ಜ್ಞಾನದಲ್ಲಿ ಜಯಘೋಷ ಮಾಡುವ ಒಬ್ಬರನ್ನೂ ಸೇರಿಸಿಕೊಳ್ಳುವದಿಲ್ಲ ಎಂದು ಸೂಚಿಸುತ್ತದೆ. ಪ್ರಶ್ನೆ ಎಂದರೆ **ಜ್ಞಾನಿಯಾದ ಮನುಷ್ಯನು ಎಲ್ಲಿದ್ದಾನೆ?** ಲೋಕದ ಜ್ಞಾನವು ರಕ್ಷಣೆಯನ್ನು ಹೊಂದುವದಕ್ಕೆ ಮೂಲವನ್ನು ಎಂಬುದನ್ನು ಜ್ಞಾಪಕಮಾಡುವದಾಗಿದೆ. ಅಪೊಸ್ತಲನು ಜ್ಞಾನವನ್ನು ಸಂಪೂರ್ಣವಾಗಿ ತಿರಸ್ಕರಿಸುವದಿಲ್ಲ. ಬದಲಾಗಿ, ಆತನು ದೇವರಿಂದ ದೊರಕುವ ಜ್ಞಾನವು ಲೋಕದ ಜ್ಞಾನಕ್ಕಿಂತ ವಿಭಿನ್ನವಾಗಿದೆ (2:6). ಯೇಸು ಇದೇ ಅಂಶವನ್ನು ಸಮರ್ಥಿಸುತ್ತಾನೆ, "ತಂದೆಯೇ, ಪರಲೋಕ ಭೂಲೋಕಗಳ ಒಡೆಯನೇ, ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು ಮರೆಮಾಡಿ ಬಾಲಕರಿಗೆ ಪ್ರಕಟಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ" (ಲೂಕ 10:21).

ವಿಷಯದ ಕುರಿತು ಜಾಣತನದಿಂದ ಬಾಯಿಮಾತಿನಿಂದಾಗಲಿ ಅಥವಾ

ಬರವಣಿಗೆಯಿಂದಾಗಲಿ ವಾದಿಸುವದು ಗ್ರೀಕ್ ಮತ್ತು ರೋಮನ್ನರಲ್ಲಿ ಜ್ಞಾನ ಮತ್ತು ವಿದ್ಯೆಯ ಸಂಕ್ಷಿಪ್ತ ನಿರೂಪಣೆಯಾಗಿದೆ. ಪೌಲನು ಕೊರಿಂಥದ ಸಭೀಕರು ತಮ್ಮ ಸಂಖ್ಯೆಯ ಸತ್ತಲೂ ನೋಡಿಕೊಂಡು ಮತ್ತು **ಶಾಸ್ತ್ರಿಗಳು ಎಲ್ಲಿದ್ದಾರೆ? ಇಹಲೋಕದ ತರ್ಕವಾದಿಗಳು ಎಲ್ಲಿ?** ಎಂದು ಕೇಳಬೇಕು ಜ್ಞಾನಿಗಳಾದ ಜನರಿಗೆ ಕ್ರಿಸ್ತನಿಗಾಗಿ ಸಮಯವಿಲ್ಲ. ಕೊರಿಂಥದವರಿಗೆ ಪೌಲ ಪ್ರಶ್ನೆ ಇದಾಗಿದೆ: "ಲೋಕದ ಆಧುನಿಕತೆಯನ್ನು ನಿಮ್ಮವರು ಮೆಚ್ಚಿಕೊಳ್ಳುವದರ ಮೂಲ ಎಲ್ಲಿದೆ?" ಕ್ರೈಸ್ತರಿಗೆ ದೇವರು ತನ್ನ ಆಶೀರ್ವಾದವನ್ನು ನೀಡುವಾಗ, **ಆತನು ಲೋಕದ ಜ್ಞಾನವನ್ನು ಹುಚ್ಚುತನವಾಗಿ ಮಾಡಿದನು**.

ಪೌಲನಿಗೆ ಮನಸ್ಸಿನಲ್ಲಿ ವಿಶಿಷ್ಟವಾದ ವರ್ಗದ ಜನರು ಇರಲಿಕ್ಕಿಲ್ಲ. ಕೆಲವು ಜ್ಞಾನಿಗಳು ಮತ್ತು ಕೆಲವರು "ಶಾಸ್ತ್ರಿಗಳು" ಮತ್ತು ಕೆಲವರು "ತರ್ಕವಾದಿಗಳು." ಬಹುಶಃ ಆತನು ವಚನ 20 ರಲ್ಲಿರುವ ಪದಗಳನ್ನು ಲೋಕದ ಮೌಲ್ಯಗಳನ್ನು ಮತ್ತು ವಿಚಾರಗಳನ್ನು ಹೊಂದಿರವ ಸಂಗತಿಗಳಿಗೆ ಆತನು ಸಾಮಾನ್ಯ ಪದನಾಮಗಳಾಗಿ ಉಪಯೋಗಿಸಿರಬಹುದು. ಬಹುಶಃ ಅವನು ತಾರ್ಸ ಮತ್ತು ಯೆರೂಸಲೇಮಿನಲ್ಲಿ ತಾನು ಸ್ವತಃ ಹೊಂದಿರುವ ಶಿಕ್ಷಣವನ್ನು ಅರ್ಥೈಸಿರಬಹುದು. ಅವನಿಗೆ ಜ್ಞಾನದ ಕುರಿತು ಯಾವದೇ ರೀತಿಯ ತಿರಸ್ಕಾರವಿರಲಿಲ್ಲ. ನಿಜವಾದ ವಿದ್ಯೆ ಕ್ರಿಸ್ತನ ಸೇವೆ ಮಾಡುವದಕ್ಕೆ ಕಾರಣವಾಗುತ್ತದೆ; ಆದರೆ ಅದು ಕೊರಿಂಥದಲ್ಲಿದ್ದಂತೆ ಜ್ಞಾನದ ಸ್ವಾರ್ಥದ ಗುಣಲಕ್ಷಣಗಳನ್ನು ಹೊಂದಿರುವದಾಗಿರುವದಿಲ್ಲ.

**ವಚನ 21.** ಎಷ್ಟು ತೀಕ್ಷ್ಣವಾಗಿ ಸಾಧ್ಯವೋ ಅಷ್ಟು, ಪೌಲನು ವ್ಯವಹಾರಿಕವಾದ ಆಧುನಿಕ **ಜ್ಞಾನವನ್ನು** ಮತ್ತು ಪೌಲನು ಪ್ರಕಟಿಸುವ ಕ್ರೈಸ್ತರು ಆಲಿಸಿರುವ ತತ್ವಜ್ಞಾನಿಗಳ ಸುವಾರ್ತೆಯ ಕುರಿತು ಹುಚ್ಚುತನವಾದ ಜ್ಞಾನದ ಮಧ್ಯದಲ್ಲಿರುವ ವ್ಯತ್ಯಾಸವನ್ನು ತೋರಿಸುತ್ತಾನೆ. ಕೊನೆಯ ಪದವನ್ನು ಹೊರತುಪಡಿಸಿ, ಆತನು ಮಾನವಕುಲವು, ಅದು, **ಲೋಕ** (κόσμος, *kosmos*), ತನ್ನ ಸ್ವಂತ ಉಪಾಯಗಳಲ್ಲಿ ಉಳಿದಿದೆ, ಮತ್ತು ಸ್ವಾಭಾವಿಕ ಅಂಶದಲ್ಲಿ ದೇವರ ಪ್ರಕಾಶಕ್ಕೆ ಮಾತ್ರ ಮಾರ್ಗವನ್ನು ಹೊಂದಿದೆ (ರೋಮ 1:20). ಪಾಪವು ಸ್ವಾಭಾವಿಕ ಲೋಕವು ದೇವರ ಕುರಿತಾಗಿ ಅವರಿಗೆ ಏನೇನೂ ಬೋಧಿಸಿದೆಯೋ ಅದರ ಅಂತರ್ಜ್ಞಾನವನ್ನು ಕಲುಷಿತಗೊಳಿಸಿದೆ. ತಾವೇ ತಮ್ಮ ಸ್ವಂತ ದೇವರುಗಳಾಗಲು ಹುಡುಕುತ್ತಾ ಮನುಷ್ಯನು ತನ್ನ ಹೆಮ್ಮೆ ಮತ್ತು ಸುಖವನ್ನು ಪ್ರೀತಿಸುವದಕ್ಕಿಂತ ಹೆಚ್ಚಿನದನ್ನೇನೂ ಅನುಮತಿಸುವದಿಲ್ಲ. "ತಾವು ಜ್ಞಾನಿಗಳೆಂದು ಹೇಳಿಕೊಂಡು ಅವರು ಹುಚ್ಚರಾಗುತ್ತಿದ್ದಾರೆ" (ರೋಮ 1:22).

**ದೇವರನ್ನು ತಿಳಿದುಕೊಳ್ಳಲು** ವಿಫಲವಾಗುತ್ತಿರುವ ಪಾಪದಿಂದ ತುಂಬಿದ ಮಾನವ ಕುಲವೇ **ದೇವರ ಜ್ಞಾನದ** ಪ್ರತೀಕವಾಗಿದೆ. ಆದಾಗ್ಯೂ, ದೇವರು ಹಟಮಾರಿ ಮತ್ತು ಜ್ಞಾನವಿಲ್ಲದ ಈ ಜನಾಂಗಕ್ಕೆ ಬೆನ್ನು ತೋರಿಸಿಲ್ಲ. ಅದಕ್ಕೆ ಬದಲಾಗಿ, ಸ್ವಾರ್ಥರಹಿತವಾದ ಮತ್ತು ವಿವರಿಸಲು ಅಸಾಧ್ಯವಾದ ಪ್ರೀತಿಯ ಕಾರ್ಯಗಳು ತನ್ನ ಒಬ್ಬನೇ ಮಗನನ್ನು ಬಲಹೀನತೆಯಿಂದ ಮರಣ ಹೊಂದಲು ಕಳುಹಿಸುವದಕ್ಕೆ ಕಾರಣವಾಯಿತು. ಮಗನ ಮರಣದಲ್ಲಿ, ಅವನು ಮರುಸಂಧಾನದ ಬಾಗಿಲನ್ನು ತೆರೆದಿದ್ದಾನೆ. ಯಾರಾರು ನಂಬಿದರೋ ಅವರು ರಕ್ಷಣೆಯನ್ನು ಹೊಂದಿದರು. **ಪೌಲನು ಪ್ರಸಂಗಿಸಿದ ಸಂದೇಶವು**, ಆದಾಗ್ಯೂ ಲೋಕವು ಕ್ರೂಜಿತನಾದ ದೇವರ ಜ್ಞಾನವನ್ನು ಕಂಡುಕೊಳ್ಳಲಿಲ್ಲ. ಲೌಕಿಕ ಜ್ಞಾನವು ದೇವರನ್ನು ಪ್ರತಿಬಿಂಬಿಸುವ ಆಕಾರಗಳನ್ನು ಸಿದ್ಧಮಾಡುತ್ತದೆ. ಸತ್ಯವನ್ನು ಕೇಳಿಕೊಳ್ಳುವ

ದೇವರ ಏಕೈಕ ಜ್ಞಾನದ ಪರಿಣಾಮ ದೇವರ ಸ್ವಂತ-ಪ್ರತ್ಯಕ್ಷತೆಯಾಗಿದೆ. ದೇವರನ್ನು ತಿಳಿದುಕೊಳ್ಳುವದೆಂದರೆ ಮಾರ್ಗದರ್ಶನಕ್ಕಾಗಿ ಆತನನ್ನು ಆತುಕೊಳ್ಳುವದು ಮತ್ತು ಒಬ್ಬನು ತನ್ನ ನಡತೆಯನ್ನು ಕ್ರಮಪಡಿಸಿಕೊಳ್ಳುವದು ಇದರಿಂದಾಗಿದೆ ದೇವರು ತನ್ನನ್ನು ತಾನು ಪ್ರಕಟಿಸಿಕೊಂಡ ನೀತಿ ಮತ್ತು ನೈತಿಕ ನಿಷ್ಠೆಗಳಿಂದ ದೇವರು ತಾನೇ ತೋರಿಸಿದ ದೇವರೊಂದಿಗೆ ಸಾಮರಸ್ಯ ಹೊಂದುವದಾಗಿದೆ.

**ವಚನ 22.** ಪೌಲನು ಕ್ರೂಜಿತನಾದ ಯೇಸುವಿನ ವಿಷಯದಲ್ಲಿ ಸಾರುವದರ ಕುರಿತು ಮಾನವನ ಪ್ರತಿಕ್ರಿಯೆಯನ್ನು ಎರಡು ವಿಧಗಳಲ್ಲಿ ವಿಭಾಗಿಸುತ್ತಾನೆ: ಯೆಹೂದ್ಯರು ಮತ್ತು ಗ್ರೀಕರು. ಅವನು ಬಹಳ ಮಟ್ಟಿಗೆ ಇದನ್ನು ಸರ್ವಸಾಧಾರಣೀಕರಿಸುತ್ತಾನೆ. ಪ್ರತಿಯೊಬ್ಬ ಯೆಹೂದ್ಯನಾಗಲಿ ಅಥವಾ ಪ್ರತಿಯೊಬ್ಬ ಗ್ರೀಕನಾಗಲಿ ಒಂದೇರೀತಿಯಲ್ಲಿ ಪ್ರತಿಕ್ರಿಯಿಸುವದಿಲ್ಲ; ಆದರೆ ಎರಡೂ ಜನಾಂಗೀಯ ಗುಂಪುಗಳು ತಮ್ಮ ಸ್ವಂತ ಸಂಪ್ರದಾಯ, ತಮ್ಮ ಸ್ವಂತ ಬುದ್ಧಿಶಕ್ತಿಯ ಮೇಲೆ ಅವಲಂಭಿತವಾಗುವಾಗ, ಅದು ದೇವರ ಜ್ಞಾನವನ್ನು ವರ್ಜಿಸುತ್ತದೆ. **ಯೆಹೂದ್ಯರು ತಾವು ಆಲಿಸಿರುವ ಸತ್ಯಗಳನ್ನು** ಪ್ರಮಾಣೀಕರಿಸಲು ಆಕಾಶದಿಂದ ಸೂಚಕಕಾರ್ಯಗಳನ್ನು ಕೇಳುತ್ತಾರೆ. ಯೇಸು ಅವರ ಪ್ರಶ್ನೆಗಳನ್ನು ಎದುರಿಸಿದನು. ಪೌಲನು ಯೇಸುವಿನ ಗಲಿಲಾಯದ ಸೇವೆಯ ಕುರಿತು ಎಷ್ಟರಮಟ್ಟಿಗೆ ತಿಳಿದಿದ್ದನು ಎಂಬುದು ಪ್ರಶ್ನೆಯಾಗಿದೆ, ಆದರೆ ಪೌಲನು ಯೆಹೂದ್ಯರ ನಾಯಕತ್ವ ಮತ್ತು ಯೇಸುವಿನ ಮಧ್ಯದಲ್ಲಿ ಆದ ವಾಗ್ವಾದಗಳ ವರದಿಯನ್ನು ಆಲಿಸಿದ್ದಾನೆ. "ಬೋಧಕನೇ, ನಿನ್ನಿಂದಾಗುವ ಒಂದು ಸೂಚಕಕಾರ್ಯವನ್ನು ನೋಡಬೇಕೆಂದು ನಮಗೆ ಅಪೇಕ್ಷೆಯದೆ" ಎಂದು ಅವರು ಕೇಳುತ್ತಾರೆ (ಮತ್ತಾಯ 12:38). "ಹಾಗಾದರೆ ನಾವು ನೋಡಿ ನಿನ್ನ ಮಾತನ್ನು ನಂಬುವಂತೆ ಏನು ಸೂಚಕ ಕಾರ್ಯವನ್ನು ಮಾಡುತ್ತೀ?" (ಯೋಹಾನ 6:30).

ಯೆಹೂದ್ಯರು ಸೂಚಕಕಾರ್ಯಗಳನ್ನು ಕೇಳುತ್ತಾರೆ ಆದರೆ ಇಲ್ಲಿರುವ ವ್ಯಂಗವೆಂದರೆ ಯೇಸುವಿನ ಸೇವೆಯು ಸೂಚಕಕಾರ್ಯಗಳಿಂದ ತುಂಬಿತ್ತು. ಯೆಹೂದ್ಯರು ಯೆಶಾಯನ ಪ್ರವಾದನೆಯನ್ನು ನೇರವೇರಿಸಿದರು: ". . . ಅವರು ಕಣ್ಣಿದ್ದು ನೋಡಿದರೂ ಕಾಣಬಾರದು ಕಿವಿಯಿದ್ದು ಕೇಳಿದರೂ ತಿಳುಕೊಳ್ಳಬಾರದು, ಹಾಗೆ ಕಂಡು ತಿಳುಕೊಂಡರೆ ಅವರು ದೇವರ ಕಡೆಗೆ ತಿರುಗಿಕೊಂಡು ಪಾಪಕ್ಷಮೆಯನ್ನು ಹೊಂದಾರು" (ಮಾರ್ಕ 4:12; ಯೆಶಾಯ 6:9, 10). ಯೇಸುವಿನ ಕಾರ್ಯಗಳು ಸೂಚಕಕಾರ್ಯಗಳಿಗೆ ಮಾತ್ರ ಸೀಮಿತವಲ್ಲ. ಕೊರಿಂಥದವರಿಗೆ ಅಪೊಸ್ತಲನು ಮುಂದಕ್ಕೆ ಬರೆಯುತ್ತಾನೆ, "ನಿಜವಾದ ಅಪೊಸ್ತಲನ ಗುಣಲಕ್ಷಣಗಳು ನಿಮ್ಮ ಮಧ್ಯದಲ್ಲಿ ತೋರಿದವು" (2 ಕೊರಿಂಥ 12:12). ಯೆಹೂದ್ಯರು ಮೇಲಿಂದ ಮೇಲೆ "ಪ್ರಸಂಗಿಸಿದ ಸಂದೇಶದ ಹುಚ್ಚುತನಕ್ಕೆ" ಸೂಚಕ ಕಾರ್ಯಗಳನ್ನು ಬೇಡಿಕೊಳ್ಳುವದರ ಮೂಲಕ ಪ್ರತಿಕ್ರಿಯಿಸಿದ್ದಾರೆ (1:21) ಯಾವ ಸೂಚಕಕಾರ್ಯಗಳು ಅವರನ್ನು ತೃಪ್ತಿಪಡಿಸಲಿಲ್ಲ.

ಕ್ರೂಜಿತನಾದ ರಕ್ಷಕನ ಶುಭ ಸಂದೇಶವು ತಿಳಿದಿದೆ ಎಂದು ಸೂಚಿಸುವ ನಗುವಿನ ಪ್ರತಿಕ್ರಿಯೆಯಾಗಿತ್ತು; ಅವರು ಜ್ಞಾನವನ್ನು ಹುಡುಕುವದಕ್ಕೆ ಹೆಸರಾಗಿದ್ದರು. ಆದಿ ಕ್ರೈಸ್ತರ ಯುಗದಲ್ಲಿ ಗ್ರೀಕರ ತಜ್ಞರ ಮಧ್ಯದಲ್ಲಿ ತ್ವತ್ವಜ್ಞಾನದ ವಿಚಾರ ನಿಲುಕಲಾರದಂತಿತ್ತು. ಅವರಿಗೆ, ಜ್ಞಾನವು ಗಡೀಪಾರುಮಾಡಿ ಅಲ್ಲಿ ಜ್ಞಾನಿಗಳಾದ ಮನುಷ್ಯರು ಏಕಾಂಗಿಯಾಗಿ

ಧ್ಯಾನಮಾಡುವದಲ್ಲ. ಬೀದಿಗಳಲ್ಲಿ ಪ್ರಸಂಗಿಸುವವರು ಮುಗ್ಧ ಮತ್ತು ಸುಶಿಕ್ಷಿತ ಎಂದು ವರ್ಗೀಕರಿಸುತ್ತಿದ್ದರು. ಸಾಮಾನ್ಯವಾಗಿ ವೀಕ್ಷಿಸುವವರು ವಿಮರ್ಶಕರನ್ನು ಗ್ರಹಿಸುತ್ತಿದ್ದರು. ಚಮ್ಮಾರರು ಮತ್ತು ಚರ್ಮಗಾರರು ಪಟ್ಟಣದಲ್ಲಿರುವ ಇತ್ತೀಚಿನ ತತ್ವಜ್ಞಾನಿಗಳ ಮೌಲ್ಯಗಳ ಕುರಿತು ಚರ್ಚೆಮಾಡುತ್ತಾರೆ. ಅನೇಕ ಗ್ರೀಕರಿಗೆ, ಪೌಲನು ಇತ್ತೀಚಿನ ಪ್ರದರ್ಶನವಾಗಿದ್ದಾನೆ. ಅವು ಒಟ್ಟಾರೆ ನಾಟಕಗಳನ್ನು ಶಬ್ದಗಳಲ್ಲಿ, ಅಲಂಕಾರಿಕ ನಡೆಯಲ್ಲಿ ಮತ್ತು ಕಾದಂಬರಿಗಳ ವಿವರಣೆಗಳಲ್ಲಿ ನೋಡುತ್ತೇವೆ. ದೇವರನ್ನು ತಿಳಿದುಕೊಳ್ಳುವ ಸಾಧ್ಯತೆ ಮತ್ತು ಜೀವಿತವನ್ನು ಪರಿವರ್ತಿತಗೊಳಿಸುವ ಕ್ರೂಜಿತನಾಗಿ ಪುನರುತ್ಥಾನ ಹೊಂದಿದ ಕ್ರಿಸ್ತನ ಜ್ಞಾನವು ಗ್ರೀಕ್‌ರ ಸಂಶೋಧನೆಗೆ ನಿಲುಕದ್ದಾಗಿದೆ.

**ವಚನ 23.** ಯಾವುದೇ ಹಿಂಜರಿಕೆಯಿಲ್ಲದೇ ಒತ್ತುನೀಡುವ "ನಾವು" ಎಂಬ ಪದವನ್ನು ಉಪಯೋಗಿಸುವದರ ಮೂಲಕ ಪೌಲನ ಕೊರಿಂಥದವರಿಗೆ ಯೆಹೂದ್ಯರ ಸೂಚಕಕಾರ್ಯಗಳ ಬೇಡಿಕೆಗಿಂಥ ಮತ್ತು ಗ್ರೀಕರ ಮರಳುಮಾಡುವ ಜ್ಞಾನದೊಂದಿಗೆ ಪರ್ಯಾಯ ವ್ಯವಸ್ಥೆಯನ್ನು ನೀಡುತ್ತಾನೆ: **ನಾವು ಕ್ರೂಜಿತನಾದ ಕ್ರಿಸ್ತನನ್ನು ಪ್ರಸಂಗಿಸುತ್ತೇವೆ.** ಆತನು ಯೆಹೂದ್ಯರ ಅಪೇಕ್ಷೆಯನ್ನು ತೃಪ್ತಿಪಡಿಸಲು ಅಭಿಷಿಕ್ತನಾದ ದೇವರ ಕುರಿತಾಗಿ ಯಾವ ಸೂಚಕಕಾರ್ಯಗಳನ್ನು ನೀಡುವದಿಲ್ಲ; ಯೆಹೂದ್ಯೇತರ ಜ್ಞಾನಿಗಳಾದ ಮನುಷ್ಯರ ಜ್ಞಾನಕ್ಕೆ ಯಾವ ಯೋಜನೆಯನ್ನು ನೀಡುವದಿಲ್ಲ. ಸತ್ಯವು ಯಾವುದೇ ಮನುಷ್ಯನು ನಿರೀಕ್ಷಿಸದೇ ಇರುವ ದಿಕ್ಕಿನಲ್ಲಿರುತ್ತದೆ. ಕ್ರೂಜೆಯಲ್ಲಿ ಅಂತಿಮ ವಿಡಂಬನೆ ಮತ್ತು ದೇವರ ಜ್ಞಾನದ ವ್ಯಕ್ತಪಡಿಸುವಿಕೆ ಇದೆ; "ಆತನು ಬಲಹೀನಾವಸ್ತೆಯಲ್ಲಿದ್ದದರಿಂದ ಶಿಲುಬೆಗೆ ಹಾಕಲ್ಪಟ್ಟನು ನಿಜ; ಆದರೂ ದೇವರ ಬಲದಿಂದ ಬದುಕುತ್ತಾನೆ" (2 ಕೊರಿಂಥ 13:4a).

ಲಿಯೋನ ಮೋರಿಸ್ ಹೀಗೆ ಟಿಪ್ಪಣಿ ಬರೆಯುತ್ತಾರೆ, "ಕ್ರೂಜೆಯ ಬಲವು ಬಲಹೀನರಿಗೆ ದೇವರನ್ನು ತಿಳಿದುಕೊಳ್ಳುವ ಮಾರ್ಗವನ್ನು ಮತ್ತು ಕೆಟ್ಟದ್ದನ್ನು ಜಯಿಸುವ ಮಾರ್ಗವನ್ನು ತೆರೆಯುತ್ತದೆ ಮತ್ತು ಇದು ತತ್ವಜ್ಞಾನಿಗಳು ಉತ್ಪಾದಿಸುವ ಎಲ್ಲಾ ಜ್ಞಾನಕ್ಕಿಂತಲೂ ಶ್ರೇಷ್ಠವಾದ ಜ್ಞಾನವಾಗಿದೆ."[8] ಬರ್‍ವರ್ಡ ಎಸ್. ಚೈಲ್ಡ್ಸ್ ಹೀಗೆ ವೀಕ್ಷಿಸುತ್ತಾರೆ, "ಪೌಲನಿಗೆ ಶಿಲುಬೆಯ ಸಂಕೇತವು ಕ್ರಿಸ್ತನ ಮರಣದ ಚಿತ್ರಣವು ತನ್ನನ್ನು ತಾನು ಪರಿವರ್ತಿಸಿಕೊಳ್ಳಲು ಮಾನವ ಕುಲದ ಸಮರ್ಥತೆಯ ತಿಳುವಳಿಕೆಯ ಕೇಂದ್ರವಾಗಿದೆ."[9]

ಸ್ನಾನಿಕನಾದ ಯೋಹಾನನು ಕ್ರಿಸ್ತನನ್ನು "ಇಗೋ, ದೇವರು ಯಜ್ಞಕ್ಕೆ ನೇಮಿಸಿದ ಕುರಿಮರಿ" ಎಂದು ಪರಿಚಯಿಸುತ್ತಾನೆ (ಯೋಹಾನ 1:29) ಶತಮಾನಗಳ ನಂತರ ಅಪೊಸ್ತಲನಾದ ಯೋಹಾನನು ಬಿಳಿಯ ಕುದುರೆಯ ಮೇಲೆ ಆಸೀನನಾಗಿರುವಾತನನ್ನು ದರ್ಶನದಲ್ಲಿ ನೋಡುತ್ತಾನೆ. ". . . ಅವನಿಗೆ ಜಯಮಾಲೆ ಕೊಡಲ್ಪಟ್ಟಿತು; ಅವನು ಜಯಿಸುತ್ತಿರುವನಾಗಿ ಜಯಿಸುವದಕ್ಕೋಸ್ಕರ ಹೊರಟನು" (ಪ್ರಕಟನೆ 6:2). ಕ್ರೂಜಿತನಾದ ಕ್ರಿಸ್ತನು ಪ್ರಭುತ್ವ ಹೊಂದಿದ ರಕ್ಷಕನಾದನು. ದೇವರ ಬಲವು ಯೆಹೂದ್ಯರ ಅಪೇಕ್ಷೆಯನ್ನು ನಿರರ್ಥಕಗೊಳಿಸಿತು; ಅವನ ಜ್ಞಾನವು ಯೆಹೂದ್ಯೇತರ ಕ್ರೂಜೆಯ ವಿಷಯವಾದ ಸಂಗತಿಯು ಹುಚ್ಚುತನವಾಗಿದೆ ಎಂಬುದನ್ನು ದಿಗ್ಭ್ರಮೆಗೊಳಿಸಿತು. ಬಲಹೀನತೆಯಲ್ಲಿ ಬಲ ಮತ್ತು ಹುಚ್ಚುನದಲ್ಲಿ ಜ್ಞಾನ ಎಂಬ ವಿಪರ್ಯಾಸವು ಅಪೊಸ್ತಲರಿಗೆ ದಾರಿ ದೀಪವಾಯಿತು. ನೀವು "ಹೊಗಳಿಕೊಳ್ಳುವದಾದರೆ" ಅವನು ಮುಂದೆ ಬರೆಯುತ್ತಾನೆ, "ನನ್ನ

ಬಲಹೀನತೆಯನ್ನು ತೋರಿಸುವ ವಿಷಯಗಳಲ್ಲಿ ಹೊಗಳಿಕೊಳ್ಳುವೆನು" (2 ಕೊರಿಂಥ 11:30) ". . . ನಾನು ಯಾವಾಗ ನಿರ್ಬಲನಾಗಿದ್ದೇನೋ ಆವಾಗಲೇ ಬಲವುಳ್ಳವನಾಗಿದ್ದೇನೆ" (2 ಕೊರಿಂಥ 12:10).

**ವಚನ 24.** ಅಪೊಸ್ತಲನು ಮಾನವನ ಅಪೇಕ್ಷೆಯಂತೆ ದೇವರನ್ನು ವ್ಯಾಖ್ಯಾನಿಸಿದ ವಿಧಾನದ ವ್ಯತ್ಯಾಸವನ್ನು ತೋರಿಸುವದನ್ನು ಮುಂದುವರೆಸುತ್ತಾನೆ (ಸೂಕಕಾರ್ಯಗಳು ಮತ್ತು ತತ್ವಜ್ಞಾನದ ಪರ್ಯಾಲೋಚನೆ) ದೇವರು ರಕ್ಷಿಸಲು ಕಾಯುತ್ತಿರುವ ಒಂದು ಅನುಸಂಧಾನ. ಕ್ರೈಸ್ತ ಬೋಧನೆಯು ದೈವಿಖವಾದದ್ದರ ಕುರಿತು ಅಮೂರ್ತವಾದ ಪರ್ಯಾಲೋಚನಯನ್ನು ಹೊಂದಿದೆ. ಇದು ದೇವರು ಏನು ಮಾಡಿದ್ದಾನೆ ಎಂಬುದರ ಹೇಳಿಕೆಯಾಗಿದೆ. ಎಲ್ಲಾ ಮನುಷ್ಯರಿಗಲ್ಲ **ಆದರೆ ಕರೆಯಲ್ಪಟ್ಟವರಿಗೆ**, ಕ್ರೂಜೆಯ ಮೇಲಿರುವ **ಕ್ರಿಸ್ತನು ದೇವರ ಬಲವಾಗಿದ್ದಾನೆ ಮತ್ತು ದೇವರ ಜ್ಞಾನವಾಗಿದ್ದಾನೆ**. ಕ್ರೈಸ್ತರು "ಕರೆಯಲ್ಪಟ್ಟವರಾಗಿ" ದೇವರ ನೇತೃತ್ವದ ಗಮನವನ್ನು ಸೆಳೆಯುತ್ತಾರೆ; ಅದು ಮನುಷ್ಯನು ಸಕಾರಾತ್ಮಕವಾಗಿ ದೇವರ ಕರೆಯುವಿಕೆಗೆ ಪ್ರತಿಕ್ರಿಯಿಸುವ ಅವಶ್ಯಕತೆಯನ್ನು ತೆಗೆದು ಹಾಕುವದಿಲ್ಲ.

ಪೌಲನ ಉಪದೇಶವು ಹಲವು ತತ್ವಜ್ಞಾನ ಶಾಲೆಯ ಉತ್ಪಾದನೆಯಲ್ಲ. ಬದಲಾಗಿ ಇದು ಅಪೊಸ್ತಲರು ಮತ್ತು ಆತನ ಓದುಗರಿಗೆ ವಿಮೋಚಿಸಿದಾತನ ಕುರಿತು ಆದ ಪ್ರಕಟನೆ ಯಾಕಂದರೆ ದೇವರು ಅವರನ್ನು ಪ್ರೀತಿಸುವದನ್ನು ನಿಲ್ಲಿಸಲಿಲ್ಲ. ಪಾಪವಿದ್ದಾಗಲೂ ಸಹ. ಕೊರಿಂಥದವರು ಕ್ರಿಸ್ತನ ಸಂದೇಶವನ್ನು ಗಂಭೀರವಾಗಿ ತೆಗೆದುಕೊಂಡದ್ದೇ ಅಪೊಸ್ತಲರ ಬರವಣಿಗೆಯ ಪೀಠಿಕೆ ಪ್ರಾರಂಭವಾದದ್ದು ಇಲ್ಲಿಂದಲೇ, ಅವರ ಮಧ್ಯದಲ್ಲಿರುವ ವಿಭಾಗಗಳು ಮತ್ತು ಮಾನವ ಶಕ್ತಿ ಮತ್ತು ಜ್ಞಾನಕ್ಕೆ ನಿವೇದಿಸುವದರ ವೈಶಿಷ್ಟತೆ ಕಡಿಮೆಯಾಯಿತು.

**ವಚನ 25.** ಪೌಲನಿಗೆ ಸುವಾರ್ತೆಯ ಆ ಸತ್ಯದಲ್ಲಿ ಇಂತಹ ವಿಶ್ವಾಸವಿತ್ತು ಈ ಕಾರಣದಿಂದಾಗಿ ಆತನು ಅದರ ತೋರಿಕೆಯಾದ ಹುಚ್ಚುತನ ಮತ್ತು ಬಲಹೀನತೆಯನ್ನು ಒಪ್ಪಿಕೊಳ್ಳಲು ಸಿದ್ಧನಾದನು. ಮನುಷ್ಯನ ಅಳತೆಗೋಲಿನಿಂದ, ಕ್ರೂಜೆಯು ಹೊಗಳಿಕೊಳ್ಳಲು ಏನೂ ಇಲ್ಲ. ನಾಶನದಲ್ಲಿರುವವರು ಸುವಾರ್ತೆಯನ್ನು ಹುಚ್ಚುತನ ಎಂದು ನಿರ್ಧರಿಸಲು ಅನುಮತಿಸುವದೇ ಇರುವದಕ್ಕೆ ಯಾವ ಕಾರಣವು ಇರಲಿಲ್ಲ, ಅಪೊಸ್ತಲರು **ದೇವರ ವಿಷಯವಾದ ಹುಚ್ಚುತನವು ಮನುಷ್ಯನಿಗಿಂತ ಜ್ಞಾನವುಳ್ಳದ್ದಾಗಿದೆ** ಎಂದು ಅಪೊಸ್ತಲರು ಪ್ರತಿಕ್ರಿಯಿಸಿದರು. ಮನುಷ್ಯರು ಸುವಾರ್ತೆಯನ್ನು ಹುಚ್ಚುತನ ಎಂದು ತೀರ್ಮಾನಿಸುವದರಲ್ಲೇ ಅದು ದೇವರಿಂದ ಬಂದದ್ದು ಎಂಬ ಸಾಕ್ಷಿ ಅಡಗಿದೆ. ಮನುಷ್ಯನ ಅಪೇಕ್ಷೆಗೆ ಅನುಗುಣವಾಗಿ ದೇವರಿಂದ ಸಂಪರ್ಕ ಹೊಂದುವದನ್ನು ಯಾರೊಬ್ಬರೂ ನಿರೀಕ್ಷಿಸಲು ಸಾಧ್ಯವಿಲ್ಲ. ಲೋಕದ ಅಳತೆಗಿಂತ ದೇವರ ಹುಚ್ಚುತನ ಅಥವಾ ಜ್ಞಾನ ಸರಳ ಸಂಗತಿಯಾಗಿದೆ: **ದೇವರ ಬಲಹೀನತೆ ಮನುಷ್ಯನಿಗಿಂತ ಬಲವಾದದ್ದಾಗಿದೆ.** ಮನುಷ್ಯನು ತನಗೆ ತಿಳಿದಂತೆ ವಾದಮಾಡಲಿ; ಕೊನೆಯಲ್ಲಿ ದೇವರು ಜಯವನ್ನು ಹೊಂದುತ್ತಾನೆ. ಕರ್ತನು ತಿರುಗಿ ಬರುತ್ತಾನೆ. ರಕ್ಷಣೆಯು ಕ್ರೂಜೆಯಿಂದ ಮತ್ತು ಕ್ರೂಜೆಯಲ್ಲಿ ಮಾತ್ರ.

## ಕ್ರಿಸ್ತನಲ್ಲಿ ತೋರಿಬರುವ ಜ್ಞಾನ (1:26-30)

**[26]ಸಹೋದರರೇ, ದೇವರು ನಿಮ್ಮನ್ನು ಕರೆದಾಗ ಎಂಥವರನ್ನು ಕರೆದನೆಂದು**

**ಆಲೋಚಿಸಿರಿ. ನಿಮ್ಮೊಳಗೆ ಲೌಕಿಕ ದೃಷ್ಟಿಯಲ್ಲಿ ಜ್ಞಾನಿಗಳೂ ಅನೇಕರಿಲ್ಲ. ಅಧಿಕಾರಿಗಳೂ ಅನೇಕರಿಲ್ಲ, ಕುಲೀನರೂ ಅನೇಕರಿಲ್ಲ. [27]ದೇವರು ಜ್ಞಾನಿಗಳನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬುದ್ಧಿ ಹೀನರನ್ನು ಆರಿಸಿಕೊಂಡಿದ್ದಾನೆ; ದೇವರು ಬಲಿಷ್ಠರನ್ನು ನಾಚಿಕೆಪಡಿಸುವದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ; [28-29]ದೇವರು ಈ ಲೋಕದ ಕುಲಹೀನರನ್ನು ಅಸಡ್ಡೆಯಾದವರನ್ನೂ ಆರಿಸಿಕೊಂಡದ್ದಲ್ಲದೆ ಗಣ್ಯರನ್ನು ಇಲ್ಲದಂತೆ ಮಾಡುವದಕ್ಕಾಗಿ ಗಣನೆಗೆ ಬಾರದವರನ್ನು ಆರಿಸಿಕೊಂಡಿದ್ದಾನೆ. ಹೀಗಿರಲು ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ. [30]ನೀವು ಕ್ರಿಸ್ತ ಯೇಸುವಿನಲ್ಲಿರುವದು ಆತನಿಂದಲೇ. ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು.**

**ವಚನ 26.** ಅವನು ಯಾವುದನ್ನು ಸಮರ್ಥಿಸಿದ್ದಾನೋ ಅದನ್ನು ಬೆಂಬಲಿಸಲು, ಪೌಲನು ಕೊರಿಂಥದ ಕ್ರೈಸ್ತರ ಅನುಭವಕ್ಕೆ ವಿನಂತಿಸಿಕೊಳ್ಳುತ್ತಿದ್ದಾನೆ. ತತ್ವಜ್ಞಾನಶಾಸ್ತ್ರ ಮತ್ತು ಧಾರ್ಮಿಕ ಪರ್ಯಾಲೋಚನೆಯನ್ನು ತೆಗೆದುಕೊಳ್ಳುವದು ಅವರಿಗೆ ಎಷ್ಟು ವಿಚಿತ್ರವಾಗಿರಬಹುದು, ಮನುಷ್ಯರ ಮುಂದೆ ಗೌರವವನ್ನು ಹುಡುಕುವದು, ಲೋಕವು ಈಗಾಗಲೇ ಕ್ರಿಸ್ತನ ಸುವಾರ್ತೆಯ ಕುರಿತು ತೀರ್ಪನ್ನು ನೀಡಿದೆ ಮತ್ತು ಅದನ್ನು ತಿರಸ್ಕರಿಸಿದೆ ಎಂಬದು ತಿಳಿದಿರುವಾಗ ಸಹ. **ಅನೇಕ ಜ್ಞಾನಿಗಳಿಲ್ಲ**, ಶಕ್ತಿಶಾಲಿಗಳು ಅಥವಾ ಉತ್ತಮರಾಗಿ ಜನಿಸಿದವರು ಅವರ ಮಧ್ಯದಲ್ಲಿ ಇಲ್ಲ. ಕ್ರೈಸ್ತತ್ವದ ಭವಿಷ್ಯತ್ತು ಲೋಕದ ಜ್ಞಾನಿಗಳಲ್ಲಿ ಇಲ್ಲ, ಶ್ರೀಮಂತರು ಅಥವಾ ಉನ್ನತ ಸ್ಥಾನದಲ್ಲಿರುವವರಲ್ಲಿ ಇಲ್ಲ. "ಶಿಲುಬೆಗೆ ಹಾಕಲ್ಪಟ್ಟ ಯೇಸು ಕ್ರಿಸ್ತನಲ್ಲೇ" (2:2) ನಂಬಿಕೆಯಿಡುವದು ಮೊದಲು ಒಕ್ಕಲಿಗಳು ಮತ್ತು ಸಾಮಾನ್ಯ ಕಾರ್ಮಿಕರ ಮನಸ್ಸಿನಲ್ಲಿ ಇತ್ತು.

ಆದಕಾರಣ, ಕ್ರೈಸ್ತ ಯುಗದ ಆದಿ ಶತಮಾನಗಳಲ್ಲಿ. ವಿಮರ್ಶಕರು ಅನುಯಾಯಿಗಳ ಕುರಿತು ಹೀಗೆ ಹೇಳುತ್ತಾರೆ ಕ್ರೈಸ್ತತ್ವವು ಸರಳವಾಗಿ ಮೋಸಕ್ಕೆ ಒಳಗಾಗುವದಾಗಿದೆ. ಕ್ರೈಸ್ತರ ಯಾವುದೇ ವೈರಿ, ಎರಡನೇ ಶತಮಾನದ ಬರಹಗಾರ, ಅವರನ್ನು ಮುಗ್ದ ಜನರು ಅವರು ತಮ್ಮ ಸ್ಥಾನದಿಂದ "ತುಪ್ಪಳದ-ಕೆಲಸಮಾಡುವವರು, ಚಮ್ಮಗಾಗರು, ಅಗಸರಿಗೆ ಮತ್ತು ಅನಕ್ಷರಸ್ತರು ಮತ್ತು ಪಶುಪಾಲಕ ಗ್ರಾಮಸ್ಥರು" ಎಂದು ಕರೆದಿದ್ದಾನೆ ಮತ್ತು ಅಗಸರು ಬೋಧಕರಾಗಲು ಬಯಸಿದ್ದರು ಎಂದು ಉಹಿಸಿದ್ದಾನೆ.[10] ಪೌಲನು ಬಹುಶಃ ಮನಗೆಲಸ ಮಾಡುವ ಜನರು ಲೋಕದ "ಜ್ಞಾನಿಗಳ" ಸಮೂಹದಂತೆ ಬಹುಶಃ ಇಷ್ಟು ಮುಗ್ದರು ಮತ್ತು ಸುಲುಭವಾಗಿ ಮೋಸಕ್ಕೆ ಒಳಗಾಗುವವರು ಎಂದು ತಿಳಿದಿರಲಿಲ್ಲ. ಲೋಕದ ಜ್ಞಾನಿಗಳು ಸುಶಿಕ್ಷಿತರಿಗೆ ಕ್ರೂಜೆಯ ಸಂದೇಶಕ್ಕೆ ಸಮಯವಿರಲಿಲ್ಲ ಎಂದು ಒಪ್ಪಿಕೊಳ್ಳುತ್ತಾನೆ. ಕ್ರೂಜೆಯ ಜ್ಞಾನವು ಲೋಕದ ಜ್ಞಾನಕ್ಕಿಂತ ಗ್ರಹಿಸುವದಕ್ಕೆ ಅಷ್ಟು ಅಗಾಧವಾಗಿದೆ, "ನಿಮ್ಮ ಸುತ್ತಲೂ ನೋಡಿರಿ" ಅಪೊಸ್ತಲನು ಕೊರಿಂಥದವರಿಗೆ ಸವಾಲನ್ನು ನೀಡುತ್ತಿದ್ದಾನೆ; **ನಿಮ್ಮ ಕರೆಯುವಿಕೆಯನ್ನು ಗುರುತಿಸಿರಿ.**

ಪೌಲನು ಕೊರಿಂಥದ ವಿಶ್ವಾಸಿಗಳಲ್ಲಿ "ಅನೇಕರು ಜ್ಞಾನಿಗಳಿಲ್ಲ" ಎಂದು ಹೇಳುತ್ತಾನೆ ಅವರಲ್ಲಿ ದೇಹವು ಸಾಮಾಜಿಕ ಮತ್ತು ಆರ್ಥಿಕ ಅಂತಸ್ತಿನ ಕುರಿತಾದ ಪ್ರಶ್ನೆಗಳನ್ನು ಕೊರಿಂಥದಲ್ಲಿರುವ ಆದಿ ಕ್ರೈಸ್ತರಗಳ ಕುರಿತು ತರುತ್ತದೆ. ಅಲ್ಲಿ, ನಿಜವಾಗಿಯೂ, ಕೆಲವು ಶಿಕ್ಷಿತರು ಮತ್ತು ಶ್ರೀಮಂತರು ಅವರ ಮಧ್ಯದಲ್ಲಿದ್ದರು. 1:20ರಲ್ಲಿರುವ ಪ್ರಶ್ನೆ ಲೋಕದ

ಜ್ಞಾನಿಯಾದ ಯಾವ ವ್ಯಕ್ತಿಯೂ ತಮ್ಮನ್ನು ತಾವು ಕ್ರೈಸ್ತರಾಗಿ ತರಬೇತಿಹೊಂದಲು ಬಯಸುವದಿಲ್ಲ. ಜಾನ್ ಗಾಗ್ರೇ ಅವರು ಬರೆಯುವಾಗ ಸರಿಯಾಗಿ ಬರೆದಿದ್ದಾರೆ,

> . . . ಕೆಲವು ವಿಶ್ವಾಸಿಗಳು ಸುಶಿಕ್ಷಿತರಾಗಿದ್ದಾರೆ ಮತ್ತು ಸಾಮಾಜಿಕವಾಗಿ ತಮ್ಮ ಸ್ಥಾನಿಕ ನಗರ ಅಥವಾ ಪಟ್ಟಣದಲ್ಲಿ ದೊಡ್ಡ ಸ್ಥಾನದಲ್ಲಿದ್ದಾರೆ. ಆದರೆ ನಮಗೆ ಕಳಕಳಿಯಿರುವದು ಕೆಲವರಲ್ಲಿ ಅಲ್ಲ ಹೆಚ್ಚಿನ ಸಂಖ್ಯೆಯಲ್ಲಿರುವವರಲ್ಲಿ ಮತ್ತು ಹೀಗೆ ಕ್ರಾಂತಿಯ ಒಟ್ಟಾರೆ ಗುಣಲಕ್ಷಣದಲ್ಲಿ.[11]

ಮೊದಲನೆಯ ಶತಮಾನದಲ್ಲಿ ಲೋಕದುದ್ದಕ್ಕೂ ಅನುಮತಿಸಲ್ಪಟ್ಟಿತು ಯಾಕಂದರೆ ಸಾಮ್ರಾಜ್ಯದಲ್ಲಿರುವ ಬಡ ಮತ್ತು ಕಡೆಗಣಿಸಲ್ಪಟ್ಟ ಜನರು ಕ್ರಿಸ್ತನ ಕೃಪೆ ಮತ್ತು ಕ್ಷಮಿಸುವಿಕೆಯ ಸಂದೇಶವನ್ನು ಕೇಳುವದಕ್ಕೆ ಸಿದ್ಧರಾಗಿರುವದರಿಂದ. ಈ ಬಡವರು ಮತ್ತು ಕಡೆಗಣಿಸಲ್ಪಟ್ಟವರು, ಇದಲ್ಲದೆ, ಮನೆಗಳಲ್ಲಿ ಮತ್ತು ಕಾರ್ಯಾಗಾರಗಳಲ್ಲಿ ದಾಸರಾಗಿ ಕೆಲಸ ಮಾಡಲು ಲೋಕದ ಜನರು ಈಡೀ ಲೋಕವು ಯೇಸುವೇ ಕ್ರಿಸ್ತನು ಎಂದು ಪ್ರಕಟಿಸಿದ್ದನ್ನು ಆಲಿಸುವದಕ್ಕಿಂತ ಪೂರ್ವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು.

**ವಚನಗಳು 27, 28.** ಅತ್ಯಂತ ಸಾಮಾನ್ಯವಾಗಿ, ವೀಕ್ಷಕರಲ್ಲದವರು, ಬಡವರು ಮತ್ತು ಕಡೆಗಣಿಸಲ್ಪಟ್ಟ ಕೊರಿಂಥದಲ್ಲಿರುವ ಜನರು ತಮ್ಮನ್ನು ತಾವು ರಕ್ಷಿಸಲ್ಪಟ್ಟವರಲ್ಲಿ ಎಣಿಸಿಕೊಳ್ಳುತ್ತಿದ್ದರು. ಇದು ಆಕಸ್ಮಿಕವಲ್ಲ; ಇದು ದೇವರ ಕಾರ್ಯವಾಗಿತ್ತು. **ದೇವರು ಜ್ಞಾನಿಗಳನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ, ದೇವರು ಬಲಿಷ್ಠರನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ** (1:27). ಪೌಲನು ತಾನು ಹೇಳುವದನ್ನು ಮುಂದುವರೆಸುತ್ತಾ, **ಗಣ್ಯರನ್ನು ಇಲ್ಲದಂತೆ ಮಾಡಲು ದೇವರು ಈ ಲೋಕದ ಕುಲಹೀನರನ್ನೂ ಅಸಡ್ಡೆಯಾದವರನ್ನೂ ಆರಿಸಿಕೊಂಡಿದ್ದಾನೆ** (1:28) ಎಂದು ಹೇಳುತ್ತಾನೆ. ದೇವರು ಉದ್ದೇಶಪೂರ್ವಕವಾಗಿ ಉದ್ಧಟತನದ ಜ್ಞಾನವನ್ನು ಮತ್ತು ಗಣ್ಯರನ್ನೂ ದಿಗ್ಭ್ರಮೆಗೊಳಿಸಿದ್ದಾನೆ. ಆತನು ಯಾವ ರೀತಿಯಲ್ಲಿ ಆಯ್ಕೆ ಮಾಡಿದ್ದಾನೆಂದರೆ ಆತನು ಇರುವಂಥಹ ಸಂಗತಿಗಳನ್ನು ಶ್ಯೂನೀಕರಿಸಿದ್ದಾನೆ. ದೇವರು ಲೋಕದ ಗಣ್ಯರಿಗೆ ನೀಡಿರುವ ಅಸ್ಥಿರತೆ, ಸಂಕಟ ಮತ್ತು ದೈಹೀಕ ಮರಣವನ್ನು ನೀಡಿರುವ ಸಮಯದಲ್ಲಿ ಕಡೆಗಣಿಸಲ್ಪಟ್ಟ ಉತ್ತಮವಾದ ಜನರಿಗೆ ನೀಡಿರುವ ಅರ್ಥಪೂರ್ಣ ಮತ್ತು ನೀರಿಕ್ಷೆಯಿಂದ ತುಂಬಿದ ಜೀವಿತವನ್ನು ನೀಡಿರುವ ಯಾವ ವಿಪರ್ಯಾಸವೂ ಇದಕ್ಕಿಂತ ಅಘಾದವಾದದ್ದಾಗಿಲ್ಲ. ಯೇಸು ಹೇಳಿದ್ದು ವಿಶ್ವಾಸಿಗಳು ತಮ್ಮ ಪ್ರಾಣವನ್ನು ಹಗೆಮಾಡುವಾಗ ನಿತ್ಯಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುವನು (12:24, 25). ಲೋಕದ ಜ್ಞಾನವಂತರು ಇದನ್ನು ಅರ್ಥಮಾಡಿಕೊಳ್ಳುವದಿಲ್ಲ. "ಪಾಲನು, ಕ್ರೂಜೆಯ ಬಲಹೀನತೆ ಮತ್ತು ಶಕ್ತಿಹೀನತೆಯನ್ನು ಅವರ ಸ್ವಂತ ಬಲಹೀನತೆ ಮತ್ತು ಶಕ್ತಿಹೀನತೆಗೆ ಹೋಲಿಸುತ್ತಾನೆ ಮತ್ತು ಅವರ ಸಾಮಾಜಿಕ ಬಲಹೀನತೆಯಲ್ಲಿ ದೈವೀಕ ಬಲವು ನಕ್ಷತ್ರದಂತೆ ಕಾರ್ಯ ಮಾಡುವದನ್ನು ನೋಡುತ್ತಾನೆ."[12]

ತನ್ನ ಮಗನಾದ ಯೇಸು ಕ್ರಿಸ್ತನು ಶರೀರಧಾರಿಯಾದ್ದನ್ನು ವಿಶಿಷ್ಟವಾದ ಕ್ರೈಸ್ತ ಸಿದ್ಧಾಂತವನ್ನು ದೇವರು ಧೈರ್ಯದಿಂದ ತೆಗೆದುಕೊಂಡಿದ್ದಾನೆ; ಇದು ನಂಬಿಕೆಯ

ಮೂಲಭೂತ ಸಿದ್ಧಾಂತ. ಕ್ರೈಸ್ತರು ದೇಹ ಮತ್ತು ಆತ್ಮದ ಪ್ರತ್ಯೇಕಿಸುವಿಕೆಯನ್ನು ಯಾವುದೇ ಸರಳತೆಯನ್ನು ನಿರಾಕರಿಸಿದ್ದಾರೆ. ಹೊಸ ಒಡಂಬಡಿಕೆಯ ಸಮಯದಲ್ಲಿ, ಶಿಕ್ಷಿತ ಪುರುಷರು ಒಳ್ಳೇತನ ಮತ್ತು ಪರಿಶುದ್ದತೆ ಶರೀರಧಾರಿಯಾಗಬಹುದು ಎಂಬ ಸಾಧ್ಯತೆಯ ಕುರಿತು ತಡವರಿಸುತ್ತಿದ್ದರು. ಅದನ್ನೂ ಅವರು ಇನ್ನೂ ಮಾಡುತ್ತಾರೆ, ಆಗಷ್ಟೀನ್ ಪ್ರೋಫೆರಿ ಮತ್ತು ಅಕ್ವಿಲೀಯಸ್ ನಂತಹ ತತ್ವಜಾನಿಗಳು, "ನೀವು ಯಾಕೆ ಕ್ರೈಸ್ತರಾಗಿರಲು ನಿರಾಕರಿಸುತ್ತೀರಿ?" ಎಂಬ ಪ್ರಶ್ನೆಗೆ ಇನ್ನೊಂದು ಪ್ರಶ್ನೆಯ ಮೂಲಕ ಉತ್ತರಿಸುತ್ತಾರೆ: "ಕ್ರಿಸ್ತನು ದೀನನಾಗಿ ಬಂದದ್ದರಿಂದಲೇ ಅಲ್ಲವೇ ನೀವು ಹೆಮ್ಮೆ ಪಡುವದು?" ಆಗಷ್ಟೀನ್ ಮುಂದುವರೆದು, "ಇದು ನಿಸ್ಸಂಶಯವಾಗಿ ಶಿಕ್ಷಿತ ಪುರುಷರಿಗೆ ಪ್ಲೋಟೋನ ಶಾಲೆಯಿಂದ ಕ್ರಿಸ್ತನ ಶಿಷ್ಯತ್ವದ ವರೆಗೆ ಹೋಗುವದು ತೇಜೋಭಂಗವಾಗಿದೆ."[13] ಮನುಷ್ಯನ ಪರಿಸ್ಥಿತಿಯಲ್ಲಿ ಹಾಸುಹೊಕ್ಕಾಗಿರುವ ರಹಸ್ಯಗಳನ್ನು ಹೊರತುಪಡಿಸಿ ವಿದ್ಯಾವಂತ ಪುರುಷರು ತಮ್ಮನ್ನು ತಾವು ಬುದ್ಧಿವಂತರು ಎಂದು ಪರ್ಯಾಲೋಚಿಸುವದನ್ನು ಮತ್ತು ಪರಿಗಣಿಸುವದನ್ನು ಮುಂದುವರೆಸುತ್ತಾರೆ.

**ವಚನ 29.** ಕೊರಿಂಥದವರಿಗೆ ಇರುವ ಪಾಠ ಇದಾಗಿದೆ: **ಯಾವ ಮನುಷ್ಯನು ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿಲ್ಲ.** ಸಾಮಾಜಿಕವಾಗಿ ಗಣ್ಯರು ಮತ್ತು ಸಾಮಾನ್ಯ ಮನುಷ್ಯರು ಮಾನವ ಪಾಪ, ಅಸಹಾಯಕತೆ ಮತ್ತು ಅಜ್ಞಾನಕ್ಕೆ ಕಾರಣರಾಗಿದ್ದಾರೆ. ಯಾರೊಬ್ಬರೂ ದೇವರ ರಚನೆಯನ್ನು ಸಂಶೋಧಿಸಿದ್ದೇವೆ ಎಂದು ಹೇಳಿಕೊಳ್ಳಲು ಆಗುವದಿಲ್ಲ; ಯಾರೋಬ್ಬರು ಆತನ ಮನಸ್ಸನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಕೊರಿಂಥದವರಿಗೆ ದೇವರು ತನ್ನ ಮಗನನ್ನು ರಕ್ಷಕನಾಗಿ ಕಳುಹಿಸಿದುದರ ನೇತೃತ್ವವನ್ನು ವಹಿಸಿದ್ದಾನೆ ಎಂಬುದನ್ನು ಹೊಗಳಿಕೊಳ್ಳುವದಕ್ಕೆ ಯಾವುದೇ ಆಧಾರವಿಲ್ಲ, ಆತನು ತಾನೆ ತನ್ನ ಅಪೊಸ್ತಲರನ್ನು ತನ್ನ ಸಂದೇಶವನ್ನು ಲೋಕಕ್ಕೆ ಪ್ರಕಟಿಸುವದಕ್ಕಾಗಿ ಕಳುಹಿಸಿದ್ದಾನೆ. ಈ ಕ್ರೈಸ್ತರಿಗೆ ರಕ್ಷಣೆಯು ಯಾವುದೇ ಮಾನವ ಯೋಜನೆಯಿಂದ ದೊರೆತಿಲ್ಲ. ಮಹಿಮೆಯು ದೇವರಿಗೆ ಮಾತ್ರ ಸಲ್ಲಬೇಕು.

ಹೊಗಳಿಕೊಳ್ಳುವದು ನಾಚಿಕೆಪಡುವದಕ್ಕೆ ವಿರುದ್ಧ ಪದವಾಗಿದೆ. ಅದು ಆಂತರಿಕ ಮಾನಸಿಕ ಪ್ರಕ್ರಿಯೆಯನ್ನು ಉಲ್ಲೇಖಿಸುವದಿಲ್ಲ; ಎರಡೂ, ಒಬ್ಬನೂ ಸ್ನೇಹಿತರಿಂದ, ಸಂಬಂಧಿಗಳಿಂದ ಮತ್ತು ನೆರೆಹೊರೆಯವರಿಂದ ಹೊಂದಿಕೊಳ್ಳುವ ಗೌರವದ ಕುರಿತಾಗಿದೆ. ಯೇಸು ಔತಣದಲ್ಲಿ ಉತ್ತಮವಾದ ಸ್ಥಾನವನ್ನು ಅಪೇಕ್ಷಿಸಿದವರಿಗೆ ಆಗುವ ಸ್ಥಿತಿಯನ್ನು ಸಾಮ್ಯದ ಮೂಲಕ ಹೇಳಿದ್ದಾನೆ. ಆತನು ಔತಣಕ್ಕೆ ಕರೆದವನು "ನಿನ್ನ ಸ್ಥಾನವನ್ನು ಈ ಗಣ್ಯನಿಗೆ ಬಿಟ್ಟುಕೊಡು" ಎಂದು ಹೇಳಿದರೆ ನಿನಗೆ ಎಷ್ಟು ಅವಮಾನವಾಗುತ್ತದೆ." ಯೇಸು "ನಾಚಿಕೆಯಿಂದ ನೀನು ಕಡೆಯ ಸ್ಥಾನದಲ್ಲಿ ಕೂತುಕೊಳ್ಳಲು ಹೋಗುವಿ" (ಲೂಕ 14:9) ಎಂದು ಸೇರಿಸಿದ್ದಾನೆ. ಉತ್ತಮವಾದ ಸ್ಥಾನವನ್ನು ಆಯ್ಕೆ ಮಾಡುವಾಗ, ಒಬ್ಬನು ತನ್ನ ಸಹ ಅತಿಥಿಯ ಹೊಗಳುವಿಕೆಯನ್ನು ಮತ್ತು ಮೆಚ್ಚಿಕೆಯನ್ನು ಹೆಮ್ಮೆಯಿಂದ ಹುಡುಕುತ್ತಿರಬಹುದು; ಕಡೆಯ ಸ್ಥಾನಕ್ಕೆ ಹೋಗುವದರ ಪರಿಣಾಮ ಅದೇ ಸಹವಾಸದಲ್ಲಿ ನಾಚಿಕೆಯನ್ನು ಅನುಭವಿಸುವದಾಗಿದೆ. "ನಾಚಿಕೆ" ಎಂಬ ಪದಕ್ಕೆ ಗ್ರೀಕ್ ಪದ ಇಂಗ್ಲೀಷ ಪದ "ಅವಮಾನ" ಮತ್ತು "ಅಗೌರವ" ಎಂಬ ಪದದ ಅರ್ಥವನ್ನು ನೀಡುವದಾಗಿದೆ. ಪೌಲನು ಹೊಗಳಿಕೊಳ್ಳುವದು ಮತ್ತು ನಾಚಿಕೆ ಈ ಪದಗಳ ಸಾಮಾಜಿಕ ಸ್ವರೂಪವನ್ನು

ಯೋಚಿಸುತ್ತಿದ್ದಾನೆ. ಕ್ರೂಜೆಯ ಕುರಿತಾಗಿ ಪ್ರಸಂಗಿಸುವದು ಕೊರಿಂಥದ ಕ್ರೈಸ್ತರಿಗೆ ಸಾರ್ವಜನಿಕವಾಗಿ ಹೊಗಳಿಕೆಯನ್ನು ಹೊಂದುವ ಪರಿಣಾಮವನ್ನು ನೀಡುವದಾಗಿರಲಿಲ್ಲ. ಕ್ರಿಸ್ತನಲ್ಲಿ "ಯಾವ ಮನುಷ್ಯನಿಗೆ ಹೊಗಳಿಕೊಳ್ಳಲು ಆಸ್ಪದವಿಲ್ಲ." ಕ್ರಿಸ್ತನ ಬಳಿಗೆ ಬರಲು ಪಾಪಗಳ ಮತ್ತು ಅಸಹಾಯಕತೆ ಅರಿಕೆ ಅವಶ್ಯವಾಗಿದೆ.

**ವಚನ 30.** ಪೌಲನು ಮತ್ತು ಆತನ ಓದುಗರು **ಕ್ರಿಸ್ತನಲ್ಲಿದ್ದರು**, ಆದರೆ ಈ ಹೇಳಿಕೆಯ ಕುರಿತು ಹೊಗಳಿಕೊಳ್ಳುವದಕ್ಕೆ ಯಾವ ಸಂದರ್ಭವೂ ಇರಲಿಲ್ಲ. "ಕ್ರಿಸ್ತನಲ್ಲಿ ಇದ್ದರು" ಆತನ **ಕಾರ್ಯಗಳಿಂದಾಗಿ**. ದೇವರು ನೇತೃತ್ವವನ್ನು ತೆಗೆದುಕೊಂಡು ಅವರನ್ನು ರಕ್ಷಿಸಿದನು. ಕೊರಿಂಥದವರನ್ನು **ನೀವು** ತೀವ್ರವಾಗಿ ಲೋಕದ ಬುದ್ಧಿವಂತರೊಂದಿಗೆ ವ್ಯತ್ಯಾಸವನ್ನು ತೋರಿಸಲು ಒತ್ತಿಹೇಳಿರುವದು (ὑμεῖς, *humeis*). "ಕ್ರಿಸ್ತನಲ್ಲಿ ಇದ್ದರು" ಎಂದು ಹೇಳಿರುವದರ ಅರ್ಥ ಅವರಲ್ಲಿ ಇರುವ ಎಲ್ಲವೂ ಪುನರುತ್ಥಾನ ಹೊಂದಿದ ಕರ್ತನೊಂದಿಗೆ ಅವರಿಗಿರುವ ಸಂಬಂಧವನ್ನು ವ್ಯಾಖ್ಯಾನಿಸುತ್ತದೆ: ಅವರ ಜೀವಿತಗಳು, ಸಮುದಾಯದ ನಿರೀಕ್ಷೆಯಾಗಿ ಅವರ ಭವಿಷ್ಯತ್ತು ಆತನಲ್ಲಿತ್ತು. ಆತನು ವಿಮೋಚನೆ ಮತ್ತು ನಿರೀಕ್ಷೆ ಎರಡರ ಆಧಾರ ಮತ್ತು ಮೂಲನಾಗಿದ್ದನು. ಆದುದರಿಂದ, ಕ್ರಿಸ್ತನು **ನಮಗೆ ದೇವರಿಂದ ಬಂದ ಜ್ಞಾನವಾಗಿದ್ದಾನೆ**. ಪೌಲನಿಗೆ ಪೌಲನಲ್ಲಿರುವದು ಮೂಲಸ್ವರೂಪದ ಬದಲಾವಣೆಯಾಗಿದೆ. ಎಲ್ಲಾ ನಿಷ್ಠೆ, ತಿಳುವಳಿಕೆ ಮತ್ತು ಮಮತೆ ಆತನಲ್ಲಿ ಕೇಂದ್ರಿಕೃತವಾಗಿವೆ.

"ದೇವರಿಂದ ಬಂದ ಜ್ಞಾನವನ್ನು" NASB ಹೀಗೆ ಪ್ರಸ್ತುತಪಡಿಸುತ್ತದೆ. **ನೀತಿವಂತಿಕೆ ಮತ್ತು ಶುದ್ಧೀಕರಣ ಮತ್ತು ವಿಮೋಚನೆಗೆ** ಸಮಾನವಾದ ವ್ಯಕ್ತಪಡಿಸುವಿಕೆ. NRSV ಸಹ ಇದನ್ನೇ ಹೇಳುತ್ತದೆ ಆದರೆ NIV ಅನುವಾದಕರು ವಚನವನ್ನು ಚಿಹ್ನೆಗಳನ್ನು ವಿಭಿನ್ನವಾಗಿ ನೀಡಿ "ದೇವರಿಂದ ಬಂದ ಜ್ಞಾನವನ್ನು" ಇತರ ಕಲ್ಪನೆಗಳೊಂದಿಗೆ ಭಿನ್ನತೆಯನ್ನು ತೋರಿಸಿದ್ದಾರೆ. ಆದುದರಿಂದ, ಅವರು ವಚನವನ್ನು ". . . ಕ್ರಿಸ್ತ ಯೇಸವು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು." ಎಂದು ನೀಡುತ್ತಾನೆ. ಪೌಲನು ಲೋಕದ ಜ್ಞಾನ ಮತ್ತು ಕ್ರಿಸ್ತನಿಂದ ಬಂದ ಜ್ಞಾನ ಇವುಗಳ ಮಧ್ಯದಲ್ಲಿ ತೀವ್ರವಾದ ವ್ಯತ್ಯಾಸವನ್ನು ಎಳೆಯುತ್ತಾನೆ ಅದನ್ನು NIV ನಮಗೆ ಈ ರೀತಿಯಾಗಿ ಸರಿಯಾದ ಅರ್ಥದಲ್ಲಿ ಹೇಳುತ್ತದೆ.

## ಸಾರಾಂಶ (1:31)

**31 ಹೆಚ್ಚಳಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ ಎಂಬ ದೇವೋಕ್ತಿ ನೆರವೇರುವದಕ್ಕೆ ಇದರಿಂದ ಮಾರ್ಗವಾಯಿತು.**

**ವಚನ 31.** ಅಪೊಸ್ತಲನು ಕ್ರೂಢಿಕರಿಸಿ ಮತ್ತು ತತ್ವಶಾಸ್ತದ ಜ್ಞಾನಕ್ಕೆ ಮತ್ತು ಲೋಕದ ಕಲಿಯುವಿಕೆಗೆ ತನ್ನ ತಿರಸ್ಕಾರಕ್ಕೆ ಒತ್ತು ನೀಡಿ ಕೊರಿಂಥದಲ್ಲಿರುವ ಕ್ರೈಸ್ತರನ್ನು ಮಾನವನು ಸ್ವ-ಅವಲಂಭನೆಯನ್ನು ಬಿಟ್ಟುಬಿಡಬೇಕೆಂದು ಬೇಡಿಕೊಳ್ಳುತ್ತಾನೆ. ಅವನು ಯೆರೆಮೀಯ 9:23 ರನ್ನು LXX ರಿಂದ ಉಲ್ಲೇಖಿಸುತ್ತಾನೆ ಆದರೆ ಅಳವಡಿಸುವಿಕೆಯು ಪ್ರವಾದಿಯ ಬೇಡಿಕೆಗೆ ಯಾವುದೇ ಕ್ರಾಂತಿಯನ್ನು ಮಾಡುವದಿಲ್ಲ. ಮಾನವನ ಜ್ಞಾನ, ಬಲ ಮತ್ತು ಗೌರವದಲ್ಲಿ ಹೆಚ್ಚಳ ಪಡುವದಕ್ಕೆ ಯಾವ ಕಾರಣವನ್ನೂ ಒದಗಿಸುವದಿಲ್ಲ. ಕ್ರೈಸ್ತರ

ಮಹಿಮೆಯು ಕ್ರೂಜಿತನಾದ ರಕ್ಷಕನಲ್ಲಿ. ಪೌಲನು **ಹೆಚ್ಚಳಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ** ಎಂದು ಹೇಳುತ್ತಾನೆ (ಯೆರೆಮೀಯ 9:23, 24). ನಜರೇತಿನ ಯೇಸುವಿನಲ್ಲಿ ಹೆಚ್ಚಳಪಡುವದು ಶ್ರೇಷ್ಠವಾದ ವ್ಯಂಗವಾಗಿದೆ: ಅವನು ಪರಂಪರೆ ಒಳ್ಳೇಯ ಅದೃಷ್ಟವಿಲ್ಲದ, ಸಂಚಾರಿ ಬೋಧಕನಾಗಿದ್ದನು. ಯೇಸು ಲೌಕಿಕ ಹೆಸರು, ಬಲ ಮತ್ತು ತಿಳುವಳಿಕೆಗಳನ್ನು ಅಲ್ಲಗಳೆಯುತ್ತಾನೆ; ಆತನಂತೆ ಆಗುವದಕ್ಕಾಗಿ, ಆತನ ಸಭೆಯು ಇದ್ದನ್ನೇ ಮಾಡಬೇಕು.

## ಅನ್ವಯಿಸುವಿಕೆಗಳು

### ಪ್ರೇರಣೆ ಮತ್ತು ನೆನಪಿನ ಶಕ್ತಿ (1:14-16)

ಪೌಲನು ತಿಮೋಥಿಗೆ ಹೇಳುತ್ತಾನೆ, ಸತ್ಯವೇದವು ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು (2 ತಿಮೋಥಿ 3:16) ಅವನಿಗೆ ತನ್ನ ಸ್ವಂತ ಪ್ರೇರಣೆಯ ಪ್ರಜ್ಞೆಯಿದೆ (1 ಕೊರಿಂಥ 2:13). ಯಾಕಂದರೆ ಸತ್ಯವೇದವು ದೈವಪ್ರೇರಿತವಾದದ್ದು, ಕ್ರೈಸ್ತರು ಅದರ ಪದಗಳನ್ನು ನೈತಿಕ ಮತ್ತು ಸಿದ್ಧಾಂತಗಳ ಮಾರ್ಗದರ್ಶನಕ್ಕೆ ಕೇಂದ್ರವಾಗಿ ನೋಡುತ್ತಾರೆ. ಪ್ರೇರಣೆಯ ಪ್ರಶ್ನೆಗಳು ಮತ್ತು ನಿಯಮಗಳನ್ನು ಸತ್ಯವೇದ ಆಧಾರಿತ ಅಧಿಕಾರದೊಂದಿಗೆ ಮಾಡಬೇಕು. ಹ್ಯಾಗು, ಪೌಲನಾಗಲಿ ಸತ್ಯವೇದದ ಇತರ ಲೇಖಕರಾಗಲಿ ಪ್ರೇರೆಪಣೆಹೊಂದಿ ತಮ್ಮ ದಾಖಲೆಗಳನ್ನು ಉತ್ಪಾದಿಸುವಾಗ ಲೇಖಕರ ಮನಸ್ಸಿನ್ನಲ್ಲಿ ಪವಿತ್ರಾತ್ಮನು ನಡೆಸಿದ ಸವಂಹನದ ರಹಸ್ಯ ಪ್ರಕ್ರಿಯೆಯನ್ನು ವಿವರಿಸಿದ್ದಾರೆ.

ಪ್ರೇರಣೆಯ ಸ್ವರೂಪವನ್ನು ತಿಳಿಯುವದು ಅವಶ್ಯವಾಗಿದೆ ಯಾಕಂದರೆ ಸತ್ಯವೇದದ ಅಧಿಕಾರ ಮಹತ್ವವುಳ್ಳದ್ದಾಗಿದೆ. ತಾನು ಕ್ರಿಸ್ಪನಿಗೆ ಗಾಯನಿಗೆ ದೀಕ್ಷಾಸ್ನಾನವನ್ನು ನೀಡಿದ್ದೇನೆ ಎಂದು ಅಪೊಸ್ತಲನು 1:14ರಲ್ಲಿ ಉಲ್ಲೇಖಿಸಿದ್ದಾನೆ ಮತ್ತು ತನ್ನನ್ನು ತಾನು ತಿದ್ದಿಕೊಂಡು ಸ್ತೇಫನನ ಮನೆಯವರಿಗೂ ದೀಕ್ಷಾಸ್ನಾನ ನೀಡಿದ್ದೇನೆ ಎಂದು ಹೇಳುತ್ತಾ 1:16ರಲ್ಲಿ ತನ್ನ ಸ್ವಂತ ಜ್ಞಾಪಕಶಕ್ತಿಯಲ್ಲಿ ಬಿಟ್ಟುಹೋದ ಸಂಗತಿಗಳಿಗೆ ಸ್ಥಳವನ್ನು ಅನುಮತಿಸುತ್ತಾನೆ, ಇದು ಪವಿತ್ರಾತ್ಮನು ಕೇವಲ ಆತನ ಮನಸ್ಸನ್ನು ನಿಯಂತ್ರಣದಲ್ಲಿ ತೆಗೆದುಕೊಳ್ಳಲಿಲ್ಲ; ಇಲ್ಲವೇ ಪವಿತ್ರಾತ್ಮನು ಜ್ಞಾಪಕಶಕ್ತಿಯನ್ನು ಕಳೆದುಕೊಳ್ಳುತ್ತಾನೆ ಎಂದು ಯಾರೂ ವಾದಿಸುವದಿಲ್ಲ. ಪೌಲನಲ್ಲಿ ಪವಿತ್ರಾತ್ಮನ ಪ್ರೇರಣೆಯು ಆತನ ಸ್ವಂತ ಜ್ಞಾಪಕಶಕ್ತಿಯ ಮಿತಿಯಲ್ಲಿಯೇ ಸಭೆಯ ವಿಶಿಷ್ಟವಾದ ಅವಶ್ಯಕತೆಗಳು ಮತ್ತು ತಾನು ವಾಸಿಸುತ್ತಿರುವ ಲೋಕದ ಸಾಮಾಜಿಕ ಮತ್ತು ಸಾಂಸ್ಕಂತಿಕ ಹಿನ್ನೆಲೆಯಲ್ಲಿ ಕಾರ್ಯ ಮಾಡುತ್ತದೆ. ಇವೆಲ್ಲವೂ ಇಂದು ಓದುಗರು ಹೇಗೆ ಅಧಿಕಾರ ಮತ್ತು ಮಾರ್ಗದರ್ಶನವನ್ನು ಪಡೆದುಕೊಳ್ಳಬೇಕು ಎಂಬುದಕ್ಕೆ ಸಿದ್ಧಾಂತ ಮತ್ತು ವರ್ತನೆಯ ಕುರಿತು 1 ಕೊರಿಂಥದವರಿಗೆ ಬರೆದ ಪತ್ರಕೆಯಲ್ಲಿ ಮಹತ್ವದ ಸೂಚನೆಗಳನ್ನು ಹೊಂದಿವೆ.

ಬರೆಯಲ್ಪಟ್ಟ ದಾಖಲೆಯನ್ನು ಸೃಷ್ಟಿಸಿದವರಲ್ಲಿ "1 ಕೊರಿಂಥದವರಿಗೆ" ಎಂದು ಕರೆದ ಪ್ರಪ್ರಥಮ ಬರಹಗಾರನಾಗಿದ್ದಾನೆ. ಕೊರಿಂಥದಲ್ಲಿರುವ ತಕ್ಷಣದ ಶೋತ್ರುಗಳು ಅಪೊಸ್ತಲನ ಸಮಕಾಲೀನರು ಎರಡನೆಯ ಪಕ್ಷದವರಾಗಿದ್ದಾರೆ. ಅನಂತರ ಬಂದ ಓದುಗರು ಬರೆಯಲಿಲ್ಲ ಅಥವಾ ಇದನ್ನು ಸಮಾಚಾರವಾಗಿ ಹೊಂದಿಕೊಳ್ಳಲಿಲ್ಲ ನೇರವಾಗಿ ಅವರಿಗೆ ಸಂಭೋದಿಸಿದೆ ಅವರು ಮೂರನೆಯ ಪಕ್ಷದವರಾಗಿದ್ದಾರೆ, ಮೂರನೆಯ ಪಕ್ಷದ

ಓದುಗರಾದ ನಮಗೆ, ಅಧಿಕಾರಯುತವಾದ ಮಾರ್ಗದರ್ಶನವನ್ನು 1 ಕೊರಿಂಥ ಪತ್ರಿಕೆಯಿಂದ ಹೊಂದಲು, ನಾವು ಪ್ರಪ್ರಥಮ ಓದುಗರು ಯಾವ ರೀತಿಯಲ್ಲಿ ತಿಳುದುಕೊಂಡಿದ್ದಾರೆ ಎಂಬುದನ್ನು ಮೊದಲು ತಿಳಿದುಕೊಳ್ಳಲು ಪ್ರಯತ್ನಿಸಬೇಕು ನಾವು ನಮ್ಮ ಸ್ವಂತ ಲೋಕ ಯಾವುದಾಗಿದೆ ಮತ್ತು ಮೊದಲನೆಯ ಓದುಗರ ಲೋಕ ಯಾವುದಾಗಿತ್ತು ಮತ್ತು ಇಬ್ಬರಲ್ಲಿಯೂ ಸಾಮಾನ್ಯವಾಗಿರುವ ಅಂಶವೇನು ಮತ್ತು ಎರಡೂ ಲೋಕಗಳು ಹೇಗೆ ಭಿನ್ನವಾಗಿದ್ದವು ಎಂಬುದನ್ನು ನಿರ್ಧರಿಸಬೇಕು. ಮತ್ತು ನಾವು ಅಧಿಕಾರಯುತ ಮಾರ್ಗದರ್ಶನವನ್ನು ವೇದವಾಕ್ಯದಿಂದ ಹುಡುಕುವಾಗ ಇಂದು ಸಭೆಗಳು ಎದುರಿಸುತ್ತಿರುವ ಹಂಬಲಗಳು ಪೌಲನು ಸಂಭೋಧಿಸಿದ ಹಂಬಲಗಳು ವ್ಯತ್ಯಾಸವಾಗಿವೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿರುವದು ಅವಶ್ಯವಾಗಿದೆ. ಉದಾಹರಣೆಗೆ, ಸಭೆಯಲ್ಲಿ ಐಕ್ಯತೆಯ ಹಂಬಲ (1:10; 11:18) ಮತ್ತು ಅನೈತಿಕ ನಡತೆ (6:9-11) ಒಂದೇರೀತಿಯಾಗಿ ಉಳಿದಿವೆ, ಅದೇಸಮಯದಲ್ಲಿ ಸ್ತ್ರೀಯರು ಮಸುಕುಹಾಕಿಕೊಳ್ಳುವದರ ಕುರಿತಾದ ಹಂಬಲ (11:5-16) ಗಣನೀಯವಾಗಿ ವಿಭಿನ್ನವಾಗಿದೆ.

## ಸಭೆ ಮತ್ತು ಅದರ ಸಾರ್ವಜನಿಕ ಸ್ವರೂಪ (1:17)

ಇಂದು ಇರುವ ಸಹಕಾರ ಲಕ್ಷಗಳಷ್ಟು ಡಾಲರ್‌ಗಳನ್ನು ಸಾರ್ವಜನಿಕ ಸ್ವರೂಪದ ಮೇಲೆ ವ್ಯಯಮಾಡುತ್ತದೆ. ಸ್ವರೂಪವು ತಾತ್ಪರ್ಯಕ್ಕಿಂತ ಗ್ರಹಿಕೆಗೆ ಮಹತ್ವವನ್ನು ನೀಡುತ್ತದೆ. ಒಂದು ಕಂಪನಿ ತಾನು ಗೌರವ ಹೊಂದಿದ ಸಂಸ್ಥೆಯಾಗಿದ್ದೇನೆ ಎಂಬ ಗೌರವವನ್ನು ಕಾಪಾಡಿಕೊಳ್ಳುವವರೆಗೆ ಸಾರ್ವಜನಿಕರಿಗೆ ಸುಳ್ಳು ಹೇಳಬಹುದು ಮತ್ತು ತನ್ನ ನೌಕರರಿಗೆ ಮೋಸಮಾಡಬಹುದು. ಅದರಂತೆ, ಕೊರಿಂಥದಲ್ಲಿರುವ ಸಭೆ ತನ್ನ ಸಾರ್ವಜನಿಕ ಸ್ವರೂಪದ ವಿಷಯದಲ್ಲಿ ಕಳಕಳಿಯನ್ನು ಹೊಂದಿತ್ತು ಅದು ಅದರ ತಾತ್ಪರ್ಯವಾಗಿತ್ತು. ಪೌಲನು ಅವರ ದೃಷ್ಟಿಯನ್ನು ಬದಲಿಸಲು ಬಯಸುತ್ತಾನೆ.

ಪೌಲನಿಗೆ, “ವಾಕ್ಚಾತುರ್ಯ” (1:17) ಮತ್ತು ತತ್ವಶಾಸ್ತ್ರ ಆಧಾರಿತ ಗೌರವವನ್ನು ಲೋಕದ ಅಳತೆಗೋಲಿನಿಂದ ಅಳೆಯವದು ಪ್ರಥಮ ಪ್ರಾಮುಖ್ಯತೆಯಾಗಿರಲಿಲ್ಲ. ಕರ್ತನ ಸಭೆಗೆ ಮತ್ತು ತನ್ನ ಚಿರಪರಿಚಿತ ಸದಸ್ಯರಿಗೆ ಮತ್ತು ವಾಕ್ಚಾತುರ್ಯದ ಪ್ರಸಂಗಿಗಳು ಕಡಿಮೆ ಮಹತ್ವವನ್ನು ಹೊಂದಿದ್ದಾರೆ ಎಂದು ಆತನು ಇಂದು ಕರ್ತನ ಸಭೆಗೆ ಹೇಳುತ್ತಿರಬಹುದು. ಇಲ್ಲಿ ಹೆಚ್ಚು ಸಂಬಂಧಪಡುವದು ಯಾವುದೆಂದರೆ ಕ್ರೈಸ್ತರು ತಮ್ಮ ಮನಸ್ಸಿನಲ್ಲಿ ಕೊಂಡೊಯ್ಯುವ ಗ್ರಹಿಕೆಗಳು ಮತ್ತು ಅವರ ಪರಿಶುದ್ಧವಾದ ಜೀವಿತ ಅವರ ತಮ್ಮನ್ನು ತಾವು ನಿರ್ವಹಿಸುವ ವಿಧಾನ ಸುವ್ಯಕ್ತವಾಗುತ್ತದೆ. ದೇವರ ಹಂಬಲ ಸಾರ್ವಜನಿಕ ಸ್ವರೂಪವಲ್ಲ; ಆತನು ಸಭೆಯ ಹೃದಯವನ್ನು ಬಲ್ಲಾತನಾಗಿದ್ದಾನೆ.

## ಕ್ರೂಜೆಯ ಸಂದೇಶ (1:21)

1:21, KJV ಯಲ್ಲಿ “. . . ಹುಚ್ಚು ಮಾತು ಎಣಿಸಿಕೊಂಡಿರುವ ನಮ್ಮ ಪ್ರಸಂಗದಿಂದಲೇ ನಂಬುವವರನ್ನು ರಕ್ಷಿಸುವದು ದೇವರಿಗೆ ಒಳ್ಳೇದೆಂದು ತೋಚಿತು” ಎಂದು ಹೇಳುತ್ತದೆ. NASB ಈ ವಚನದ ಒತ್ತಡವನ್ನು ಉತ್ತಮವಾಗಿ ಸೆರೆಹಿಡಿಯುತ್ತದೆ “. . . ದೇವರು ನಂಬುವವರನ್ನು ರಕ್ಷಿಸಲು ಪ್ರಸಂಗಿಸಿದ ಸಂದೇಶದ ಹುಚ್ಚುತನವನ್ನು

ದೇವರು ಮೆಚ್ಚಿಕೊಂಡಿದ್ದಾನೆ," ಪೌಲನು ವ್ಯಕ್ತಪಡಿಸುತ್ತಿರುವ ವ್ಯಂಗವೆಂದರೆ ಲೋಕವು ಪ್ರಸಂಗಿಸಿದ ಸಂದೇಶವನ್ನೇ ಹುಚ್ಚುತನವೆಂದು ನೋಡುವದಲ್ಲ. ಆತನು ಹೆಚ್ಚಾಗಿ ಒತ್ತುನೀಡುತ್ತಿರುವದು ಹೊಂದಿಕೊಂಡ ಸುವಾರ್ತೆಯ ಬಲವನ್ನು. ಯೇಸು ತನ್ನ ಶಿಷ್ಯರನ್ನು ಕ್ರೂಜೆಯ ವಿಷಯವನ್ನು ಸಾರುವದರ ಮೂಲಕ ಲೋಕವನ್ನು ದೇವರ ಬಳಿಗೆ ತರಬೇಕೆಂದು ಕಳುಹಿಸಿಕೊಟ್ಟನು (ಮತ್ತಾಯ 28:19, 20). ಮಹತ್ತರವಾದ ನಿಯೋಗವು ಸಭೆಗೆ ಮುನ್ನಡೆಯಲು ನೀಡಿದ ಆಜ್ಞೆಯಾಗಿ ಮುಂದುವರೆಯುತ್ತದೆ.

ಕ್ರೂಜೆಯನ್ನು ಸಾರುವದು ಯಾವಾಗಲೂ ನಿರ್ಧಾರವನ್ನು ಮಾಡುವದಕ್ಕೆ ತೆಗೆದುಕೊಳ್ಳುವ ನಿರ್ಧಾರಕ್ಕೆ ಕರೆಯಾಗಿದೆ. ಸುವಾರ್ತೆಯ ಕರೆಯುವಿಕೆಯನ್ನು ಭೌದ್ಧಿಕವಾದದ್ದೆಂದ ವಿಶ್ಲೇಷಿಸುವಾಗ ಲೌಕಿಕ ತತ್ವಜ್ಞಾನಗಳ ಮೂಲೆ ಮೂಲೆಗಳನ್ನು ತೂಕಮಾಡುವದು ಆತ್ಮೀಕ ಮರಣವಾಗಿದೆ. ದೇವರು ಯೇಸುವನ್ನು ಮಾನವ ಕುಲವನ್ನು ವಿಮೋಚಿಸುವದಕ್ಕಾಗಿ ಕಳುಹಿಸಿದನು. ಕರ್ತನು ತಂದೆಯ ಚಿತ್ತವನ್ನು ನೆರವೇರಿಸಿದನು. ದೇವರು ಆಯ್ಕೆ ಮಾಡುವ ಸಮಯದಲ್ಲಿ, ಯೇಸು ತಿರುಗಿಬರುತ್ತಾನೆ; ಆ ಸಮಯದಲ್ಲಿ, ಸುವಾರ್ತೆಯು ರಕ್ಷಿಸಲ್ಪಟ್ಟವರ ಹಸ್ತಗಳಲ್ಲಿ ಬಿಡಲಾಗಿದೆ. ಕ್ರಿಸ್ತನನ್ನು ಪ್ರಸಂಗಿಸುವದು ಆಲಿಸುವವರು ಕರ್ತನ ಕಡೆಗೆ ತಿರುಗಿಕೊಳ್ಳುವ ನಿರ್ಧಾರವನ್ನು ಮಾಡುವದಕ್ಕೆ ಕರೆ ನೀಡುವದಾಗಿದೆ, ಅವರಿಗೆ ಸುವಾರ್ತೆಗೆ ವಿಧೇಯರಾಗಲು ಮತ್ತು ದೈವೀಕ ಜೀವಿತವನ್ನು ಜೀವಿಸಲು ಬೇಡಿಕೊಳ್ಳುವದಾಗಿದೆ.

---

**ಟಿಪ್ಪಣಿಗಳು**

[1]ಗೋರಡೋನ್ ಡಿ. ಫೀ ಪೌಲ ಮತ್ತು ಕೊರಿಂಥದ ಸಭೆಯ ಮದ್ಯದಲ್ಲಿರುವ ಆ ಗಲಭೆಯೇ ಈ ಪತ್ರವನ್ನು ಬರೆಯುವದಕ್ಕೆ ಮೂಲ ಕಾರಣ ಎಂದು ಹೇಳುತ್ತಾನೆ. ಅವನ ಪ್ರಕಾರ, ಪೌಲನು ತನ್ನ ಅಪೊಸ್ತಲತ್ವದ ಖಚಿತವಾದ ಹೇಳಕೆಯ ಮೂಲಕ ತನ್ನ ಅಧಿಕಾರಕ್ಕೆ ಒತ್ತು ನೀಡುತ್ತಾನೆ ಎಂದು ವಾದಿಸುತ್ತಾನೆ. (ಗೋರಡೋನ್ ಡಿ. ಫೀ, *ಕೊರಿಂಥಿಯರಲ್ಲಿ ಮೊದಲನೆಯ* ಅಪೊಸ್ತಲನು, ಹೊಸ ಒಡಂಬಡಿಕೆಯ ಮೇಲೆ ಬರೆದಿರುವ ದ ನ್ಯೂ ಇಂಟರನ್ಯಾಶನಲ್ ಕಮೆಂಟರಿ [Grand Rapids, Mich.: Wm. B. Eerdmans Publishing Co., 1987], 28-30.) ಪೌಲನು ಮತ್ತು ಕೊರಿಂಥದಲ್ಲಿರುವ ಕೆಲವು ಸಂಗತಿಗಳ ಮಧ್ಯದಲ್ಲಿ ಗಲಿಬಿಲಿಯಿತ್ತು ಎಂಬುದಕ್ಕೆ ಸಾಕ್ಷಿಗಳಿವೆ, ಆದರೆ ಪತ್ರದ ಎಲ್ಲಾ ಭಾಗದಲ್ಲಿಯೂ ಈ ಗಲಿಬಿಲಿಗೆ ಹೆಚ್ಚು ಒತ್ತು ನೀಡಲಾಗಿದೆ ಎಂದು ಕಂಡುಬರುವದಿಲ್ಲ. [2]LXX,ರಲ್ಲಿ ಅಥವಾ ಸೆಪ್ಟಾಜೆಂಟ ಸತ್ಯವೇದದಲ್ಲಿರುವ ಹಳೆ ಒಡಂಬಡಿಕೆಯ ವೇದವಾಕ್ಯದ ಗ್ರೀಕ್ ಅನುವಾದವಾಗಿದೆ. [3]ವಿಕ್ಟರ್ ಪೌಲ ದೈವಶಾಸ್ತ್ರ ಮತ್ತು *ನೀತಿಶಾಸ್ತ್ರವನ್ನು ಪೌಲನಲ್ಲಿ* ಒದಗಿಸುತ್ತಾರೆ (Nashville: Abingdon Press, 1968), 155. [4]ಹೊರಗೆ ಗಲಾತ್ಯ ಮತ್ತು 1 ಕೊರಿಂಥದಲ್ಲಿ ಪ್ರಾಮುಖ್ಯರಾಗಿದ್ದದರಿಂದ, ಪೇತ್ರನನ್ನು "ಕೇಫ" ನೆಂದು ಕೇವಲ ಯೋಹಾನ 1:42ರಲ್ಲಿ ಕರೆಯಲಾಗಿದೆ. ಅವನನ್ನು ಸಾಂಧರ್ಬಿಕವಾಗಿ "ಪೇತ್ರ" ಎಂದು ಕರೆಯುತ್ತಿದ್ದರು "ಕೇಫ" ಇದು ಅಪೊಸ್ತಲನು ಆದ್ಯತೆ ನೀಡಿದ ಹೆಸರಾಗಿತ್ತು. [5]Gerd Theissen, *The Social Setting of Pauline Christianity: Essays on Corinth*, ed. and trans. John H. Schütz (Philadelphia: Fortress Press, 1982), 55. [6]I. Howard Marshall, *New Testament Theology: Many Witnesses, One Gospel* (Downers Grove, Ill.: InterVarsity Press, 2004), 268. [7]ಕೊನೆಯ ಪದವನ್ನು ಹೊರತುಪಡಿಸಿ, ಪಾಲ್ನ ಉಲ್ಲೇಖವು ಯೆಶಾಯ 29:14ರಲ್ಲಿ LXX ನಲ್ಲಿದೆ. ದೇವರ ಹೇಳಿಕೆಯ ಬದಲಿಗೆ, "ಬುದ್ಧಿವಂತಿಕೆಯ ಬುದ್ಧಿವಂತಿಕೆ ಯನ್ನು ನಾನು ಪಕ್ಕಕ್ಕೆ ಹಾಕಿಸುತ್ತೇನೆ" (ἀθετήσω, *athetēsō*) ಎಲ್ಎಕ್ಸ್ಎಕ್ಸ್ "ನಾನು ಮರೆಮಾಡುತ್ತೇನೆ . . ." (κρύψω, *krupsō*). [8]ಲಿಯೋನ ಮೋರಿಸ್, ಪೌಲನು ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರಕೆ, rev. ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 46. [9]ಬರ್‍ರ್ರವರ್ಡ

ಎಸ್. ಚೈಲ್ಡ್ಸ್, ಹಳೆ ಮತ್ತು ಹೊಸ ಒಡಂಬಡಿಕೆಯ ಸತ್ಯವೇದ ಆಧಾರಿತ ದೈವಜ್ಞಾನಶಾಸ್ತ್ರ: ಕ್ರೈಸ್ತ ಸತ್ಯವೇದ ದೈವಜ್ಞಾನಶಾಸ್ತ್ರ ಆಧಾರಿತ ಪ್ರತಿಛಾಯೆ (Minneapolis: Fortress Press, 1992), 512. [10]Origen *Against Celsus* 3.55.

[11]ಜಾನ್ ಗಾಗ್ರೇಯವರ, "ನಾವು ನಮ್ಮ ವೈರಿಗಳನ್ನು ಮದುವೆಯಾಗೋಣವೇ?: ಸಮಾಜಶಾಸ್ತ್ರ ಮತ್ತು ಹೊಸ ಒಡಂಬಡಿಕೆ," ಅರ್ಥೈಸುವಿಕೆ 36 (July 1, 1982): 262. [12]Troels Engberg-Pedersen, "The Gospel and Social Practice according to 1 Corinthians," *New Testament Studies* 33 (October 1987): 562. [13]Augustine *City of God* 10.29.